# ಅಧ್ಯಾಯ–III

# ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

# ಅಧ್ಯಾಯ – III

## 3. ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

ರಾಜ್ಯ ಸರ್ಕಾರದ ಕಂಪನಿಗಳು ಮತ್ತು ಶಾಸನಬದ್ಧ ನಿಗಮಗಳಲ್ಲಿನ ಯೋಜನೆ, ಹೂಡಿಕೆ ಹಾಗೂ ಕಾರ್ಯಚಟುವಟಿಕೆಗಳಲ್ಲಿನ ಲೋಪದೋಷಗಳನ್ನು ಎತ್ತಿತೋರಿಸುತ್ತಿದ್ದ, ಆರ್ಥಿಕ ಪರಿಣಾಮಗಳನ್ನು ಹೊಂದಿದ್ದ ಲೆಕ್ಕ ಪರಿಶೋಧನೆಯಿಂದ ಹೊರಹೊಮ್ಮಿದ ಪ್ರಮುಖ ಅಂಶಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿದೆ. ಇವು, ಅನುತ್ಪಾದಕ ಹೂಡಿಕೆ, ಗುತ್ತಿಗೆ ಷರತ್ತುಗಳ ಉಲ್ಲಂಘನೆ, ಗುತ್ತಿಗೆದಾರರಿಗೆ ಅನುಚಿತ ಲಾಭಗಳನ್ನು ಮಾಡಿಕೊಟ್ಟಿದ್ದುದು, ಹೆಚ್ಚುವರಿ/ತಪ್ಪಿಸಬಹುದಾಗಿದ್ದ ವೆಚ್ಚ, ಬಾಕಿಗಳನ್ನು ವಸೂಲಾತಿ ಮಾಡದಿದ್ದುದು ಹಾಗೂ ಸರ್ಕಾರದ ಯೋಜನೆಗಳ ಉದ್ದೇಶಿತ ಗುರಿಗಳು ಈಡೇರದೇ ಇದ್ದಂತಹ ಪ್ರಕರಣಗಳನ್ನು ಒಳಗೊಂಡಿವೆ.

**ಸರ್ಕಾರಿ ಕಂಪನಿಗಳು**

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

### 3.1. *ಸುವರ್ಣ ರಥ (ಗೋಲ್ಡನ್ ಚಾರಿಯಟ್) ಯೋಜನೆ*

**ಸುವರ್ಣ ರಥದ ಕಾರ್ಯಾಚರಣೆ ಮತ್ತು ಹಣಕಾಸು ನಿರ್ವಹಣೆಯಲ್ಲಿನ ಲೋಪದೋಷಗಳು ಹಾಗೂ ವ್ಯವಸ್ಥಾಪನಾ ಪಾಲುದಾರಿಕೆಗೆ ಸಂಬಂಧಿಸಿದಂತೆ ಸೇವಾ ಒಡಂಬಡಿಕೆಯಲ್ಲಿನ ಪ್ರತಿಕೂಲಕರ ಷರತ್ತುಗಳನ್ನು ಅಳವಡಿಸಿಕೊಂಡಿದ್ದರ ಪರಿಣಾಮವಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು, ಕಾರ್ಯಾಚರಣೆಯ ಆರು ವರ್ಷಗಳನ್ನು ಕಳೆದನಂತರವೂ ತನ್ನ ಕಾರ್ಯಾಚರಣೆಯ ವೆಚ್ಚವನ್ನೂ ಸಹ ಸುವರ್ಣರಥದಿಂದ ಪೂರೈಸಿಕೊಳ್ಳಲು ಸಾಧ್ಯವಾಗಿರಲಿಲ್ಲ.**

**ಪೀಠಿಕೆ**

**3.1.1.** ಕರ್ನಾಟಕದ ಪ್ರವಾಸಿ ಆಕರ್ಷಣೆಗಳು ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಪ್ರದರ್ಶಿಸುವ ಹಾಗೂ ಪ್ರವಾಸಿಗರಿಗೆ ಮನಮೋಹಕ ಪ್ರವಾಸಿ ಅನುಭವವನ್ನು ಒದಗಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು, ರಾಜಾಸ್ಥಾನ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ನಡೆಸುತ್ತಿರುವ 'ಗಾಲಿಗಳ ಮೇಲಿನ ಅರಮನೆ' (ಪ್ಯಾಲೇಸ್ ಆನ್ ವೀಲ್ಸ್) ಮಾದರಿಯಲ್ಲಿಯೇ 'ಸುವರ್ಣ ರಥ' ಎಂಬ ಹೆಸರಿನ ಒಂದು ವಿಲಾಸಿ ಪ್ರವಾಸಿ ಟ್ರೈನನ್ನು ಕಾರ್ಯಾಚರಣೆ ಮಾಡುವ ಒಂದು ಯೋಜನೆಯನ್ನು ಹುಟ್ಟು ಹಾಕಿತು (2001–02). ಯೋಜನೆಯನ್ನು ಭಾರತೀಯ ರೈಲ್ವೆಯ ಸಹಯೋಗದೊಂದಿಗೆ, ಕರ್ನಾಟಕ ಸರ್ಕಾರದ ಸ್ವಾಮ್ಯದ ಉದ್ದಿಮೆ ಹಾಗೂ ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಒಂದು ಸಂಪರ್ಕಸೇತು ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್‌ಟಿಡಿಸಿ) ಮೂಲಕ ಕಾರ್ಯಗತಗೊಳಿಸಲಾಯಿತು.




***ಭಾರತೀಯ ರೈಲ್ವೆಯೊಂದಿಗೆ ಮಾಡಿಕೊಳ್ಳಲಾದ ಪರಸ್ಪರ ತಿಳಿವಳಿಕೆ ಪತ್ರ***

**3.1.2.** ಕೆಎಸ್‌ಟಿಡಿಸಿಯು ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ, ಭಾರತೀಯ

ರೈಲ್ವೆಯೊಂದಿಗೆ ಒಂದು ಪರಸ್ಪರ ತಿಳಿವಳಿಕೆ ಪತ್ರವನ್ನು ಮಾಡಿಕೊಂಡಿತು (ಡಿಸೆಂಬರ್ 2002). ಪರಸ್ಪರ ತಿಳಿವಳಿಕೆ ಪತ್ರದ ಷರತ್ತುಗಳ ಪ್ರಕಾರ, ಕೆಎಸ್‌ಟಿಡಿಸಿಯು ಮಾರುಕಟ್ಟೆ ವ್ಯವಸ್ಥೆ, ಪ್ರಚಾರ, ಜಾಹೀರಾತು ಹಾಗೂ ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯದ ಜೊತೆ ಸಂಪರ್ಕ, ಇವುಗಳಿಗಾಗಿ ಸಂಪರ್ಕಸೇತು ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಿತ್ತು. ರೈಲ್ವೆಯು ಖಾಲಿ ಬೋಗಿಗಳನ್ನು ಒದಗಿಸಬೇಕಿತ್ತು ಹಾಗೂ ಟ್ರೈನಿನ ಕಾರ್ಯಾಚರಣೆಗೆ ಅಗತ್ಯವಿದ್ದಂತಹ ಎಲ್ಲಾ ಅನುಕೂಲತೆಗಳನ್ನು[60] ಒದಗಿಸಬೇಕಿತ್ತಾದರೆ, ಕೆಎಸ್‌ಟಿಡಿಸಿಯು ಇತರೆ ಬೋಗಿ ಉಪಕರಣ ಹೊಂದಿಕೆಗಳು ಹಾಗೂ ನೆಲೆವಸ್ತುಗಳು, ಬೋಗಿಗಳ ಹವಾ ನಿಯಂತ್ರಣ ವ್ಯವಸ್ಥೆ, ಇತ್ಯಾದಿಗಳ ವೆಚ್ಚಗಳನ್ನು ಭರಿಸಬೇಕಿತ್ತು. ಪರಸ್ಪರ ತಿಳಿವಳಿಕೆ ಪತ್ರವು, ಭಾರತೀಯ ರೈಲ್ವೆ ಹಾಗೂ ಕೆಎಸ್‌ಟಿಡಿಸಿ ಇವೆರಡೂ ಒಂದು ಜಂಟಿ ಕಾರ್ಯನಿರ್ವಹಣಾ ತಂಡದ[61] ಮೂಲಕ ಪರಸ್ಪರ ತಿಳಿವಳಿಕೆ ಪತ್ರದ ಸಹಿಯಾದ ಮೂರು ತಿಂಗಳೊಳಗೆ ವರಮಾನವನ್ನು ಹಂಚಿಕೊಳ್ಳುವ ವ್ಯವಸ್ಥೆಯನ್ನು ಅಂತಿಮ ರೂಪಕ್ಕೆ ತರತಕ್ಕದ್ದು ಎಂಬುದನ್ನೂ ಸಹ ಚಿಂತಿಸಿತ್ತು.

***ಯೋಜನೆಯ ಕಾರ್ಯಸಾಧ್ಯತೆ ಹಾಗೂ ಹಣಕಾಸು ಹೂಡಿಕೆ***

**3.1.3.** ಕರ್ನಾಟಕ ಸರ್ಕಾರದ ಒಂದು ಸಂಸ್ಥೆಯಾಗಿರುವ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತವು(ಐಡೆಕ್) ಕಾರ್ಯಸಾಧ್ಯತೆಯ ಅಧ್ಯಯನವನ್ನು ಮಾಡಿತು (ಜೂನ್ 2002). ಕಾರ್ಯಾಚರಣೆಯ ಸಂಪೂರ್ಣ ವೆಚ್ಚವನ್ನು ಭಾರತೀಯ ರೈಲ್ವೆ ಭರಿಸುವುದೆಂಬ ಒಂದು ಊಹೆಯೊಂದಿಗೆ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತವು ಹಣಕಾಸಿನ ಕಾರ್ಯಸಾಧ್ಯತೆಯನ್ನು ಲೆಕ್ಕಹಾಕಿತ್ತು. ಆದಾಗ್ಯೂ, ಭಾರತೀಯ ರೈಲ್ವೆಯೊಂದಿಗೆ ಮಾಡಿಕೊಳ್ಳಲಾದ ಪರಸ್ಪರ ತಿಳಿವಳಿಕೆ ಪತ್ರವು ಸಾಗಾಣಿಕೆ ವೆಚ್ಚಗಳಿಗೆ ಲಾಭದ ಒಂದು ಭಾಗವನ್ನು ಸೇರಿಸಿ ಪಾವತಿಸುವುದನ್ನು ಚಿಂತಿಸಿತ್ತು. ಕೆಎಸ್‌ಟಿಡಿಸಿಯು ಅದರ ಮೂಲ ಊಹೆಗಳ ಪೈಕಿ ಒಂದಾಗಿದ್ದಂತಹ ಸಂಪೂರ್ಣ ಕಾರ್ಯಾಚರಣೆಯ ವೆಚ್ಚವನ್ನು ಭಾರತೀಯ ರೈಲ್ವೆಯು ಭರಿಸುವುದು ಫಲಕಾರಿಯಾಗಲಿಲ್ಲವಾದರೂ ಯೋಜನೆಯ ಕಾರ್ಯಸಾಧ್ಯತೆಯ ಬಗ್ಗೆ ಪುನರ್–ಚಿಂತಿಸಲಿಲ್ಲ.

**ಯೋಜನೆಯನ್ನು ಕಾರ್ಯಗತಗೊಳಿಸಿದ್ದು**

**3.1.4.** ಪ್ರಯಾಣಿಕರ ಹನ್ನೊಂದು ಬೋಗಿಗಳು, ಒಂದು ವ್ಯಾಯಾಮ ಶಾಲೆ ಹಾಗೂ ಒಂದು ಸ್ಪಾ ಬೋಗಿ, ಒಂದು ಬಾರು ಬೋಗಿ, ಎರಡು ಭೋಜನ/ಉಪಹಾರ ಮಂದಿರ, ಒಂದು ಸಿಬ್ಬಂದಿ ಬೋಗಿ ಹಾಗೂ ಎರಡು ವಿದ್ಯುತ್ ಕಾರುಗಳ ನಿರ್ಮಾಣವನ್ನು ಒಳಗೊಂಡಿದ್ದಂತಹ ಯೋಜನೆಯನ್ನು ₹ 32.93 ಕೋಟಿ ವೆಚ್ಚದಲ್ಲಿ ಫೆಬ್ರವರಿ 2008ರಲ್ಲಿ ಪೂರ್ಣಗೊಳಿಸಲಾಯಿತು.




***ವ್ಯವಸ್ಥಾಪನಾ ಪಾಲುದಾರರ ನೇಮಕ***

**3.1.5.** ನೈನ್ತ್ ಡೈಮೆನ್ಷನ್ ಹೋಟೆಲ್ಸ್ ಅಂಡ್ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಅಂಡ್ ದಿ ಲಕ್ಷುರಿ

---

60 ಮಾರ್ಗ, ಸಿಗ್ನಲ್ಲು, ನಿಲ್ದಾಣದ ಜಾಗ, ಲೋಕೋಮೋಟೀವುಗಳು, ಟೆಲಿಸಂಪರ್ಕ, ನಿರ್ವಹಣಾ ಸಿಬ್ಬಂದಿಯೂ ಒಳಗೊಂಡಂತೆ ಟ್ರೈನು ಸಿಬ್ಬಂದಿ, ಪ್ಲಾಟ್‌ಫಾರಂಗಳ ಒಳಹೊರಗೆ ಪ್ರವೇಶ, ತಂಗುವಿಕೆಗಳು/ಇರುವಿಕೆ ಅನುಕೂಲತೆಗಳ ಬಳಕೆ.

61 ಕರ್ನಾಟಕ ಸರ್ಕಾರವು, ಸುವರ್ಣ ರಥದ ಕಾರ್ಯಾಚರಣೆ, ದರಪಟ್ಟಿ ತಯಾರಿಕೆ, ವರಮಾನ ಸಂಗ್ರಹಣೆ ಹಾಗೂ ಸುವರ್ಣ ರಥದ ಕಾರ್ಯಾಚರಣೆಗಳಿಗೆ ಸಂಬಂಧಿತ ಇತರೆ ಯಾವುದೇ ವಿಷಯಗಳನ್ನು ನಿಶ್ಚಯಿಸುವುದಕ್ಕಾಗಿ ಭಾರತೀಯ ರೈಲ್ವೆ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕೆಎಸ್‌ಟಿಡಿಸಿಯ ಅಧಿಕಾರಿಗಳು/ನಾಮನಿರ್ದೇಶಿತರನ್ನು ಒಳಗೊಂಡ ಒಂದು ಜಂಟಿ ಕಾರ್ಯನಿರ್ವಹಣಾ ತಂಡವನ್ನು ರಚಿಸಿತು (ಏಪ್ರಿಲ್ 2003/ಆಗಸ್ಟ್ 2007).

ಹಾಲಿಡೇಸ್ (ಮಾರುಕಟ್ಟೆ ಪಾಲುದಾರರು) ಇವರ ಒಂದು ಸಹ–ಸಂಸ್ಥೆಯಾಗಿದ್ದ ಮೆ. ನೈನ್ಥ್ ಡೈಮೆನ್ಷನ್ ಹೋಟೆಲ್ಸ್ ಅಂಡ್ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್, ಇವರನ್ನು ಸೇವಾ ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ವ್ಯವಸ್ಥಾಪನಾ ಪಾಲುದಾರರರನ್ನಾಗಿ ನೇಮಕ ಮಾಡಲಾಯಿತು (ಸೆಪ್ಟಂಬರ್ 2007). ಒಡಂಬಡಿಕೆಯ ಪ್ರಕಾರ, ವ್ಯವಸ್ಥಾಪನಾ ಪಾಲುದಾರರು ಕೆಎಸ್‌ಟಿಡಿಸಿಗೆ ಪ್ರತೀ ತಿಂಗಳೂ ಕೆಎಸ್‌ಟಿಡಿಸಿಯ ನಿವ್ವಳ ವರಮಾನದ ಶೇಕಡಾ 10ಕ್ಕೆ ಸಮನಾದ ಒಂದು ಮೊತ್ತವನ್ನು ವ್ಯವಸ್ಥಾಪನಾ ಅವಧಿಯಲ್ಲಿ ಪಾವತಿಸತಕ್ಕದ್ದು, ಆ ಮೊತ್ತವು ಒಟ್ಟಾರೆ ನಿವ್ವಳ ವರಮಾನದ ಶೇಕಡಾ 50 ಆಗಿರುತ್ತದೆ, ಉಳಿದ ಶೇಕಡಾ 50ರಷ್ಟು ಪಾಲು ಭಾರತೀಯ ರೈಲ್ವೆಗೆ ಸಂಬಂಧಿಸಿರುತ್ತದೆ. ಅಲ್ಲದೇ, ವ್ಯವಸ್ಥಾಪನಾ ಪಾಲುದಾರರು ಇತರೆ ವರಮಾನವನ್ನು[62] ಸಂಗ್ರಹಿಸುವ ಹಾಗೂ ತಮ್ಮಲ್ಲಿ ಉಳಿಸಿಕೊಳ್ಳುವ ಅರ್ಹತೆಯನ್ನು ಹೊಂದಿದ್ದರು. ಕೆಎಸ್‌ಟಿಡಿಸಿ ಹಾಗೂ ಭಾರತೀಯ ರೈಲ್ವೆ ನಡುವೆ ವರಮಾನದ ಹಂಚಿಕೆಯು ಶೇಕಡಾ 50:50ರ ಅನುಪಾತದಲ್ಲಿ ಎಂಬುದಾಗಿ ಭಾವಿಸಿ, ಈ ಬಗ್ಗೆ ಭಾರತೀಯ ರೈಲ್ವೆಯ ಒಪ್ಪಿಗೆಯನ್ನು ಪಡೆಯದೆಯೇ, ಕೆಎಸ್‌ಟಿಡಿಸಿಯು ವ್ಯವಸ್ಥಾಪನಾ ಪಾಲುದಾರರ ಜೊತೆಗಿನ ಸೇವಾ ಒಡಂಬಡಿಕೆಯನ್ನು ಅಂತಿಮ ರೂಪಕ್ಕೆ ತಂದಿತು.

ತದನಂತರ, ವರಮಾನ ಹಂಚಿಕೆಯ ಬಗ್ಗೆ ತೀರ್ಮಾನವಾಗದಿರುವುದರಿಂದ, ಟ್ರೈನನ್ನು ಓಡಿಸುವುದಕ್ಕಾಗಿ ಕೆಎಸ್‌ಟಿಡಿಸಿಯು ಸಾಗಾಣಿಕೆ ವೆಚ್ಚಗಳನ್ನು ಪಾವತಿಸತಕ್ಕದ್ದು ಎಂಬುದಾಗಿ ಭಾರತೀಯ ರೈಲ್ವೆಯು ತಿಳಿಸಿತು (ಡಿಸೆಂಬರ್ 2007/ಜನವರಿ 2008). ವ್ಯವಸ್ಥಾಪನಾ ಶುಲ್ಕವೂ ಒಳಗೊಂಡಂತೆ ಒಟ್ಟಾರೆ ನಿವ್ವಳ ವರಮಾನದ ಶೇಕಡಾ 55ರಷ್ಟನ್ನು ಕೆಎಸ್‌ಟಿಡಿಸಿಯು ಸ್ವೀಕರಿಸಲು ಅನುಕೂಲ ಕಲ್ಪಿಸುವುದಕ್ಕಾಗಿ ವ್ಯವಸ್ಥಾಪನಾ ಪಾಲುದಾರರ ಜೊತೆ ಒಂದು ಪೂರಕ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು (ಏಪ್ರಿಲ್ 2008) ಹಾಗೂ ಉಳಿಕೆ ಶೇಕಡಾ 45ರಷ್ಟನ್ನು ವ್ಯವಸ್ಥಾಪನಾ ಪಾಲುದಾರರಿಗೆ ಪಾವತಿಸಬೇಕಿತ್ತು. ಕೆಎಸ್‌ಟಿಡಿಸಿ ಹಾಗೂ ಭಾರತೀಯ ರೈಲ್ವೆ ಇವುಗಳ ನಡುವೆ ಮಾಡಿಕೊಳ್ಳಲಾಗಿರುವ ಕರಾರುಗಳು ಮತ್ತು ಷರತ್ತುಗಳ ಪ್ರಕಾರ, ಕೆಎಸ್‌ಟಿಡಿಸಿಯು ಭಾರತೀಯ ರೈಲ್ವೆಗೆ ಸಾಗಾಣಿಕೆ ವೆಚ್ಚಗಳನ್ನು ಪಾವತಿಸಲು ಜವಾಬ್ದಾರಿಯುತವಾಗಿರುತ್ತದೆ ಎಂಬುದಾಗಿಯೂ ಈ ಒಡಂಬಡಿಕೆಯು ನಿರ್ದಿಷ್ಟಪಡಿಸಿತ್ತು. ಕೆಎಸ್‌ಟಿಡಿಸಿಯು, ಆದಾಗ್ಯೂ, ವ್ಯವಸ್ಥಾಪನಾ ಪಾಲುದಾರರ ಜೊತೆಯಲ್ಲಿ ವರಮಾನ ಹಂಚಿಕೆಯನ್ನು ಅಂತಿಮ ರೂಪಕ್ಕೆ ತರುವ ವೇಳೆಯಲ್ಲಿ, ಸಾಗಾಣಿಕೆ ವೆಚ್ಚವನ್ನು ಅಪವರ್ತನಗೊಳಿಸುವಲ್ಲಿ ವಿಫಲಗೊಂಡಿತು, ಅದರಿಂದಾದ ಪರಿಣಾಮಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

***ದೋಷಯುಕ್ತ ಒಡಂಬಡಿಕೆಯಿಂದ ಅನರ್ಹ ಲಾಭ***

**3.1.6.** ವ್ಯವಸ್ಥಾಪನಾ ಪಾಲುದಾರರ ವರಮಾನ ಹಂಚಿಕೆಯನ್ನು ಶೇಕಡಾ 45ರಷ್ಟು ಹಾಗೂ ಮಾರುಕಟ್ಟೆ ನಿಧಿಗೆ ಕಾಣಿಕೆಯನ್ನು ನಿವ್ವಳ ವರಮಾನದ ಶೇಕಡಾ 2ರ ದರದಲ್ಲಿ ನಿಗದಿಗೊಳಿಸಲಾಗಿತ್ತಾದರೂ, ವ್ಯವಸ್ಥಾಪನಾ ಪಾಲುದಾರರಿಗೆ, ಅವರು ಮಾರಾಟ ಮಾಡಿದ್ದ ಟಿಕೇಟುಗಳ ಒಟ್ಟಾರೆ ನಿವ್ವಳ ಮಾರಾಟಗಳ ಮೌಲ್ಯದ ಶೇಕಡಾ 17ರ ದರದಲ್ಲಿ ಕಮಿಷನನ್ನು ಪಾವತಿಸಲು ಸೇವಾ ಒಡಂಬಡಿಕೆಯು ಅನುವು ಮಾಡಿತ್ತು. ವರಮಾನದ ಪಾಲಿಗೂ ಮೀರಿದಂತೆ ಹೆಚ್ಚುವರಿ ಕಮಿಷನನ್ನು ನೀಡುವ ಅಗತ್ಯತೆಯು ಸಮರ್ಥನೀಯವಾಗಿರಲಿಲ್ಲ. ಅಲ್ಲದೇ, ಶೇಕಡಾ 17ಕ್ಕೆ ಪ್ರತಿಯಾಗಿ, ಕರಾರುಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದಂತೆ ಕೆಎಸ್‌ಟಿಡಿಸಿಯು 2010–11ರಿಂದ ಜಾರಿಗೆ ಬರುವಂತೆ ಸಾಮಾನ್ಯ ಮಾರಾಟ ಪ್ರತಿನಿಧಿಗಳಿಗೆ ಪಾವತಿಸಿದ್ದ ಕಮಿಷನ್ನಿಗೆ ಸಮನಾಗಿ, ಅವರು ಮಾಡಿದ್ದ ಮಾರಾಟದ ಮೇಲೆ ಶೇಕಡಾ 20ರಿಂದ 25ರವರೆಗೂ ಕಮೀಷನ್ ಪಾವತಿಸಿತು. 2010–11ರಿಂದ 2013–14ರಲ್ಲಿ ಪಾವತಿಸಿದ್ದ ಕಮಿಷನ್ನಿನ ಮೊತ್ತವು ₹ 3.27 ಕೋಟಿ ಆಗಿತ್ತು ಹಾಗೂ ಅದು ಒಪ್ಪಿಕೊಳ್ಳಲಾಗಿದ್ದ ಶೇಕಡಾವಾರು ಕಮಿಷನ್ನಿಗಿಂತಲೂ ₹ 0.74 ಕೋಟಿ ಮೊತ್ತದಷ್ಟು ಅಧಿಕವಾಗಿತ್ತು.

[62] ಒಡಂಬಡಿಕೆಯಲ್ಲಿ ವಿವರಿಸಲಾದಂತೆ ಇತರೆ ವರಮಾನವೆಂದರೆ ಟಿಕೇಟುಗಳು/ಪ್ಯಾಕೇಜುಗಳ ಮಾರಾಟವಲ್ಲದೇ, ಜಾಹೀರಾತು ವರಮಾನ, ಬಾಡಿಗೆ ವರಮಾನ ಹಾಗೂ ಇತರೆ ಸ್ವೀಕೃತಿಗಳನ್ನು ಒಳಗೊಂಡಂತೆ, ಆದರೆ ಇವುಗಳಿಗಷ್ಟೇ ಸೀಮಿತಗೊಳಿಸಿರದ ವರಮಾನ.

**3.1.7.** ಸಾಗಾಣಿಕೆ ವೆಚ್ಚಗಳೂ ಸೇರಿದಂತೆ ನಿರ್ವಹಣಾ ವೆಚ್ಚದ ಪಾಲನ್ನು ಪಡೆಯದೆಯೇ ಟ್ರೈನಿನಲ್ಲಿ ನೀಡಲಾದ ಸೇವೆಗಳಿಗಾಗಿ[63] ಗಳಿಸಲಾದ ಸಂಪೂರ್ಣ ವರಮಾನವನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲು ವ್ಯವಸ್ಥಾಪನಾ ಪಾಲುದಾರರಿಗೆ ಸೇವಾ ಒಡಂಬಡಿಕೆಯ ಕಲಮು 7.1 ಅನುವು ಮಾಡಿಕೊಟ್ಟಿದೆ. ಟ್ರೈನಿನ ಹದಿನೆಂಟು ಬೋಗಿಗಳ ಪೈಕಿ ಎರಡನ್ನು ವಿಶೇಷವಾಗಿ ಬಾರನ್ನು ನಡೆಸಲು/ಮದ್ಯದ ಮಾರಾಟಕ್ಕೆ ಹಾಗೂ ಮತ್ತೊಂದನ್ನು ಆರೋಗ್ಯ ಕ್ಲಬ್‌ಗಾಗಿ (ಜಿಮ್ ಮತ್ತು ಸ್ಪಾ) ಬಳಸಲಾಗುತ್ತಿತ್ತು. 2008–09ರಿಂದ 2010–11 ಸಾಲುಗಳಲ್ಲಿ ಕಾರ್ಯಾಚರಣೆಗೊಳಿಸಲಾದ 75 ಟ್ರಿಪ್ಪುಗಳಿಗೆ ಸಾಗಾಣಿಕಾ ವೆಚ್ಚಕ್ಕಾಗಿ ₹ 1.29 ಕೋಟಿ



ಖರ್ಚು ಮಾಡಿಯೂ, ಸಲ್ಲಿಸಲಾದ ಇತರೆ ಸೇವೆಗಳಿಗಾಗಿ ₹ 1.07 ಕೋಟಿ ಮೊತ್ತದಷ್ಟು ವರಮಾನವನ್ನು ಉಳಿಸಿಕೊಳ್ಳಲು ವ್ಯವಸ್ಥಾಪನಾ ಪಾಲುದಾರರಿಗೆ ಅನುವು ಮಾಡಿಕೊಡಲಾಗಿತ್ತು ಹಾಗೂ 2011–12ರಿಂದ 2013–14 ಸಾಲುಗಳಿಗೆ ಕೆಎಸ್‌ಟಿಡಿಸಿಯು ಸಾಗಾಣಿಕೆ ವೆಚ್ಚಗಳಿಗಾಗಿ ₹ 0.89 ಕೋಟಿ ಮೊತ್ತವನ್ನು ಭರಿಸಿತ್ತಾದರೂ, ಗಳಿಸಲಾದ ಆದಾಯದ ಬಗ್ಗೆ ಮಾಹಿತಿಯು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಸೇವಾ ಒಡಂಬಡಿಕೆಯು (ಷರತ್ತು 7.2) ಅನುವು ಮಾಡಿತ್ತಾದರೂ ಕೆಎಸ್‌ಟಿಡಿಸಿಯು, ವ್ಯವಸ್ಥಾಪನಾ ಪಾಲುದಾರರ ವಾರ್ಷಿಕ ಲೆಕ್ಕಪತ್ರಗಳನ್ನು ಓರ್ವ ಸ್ವತಂತ್ರ ಲೆಕ್ಕಪರಿಶೋಧಕರ ಮೂಲಕ ಪರಿಶೀಲಿಸಿರಲಿಲ್ಲ.

***ಒಡಂಬಡಿಕೆಯಲ್ಲಿ ಚಿಂತಿಸದೇ ಇದ್ದಂತಹ ಹೆಚ್ಚುವರಿ ಲಾಭವನ್ನು ಮಾರುಕಟ್ಟೆ ವ್ಯವಸ್ಥೆಯ ಪಾಲುದಾರರಿಗೆ ನೀಡಿದ್ದುದು.***

**3.1.8.** ನೈನ್ಥ್ ಡೈಮನ್ಷನ್ ಹೋಟೆಲ್ಸ್ ಅಂಡ್ ರೆಸಾರ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರ ಸಹಸಂಸ್ಥೆಯಲ್ಲಿ ಮಾರುಕಟ್ಟೆ ವ್ಯವಸ್ಥೆಯ ಪಾಲುದಾರರಾಗಿ ಕಾರ್ಯನಿರ್ವಹಿಸುತ್ತಿದ್ದ 'ದಿ ಲಕ್ಷುರಿ ಹಾಲಿಡೇಸ್', ಇವರನ್ನು ಬದಲಿಸಿ ಕೆಎಸ್‌ಟಿಡಿಸಿಯು ಮೆ. ಪ್ಯಾಲೇಸ್ ಟೂರ್ಸ್, ಇವರನ್ನು ಏಕೈಕ ವಿಶ್ವವ್ಯಾಪಕ ಮಾರುಕಟ್ಟೆ ವ್ಯವಸ್ಥೆಯ ಪಾಲುದಾರರನ್ನಾಗಿ ನೇಮಿಸಿತು (ಏಪ್ರಿಲ್ 2008).

ಇದರಿಂದ ಸಂತ್ರಸ್ತಗೊಂಡ 'ದಿ ಲಕ್ಷುರಿ ಹಾಲಿಡೇಸ್', ಸುವರ್ಣ ರಥವನ್ನು ಸೇವಾ ಒಡಂಬಡಿಕೆಯ ಪ್ರಕಾರ ನಡೆಸತಕ್ಕದ್ದು ಎಂಬುದಾಗಿ ನಿರ್ದೇಶಿಸಿ ತನ್ನ ಪರವಾಗಿ ಒಂದು ಆದೇಶವನ್ನು ನೀಡುವಂತೆ ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಿತು (ಮೇ 2008). ನ್ಯಾಯಾಲಯದ ಹೊರಗಡೆ ಪ್ರಕರಣವನ್ನು ಇತ್ಯರ್ಥಗೊಳಿಸುವುದಕ್ಕಾಗಿ, ಲಕ್ಷುರಿ ಹಾಲಿಡೇಸ್, ಇವರು ಸುವರ್ಣ ರಥದ ಏಕೈಕ ಮಾರುಕಟ್ಟೆ ವ್ಯವಸ್ಥೆ ಪಾಲುದಾರರಾಗಿ ಮುಂದುವರೆಯುವ ಹಾಗೂ ವರ್ಷವೊಂದಕ್ಕೆ ಸುವರ್ಣ ರಥದಲ್ಲಿನ ಆರು ಕ್ಯಾಬಿನ್‌ಗಳನ್ನು ಅಭಿನಂದನಾ ಪೂರ್ವಕವಾಗಿ ಪಡೆಯುವ ಅರ್ಹತೆಯನ್ನು ನೀಡುವುದರೊಂದಿಗೆ ಒಂದು ಸಂಧಾನ ಸೂತ್ರಕ್ಕೆ ಬರಲಾಯಿತು (ಫೆಬ್ರವರಿ 2010).

ಸೇವಾ ಒಡಂಬಡಿಕೆಯ ಕರಾರುಗಳು ಮತ್ತು ಷರತ್ತುಗಳನ್ನು ಜಾರಿಗೊಳಿಸುವುದನ್ನು ಹಾಗೂ ಮಾರುಕಟ್ಟೆ ವ್ಯವಸ್ಥೆಯ ಪಾಲುದಾರರಾಗಿ ಅದರ ಸ್ಥಿತಿಗತಿಯನ್ನು ಪೂರ್ವಸ್ಥಿತಿಗೆ ತರುವುದನ್ನು ಮಾತ್ರ ಅವರು ಬಯಸಿದ್ದರೂ, ಲಕ್ಷುರಿ ಹಾಲಿಡೇಸ್‌ಗೆ ಹೆಚ್ಚುವರಿ ಆರು ಕ್ಯಾಬಿನ್‌ಗಳನ್ನು ನೀಡಲಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಕೆಎಸ್‌ಟಿಡಿಸಿಯು 2011–12 ರಿಂದ 2013–14 ಸಾಲುಗಳಲ್ಲಿ ಈ ಆರು ಕೋಣೆಗಳಿಂದ ₹ 0.69 ಕೋಟಿ ವರಮಾನವನ್ನು ಕಳೆದುಕೊಂಡಿತು, ಅದರಿಂದಾಗಿ ಮಾರುಕಟ್ಟೆ ಪಾಲುದಾರರಿಗೆ ಅನರ್ಹ ಲಾಭವನ್ನು ಮಾಡಿಕೊಟ್ಟಂತಾಗಿತ್ತು. ಅಲ್ಲದೇ,

[63] ಸೇವೆಗಳು ಬಾರು/ಮದ್ಯ ಮಾರಾಟ ಹಾಗೂ ವ್ಯಾಯಾಮಶಾಲೆ, ಸೌಂದರ್ಯ/ಆಯುರ್ವೇದ ಸಲೂನುಗಳು, ಅಂಗಡಿಗಳು, ಅಂಗಮರ್ದನ ಪಾರ್ಲರುಗಳು ಹಾಗೂ ಟ್ರೈನಿನ ಒಳಗೆ ಲಭ್ಯವಿರುವ ಆಂತರಿಕ ಅನುಕೂಲತೆಗಳನ್ನು ಒಳಗೊಂಡಿದ್ದವು.

2013–14ರಲ್ಲಿ ಪಾವತಿಸಲಾದ ದರಗಳಲ್ಲಿ ಲೆಕ್ಕ ಹಾಕಿದಂತೆ, ಕೆಎಸ್‌ಟಿಡಿಸಿಯು ಏಪ್ರಿಲ್ 2014ರಿಂದ ಸೆಪ್ಟೆಂಬರ್ 2017ರವರೆಗಿನ ಅವಧಿಯಲ್ಲಿ ₹ 0.81 ಕೋಟಿ ಮೊತ್ತದಷ್ಟು ಇನ್ನೂ ಹೆಚ್ಚಿನ ವರಮಾನವನ್ನು ಕಳೆದುಕೊಳ್ಳುವುದು.

## ಕಾರ್ಯಾಚರಣೆಗಳು

***ಕಾರ್ಯಾಚರಣೆಗಳಲ್ಲಿ ನಷ್ಟ***

**3.1.9.** ಟ್ರೈನಿನ ವಾಣಿಜ್ಯ ಕಾರ್ಯಾಚರಣೆಗಳು ಮಾರ್ಚ್ 2008ರಲ್ಲಿ ಪ್ರಾರಂಭಗೊಂಡವು. ಟ್ರೈನಿನ ಪ್ರವಾಸಿ ಕೈಪಿಡಿಯು ಎರಡು ಟ್ರಿಪ್ಪುಗಳನ್ನು, ಅವೆಂದರೆ 'ದಕ್ಷಿಣದ ಹೆಮ್ಮೆ' (ಪ್ರೈಡ್ ಆಫ್ ಸೌತ್) ಹಾಗೂ 'ದಕ್ಷಿಣದ ವೈಭವ'ಗಳನ್ನು (ಸದರ್ನ್ ಸ್ಪ್ಲೆಂಡರ್) ಒಳಗೊಂಡಿತ್ತು. 'ದಕ್ಷಿಣದ ಹೆಮ್ಮೆ'ಯು ಪ್ರತಿಯೊಂದು ಸುತ್ತು ಟ್ರಿಪ್ಪಿಗೂ (ಏಳು ರಾತ್ರಿಗಳು) ಕರ್ನಾಟಕ ಮತ್ತು ಗೋವಾದಲ್ಲಿನ 1,891 ಕಿಮೀಗಳ ಒಟ್ಟಾರೆ ದೂರದ ಸ್ಥಳಗಳನ್ನು ವ್ಯಾಪಿಸಿತ್ತು. ಮಾರ್ಚ್ 2010ರಲ್ಲಿ ಪ್ರಾರಂಭಿಸಲಾದ ಏಳು ರಾತ್ರಿಗಳ 'ದಕ್ಷಿಣದ ವೈಭವ' ಟ್ರಿಪ್ಪು ಕರ್ನಾಟಕ, ತಮಿಳುನಾಡು, ಪುದುಚೇರಿ ಹಾಗೂ ಕೇರಳದಲ್ಲಿನ ಒಟ್ಟಾರೆ ದೂರದ 2,111 ಕಿ.ಮೀ.ಗಳ ಸ್ಥಳಗಳನ್ನು ವ್ಯಾಪಿಸಿತ್ತು. 2008–09ರಿಂದ 2013–14ರ ಸಾಲುಗಳಲ್ಲಿ 131 ಟ್ರಿಪ್ಪುಗಳನ್ನು[64] ನಡೆಸಿದ್ದಾಗ್ಯೂ, ಕೆಎಸ್‌ಟಿಡಿಸಿಯು 2012–13ರವರೆಗೂ ನಷ್ಟವನ್ನು ಅನುಭವಿಸಿತು. 2013–14ರಲ್ಲಿ ನಷ್ಟದ ಪ್ರಮಾಣದಲ್ಲಿ ಸ್ವಲ್ಪಮಟ್ಟಿನ ಇಳಿಮುಖವಾಗಿತ್ತು (ತಾತ್ಕಾಲಿಕ). ಸಾಗಾಣಿಕೆ ವೆಚ್ಚಗಳಿಗೆ ಸಂಬಂಧಿಸಿದಂತೆ ಭಾಗಶಃ ಪರಿಹಾರವನ್ನು ಒದಗಿಸುವುದಕ್ಕಾಗಿ ಕರ್ನಾಟಕ ಸರ್ಕಾರವು 2009–10ರಿಂದ 2013–14ರ ಸಾಲುಗಳಲ್ಲಿ ₹ 13.22 ಕೋಟಿ ಮೊತ್ತದಷ್ಟು ಅನುದಾನಗಳನ್ನು ಬಿಡುಗಡೆಗೊಳಿಸಿತ್ತಾದರೂ, ಕಾರ್ಯಾಚರಣೆಗಳು ನಷ್ಟದ ಅಡಿಯಲ್ಲಿಯೇ ಇದ್ದವು.

***ಸಾಗಾಣಿಕೆ ವೆಚ್ಚವನ್ನು ಹಂಚಿಕೆ ಮಾಡದಿದ್ದ ಕಾರಣ ವ್ಯವಸ್ಥಾಪನಾ ಪಾಲುದಾರರಿಗೆ ಅನರ್ಹ ಲಾಭ***

**3.1.10.** 2008–14ರಲ್ಲಿ, ಕೆಎಸ್‌ಟಿಡಿಸಿಯು 131 ಟ್ರಿಪ್ಪುಗಳಿಂದ ₹ 43.24 ಕೋಟಿ ಮೊತ್ತದಷ್ಟು ನಿವ್ವಳ ವರಮಾನವನ್ನು ಗಳಿಸಿತು. ಈ ಅವಧಿಗೆ ₹ 37.20 ಕೋಟಿ ಮೊತ್ತದಷ್ಟು ಸಾಗಾಣಿಕೆ ವೆಚ್ಚವನ್ನು ಪರಿಗಣಿಸಿದಲ್ಲಿ, ನಿವ್ವಳ ನಷ್ಟವು ₹ 27.08 ಕೋಟಿ ಆಗಿತ್ತು. ಸಾಗಾಣಿಕೆ ವೆಚ್ಚವನ್ನು ವ್ಯವಸ್ಥಾಪನಾ ಪಾಲುದಾರರಿಗೆ ಅವರ ಶೇಕಡಾ 45ರಷ್ಟು ವರಮಾನ ಪಾಲಿಗೆ ಪ್ರಮಾಣಾನುಗುಣವಾಗಿ ಪಾಲು ಮಾಡಿದ್ದಲ್ಲಿ ನಷ್ಟವನ್ನು ₹ 10.34 ಕೋಟಿ ಮೊತ್ತಕ್ಕೆ ಇಳಿಮುಖಗೊಳಿಸಬಹುದಾಗಿತ್ತು. ಸೇವಾ ಒಡಂಬಡಿಕೆಯು ವರಮಾನ ಪಾಲಿಗೆ ಪ್ರಮಾಣಾನುಗುಣವಾಗಿ ಸಾಗಾಣಿಕೆ ವೆಚ್ಚವನ್ನು ಪಾಲು ಮಾಡಲು ಅನುವು ಮಾಡಿರಲಿಲ್ಲವಾದ್ದರಿಂದ, ವ್ಯವಸ್ಥಾಪನಾ ಪಾಲುದಾರರಿಗೆ ಕಾರ್ಯಾಚರಣೆಗಳ ಆರು ವರ್ಷಗಳ ಅವಧಿಯಲ್ಲಿ ₹ 16.74 ಕೋಟಿ[65] ಮೊತ್ತದಷ್ಟು ಲಾಭವನ್ನು ಮಾಡಿಕೊಡಲಾಗಿತ್ತು.

---


[64] ಮಾರ್ಚ್ 2008ರಲ್ಲಿ ನಡೆಸಲಾದ ಪರೀಕ್ಷಾ ಓಟದ ಒಂದು ಪ್ರವಾಸವನ್ನು ಹೊರತುಪಡಿಸಿ.

[65] ₹16.74 ಕೋಟಿ (₹ 27.08 ಕೋಟಿ –₹ 10.34 ಕೋಟಿ) ವ್ಯತ್ಯಾಸದ ಮೊತ್ತವು ವ್ಯವಸ್ಥಾಪನಾ ಪಾಲುದಾರರಿಗೆ ಮಾಡಿಕೊಟ್ಟಂತಹ ಲಾಭ.

***ನೆಲೆಸಿರುವಿಕೆ (ಆಕ್ಯುಪೆನ್ಸಿ) ದರ***

**3.1.11.** ಒಟ್ಟಾರೆ ನೆಲೆಸಿರುವಿಕೆಯು 2008–09ರಲ್ಲಿದ್ದ ಶೇಕಡಾ 23ರಿಂದ 2013–14ರಲ್ಲಿ ಶೇಕಡಾ 36ಕ್ಕೆ ಹೆಚ್ಚಳಗೊಂಡಿತಾದರೂ, ನೆಲೆಸಿರುವಿಕೆಯಲ್ಲಿನ ಹೆಚ್ಚಳದ ದರವು ವಿಪರೀತವಾಗಿ ಅನಿರ್ದಿಷ್ಟ ಚಲನೆಯಿಂದ ಕೂಡಿತ್ತು ಹಾಗೂ ಕಾರ್ಯಾಚರಣೆಯು ಉತ್ತಮಗೊಳ್ಳುವಿಕೆಯನ್ನು ಸೂಚಿಸುತ್ತಿರಲಿಲ್ಲ. 2010–11ರಲ್ಲಿನ ನೆಲೆಸಿರುವಿಕೆಯ ದರದಲ್ಲಿನ ವಿಪರೀತವಾದ ಹೆಚ್ಚಳವು 2009–10ಕ್ಕೆ[66] ಹೋಲಿಸಿದಲ್ಲಿ ಕಡಿಮೆ ಟ್ರಿಪ್ಪುಗಳನ್ನು (26 ಟ್ರಿಪ್ಪುಗಳು) ಕಾರ್ಯಾಚರಣೆ ಮಾಡಿದ್ದ ಕಾರಣದಿಂದ ಸಂಭವಿಸಿತ್ತು. ಪ್ರತ್ಯೇಕ ಮಾರುಕಟ್ಟೆ ನಿಧಿಯನ್ನು ಮೀಸಲಿರಿಸಿದ್ದ ಹೊರತಾಗಿಯೂ ಹಾಗೂ ಮಾರುಕಟ್ಟೆ ಪ್ರಚಾರಕ್ಕಾಗಿ ಮಾರುಕಟ್ಟೆ ವ್ಯವಸ್ಥಾ ಪಾಲುದಾರರಿಗೆ ಆರು ಕ್ಯಾಬಿನ್‌ಗಳನ್ನು ಮೀಸಲಿರಿಸಿದ್ದಾಗ್ಯೂ ಕೆಎಸ್‌ಟಿಡಿಸಿಯು ನೆಲೆಸಿರುವಿಕೆಯನ್ನು ಉತ್ತಮಗೊಳಿಸುವುದಕ್ಕಾಗಿ ಯಾವುದೇ ಮಾರುಕಟ್ಟೆ ವ್ಯವಸ್ಥಾ ಕಾರ್ಯನೀತಿಯನ್ನು ರೂಪಿಸಿರಲಿಲ್ಲವಾದ್ದರಿಂದ ನೆಲೆಸಿರುವಿಕೆ ದರವು ಉತ್ತೇಜನಕಾರಿಯಾಗಿರಲಿಲ್ಲ. ಮುದ್ರಣ ಹಾಗೂ ಡಿಜಿಟಲ್ ಮಾಧ್ಯಮದ ಮೂಲಕ ಪರಿಣಾಮಕಾರಿ ಜಾಹೀರಾತುಗಳು ಮೂಡಿಬಂದಿರಲಿಲ್ಲ. ಅಲ್ಲದೇ, ಮೂಲತಃ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಂದ ಬಂದವರು, ಪ್ರವಾಸಿ ಲೇಖಕರು, ಪತ್ರಕರ್ತರು ಇತ್ಯಾದಿ ಜನರಿಗೆ ವ್ಯವಸ್ಥೆ ಮಾಡಲಾಗಿದ್ದ ಪರಿಚಯಾತ್ಮಕ ಟ್ರಿಪ್ಪುಗಳು ನೆಲೆಸಿರುವಿಕೆಗೆ ಸಂಬಂಧಿಸಿದಂತೆ ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸಿರಲಿಲ್ಲ.

**ನಕ್ಷೆ 3.1: ಸುವರ್ಣರಥದ ನೆಲೆಸಿರುವಿಕೆ**




**3.1.12.** ಎಲ್ಲಾ 11 ಬೋಗಿಗಳಲ್ಲಿನ ಪೂರ್ಣ ನೆಲೆಸಿರುವಿಕೆಯ ಸಂಖ್ಯೆಯು 88 ಆಗಿತ್ತು. ಕೆಎಸ್‌ಟಿಡಿಸಿಯ ಕಾರ್ಯನೀತಿಯ ಪ್ರಕಾರ, ಒಂದು ಟ್ರಿಪ್ಪನ್ನು ಕಾರ್ಯಾಚರಣೆ ಮಾಡಲು ಅಗತ್ಯವಿದ್ದಂತಹ ಪ್ರಯಾಣಿಕರ ನೆಲೆಸಿರುವಿಕೆಯ ಕನಿಷ್ಠ ಸಂಖ್ಯೆಯು ಹತ್ತು ಆಗಿತ್ತು. ಯಾವುದೇ ಒಂದು ನಿರ್ದಿಷ್ಟ ಟ್ರಿಪ್ಪಿನಲ್ಲಿ ಪ್ರಯಾಣಿಕರ ಸಂಖ್ಯೆಯು 10ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ಟ್ರಿಪ್ಪನ್ನು ರದ್ದುಗೊಳಿಸಬೇಕಿತ್ತು. ಕೆಎಸ್‌ಟಿಡಿಸಿಯು 2008–09ರಿಂದ 2013–14ರಲ್ಲಿ ಪ್ರಯಾಣಿಕರ ಸಂಖ್ಯೆಯು ಹತ್ತಕ್ಕಿಂತಲೂ ಕಡಿಮೆ ಇದ್ದ 18 ಟ್ರಿಪ್ಪುಗಳನ್ನು ನಡೆಸಿತ್ತು ಎಂಬುದನ್ನು ನಾವು ಗಮನಿಸಿದೆವು. 18 ಟ್ರಿಪ್ಪುಗಳ ಪೈಕಿ 4ಕ್ಕೆ ಸಂಬಂಧಿಸಿದಂತೆ, ಕೇವಲ ಒಂದು ಅಥವಾ ಎರಡು ಪ್ರಯಾಣಿಕರೊಂದಿಗೆ ಟ್ರೈನನ್ನು ಕಾರ್ಯಾಚರಣೆಗೊಳಿಸಲಾಗಿತ್ತು. ಕೆಎಸ್‌ಟಿಡಿಸಿಯು ಆರ್ಥಿಕವಾಗಿ ಮಿತವ್ಯಯವಾಗಿರದ ಟ್ರಿಪ್ಪುಗಳನ್ನು ಕಾರ್ಯಾಚರಣೆಗೊಳಿಸುವ ಮೂಲಕ ₹ 4.03 ಕೋಟಿ ನಷ್ಟವನ್ನು ಅನುಭವಿಸಿತು.

***ಅಗತ್ಯಕ್ಕಿಂತ ಹೆಚ್ಚಿನ ಬೋಗಿಗಳ ಕಾರ್ಯಾಚರಣೆ***

**3.1.13.** ಸುವರ್ಣ ರಥವು ತಲಾ ಎಂಟು ಪ್ರಯಾಣಿಕರ ಸಾಮರ್ಥ್ಯದ 11 ಬೋಗಿಗಳನ್ನು ಹಾಗೂ ಪ್ರಯಾಣಿಸುತ್ತಿರುವ ಪ್ರಯಾಣಿಕರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆಯೇ ಸೇವೆಗಳಿಗಾಗಿ ಪ್ರತಿಯೊಂದು ಟ್ರಿಪ್‌ನಲ್ಲಿಯೂ ನಡೆಸಲೇಬೇಕಾದಂತಹ ಏಳು ಬೋಗಿಗಳನ್ನು ಒಳಗೊಂಡಿದೆ. ಆದಾಗ್ಯೂ, ಕೆಎಸ್‌ಟಿಡಿಸಿಯು ನೆಲೆಸಿರುವಿಕೆಯನ್ನು ಅವಲಂಬಿಸಿ ಹನ್ನೊಂದು ಅಥವಾ ಒಂಬತ್ತು ಪ್ರಯಾಣಿಕರ ಬೋಗಿಗಳನ್ನು ಓಡಿಸುವ ಆಯ್ಕೆಯನ್ನು ಹೊಂದಿತ್ತು. ಭಾರತೀಯ ರೈಲ್ವೆಯು ಸಾಗಾಣಿಕೆ

[66] 2008–09 ಹಾಗೂ 2009–10ರಲ್ಲಿ ಟ್ರೈನನ್ನು ವರ್ಷಪೂರ್ತಿ ಚಲಿಸಲಾಗಿತ್ತು. ನೆಲೆಸಿರುವಿಕೆಯು ಕಡಿಮೆ ಪ್ರಮಾಣದಲ್ಲಿ ಇದ್ದುದರಿಂದ, 2010–11ರಿಂದ ಜಾರಿಗೆ ಬರುವಂತೆ ಕಾರ್ಯಾಚರಣೆಗಳನ್ನು ವರ್ಷದ ಒಂದು ಕಾಲಕ್ಕೆ (ಅಕ್ಟೋಬರ್‌ನಿಂದ ಮಾರ್ಚ್) ಸೀಮಿತಗೊಳಿಸಲಾಗಿತ್ತು. ಆದ್ದರಿಂದ, 2010–11ರಲ್ಲಿನ ಹೆಚ್ಚಳದ ದರವು ಅಸಹಜವಾಗಿತ್ತು.

ವೆಚ್ಚಗಳನ್ನು ಒಂದು ಟ್ರಿಪ್ಪಿನಲ್ಲಿ ಓಡಿಸಲಾದ ಬೋಗಿಗಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸುತ್ತಿದ್ದರಿಂದ, ಕಡಿಮೆ ಪ್ರಮಾಣದ ನೆಲೆಸಿರುವಿಕೆ ಇದ್ದ ಸಂದರ್ಭದಲ್ಲಿ ಕಡಿಮೆ ಸಂಖ್ಯೆಯ ಪ್ರಯಾಣಿಕ ಬೋಗಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಕೆಎಸ್‌ಟಿಡಿಸಿಗೆ ಅನುಕೂಲಕರವಾಗಿರುತ್ತಿತ್ತು.

2008–09ರಿಂದ 2013–14ರ ಸಾಲುಗಳಲ್ಲಿ 85 ಟ್ರಿಪ್ಪುಗಳಿಗೆ ಸಂಬಂಧಿಸಿದಂತೆ 1ರಿಂದ 68 ಪ್ರಯಾಣಿಕರಿದ್ದು, ಅವುಗಳಿಗೆ ಒಂಬತ್ತು ಪ್ರಯಾಣಿಕ ಭೋಗಿಗಳು ಸಮರ್ಪಕವಾಗಿದ್ದರೂ ಕೆಎಸ್‌ಟಿಡಿಸಿಯು ಎಲ್ಲಾ 11 ಪ್ರಯಾಣಿಕರ ಬೋಗಿಗಳನ್ನೂ ಕಾರ್ಯಾಚರಣೆಗೊಳಿಸಿತ್ತು ಎಂಬುದನ್ನು ನಾವು ಗಮನಿಸಿದೆವು. ಈ ರೀತಿಯಾಗಿ, ಕೆಎಸ್‌ಟಿಡಿಸಿಯು ಅಗತ್ಯತೆಗಿಂತ ಅಧಿಕವಾಗಿ ಬೋಗಿಗಳನ್ನು ಓಡಿಸಿದ್ದರ ಪರಿಣಾಮವಾಗಿ ₹ 0.86 ಕೋಟಿ ಮೊತ್ತದಷ್ಟು ಹೆಚ್ಚುವರಿ ಸಾಗಾಣಿಕೆ ವೆಚ್ಚವನ್ನು ಪಾವತಿಸಬೇಕಾಯಿತು. ಮುಂದುವರೆದು, ಕೆಎಸ್‌ಟಿಡಿಸಿಯು ಕಡಿಮೆಗೊಳಿಸಲಾದ ಸಾಗಾಣಿಕೆ ವೆಚ್ಚವನ್ನು ಪಾವತಿಸುವ ಅನುಕೂಲತೆಯನ್ನು ಪಡೆದುಕೊಳ್ಳುವುದಕ್ಕಾಗಿ ಒಂಬತ್ತಕ್ಕಿಂತ ಕಡಿಮೆ ಪ್ರಮಾಣದ ಪ್ರಯಾಣಿಕ ಬೋಗಿಗಳನ್ನು ಕಾರ್ಯಾಚರಣೆಗೊಳಿಸುವ ಸಾಧ್ಯತೆಯನ್ನು ಕಂಡುಕೊಳ್ಳಲಿಲ್ಲ.

***ಪರಿಚಯಾತ್ಮಕ ಪ್ರವಾಸಗಳಲ್ಲಿ ಹಾಗೂ ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇಲೆ ಪಯಣಿಸಿದ್ದ ಪ್ರಯಾಣಿಕರು.***

**3.1.14.** ಸುವರ್ಣ ರಥವನ್ನು ವಿಶ್ವದಾದ್ಯಂತ ಪರಿಚಯಿಸುವುದಕ್ಕಾಗಿ ಹಾಗೂ ಅದರಿಂದಾಗಿ ಆ ಟ್ರೈನಿನಲ್ಲಿ ಪ್ರಯಾಣಿಸಲು ಜನತೆಯನ್ನು ಆಕರ್ಷಿಸುವ ಸಲುವಾಗಿ ಪರಿಚಯಾತ್ಮಕ[67] ಟ್ರಿಪ್ಪುಗಳನ್ನು ಭಾರತದಿಂದ ಹಾಗೂ ವಿಶ್ವದ ವಿವಿಧ ಭಾಗಗಳ ಮೂಲತ: ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಂದ ಬಂದವರು, ಪ್ರವಾಸ ಲೇಖಕರು, ಪತ್ರಕರ್ತರು, ಇತ್ಯಾದಿ ಜನರಿಗೆ ವ್ಯವಸ್ಥೆ ಮಾಡಲಾಗಿತ್ತು. ಅದೇ ರೀತಿಯಲ್ಲಿ, ಅತ್ಯಂತ ಪ್ರಮುಖ ವ್ಯಕ್ತಿಗಳು ಎಂಬುದಾಗಿ ಪರಿಗಣಿಸಲ್ಪಟ್ಟಂತಹ ಪ್ರಯಾಣಿಕರನ್ನು ಪ್ರಕರಣವಾರು ಆಧಾರದ ಮೇರೆಗೆ ಕೆಎಸ್‌ಟಿಡಿಸಿಯ ವ್ಯವಸ್ಥಾಪನಾ ಪಾಲುದಾರರು ಹಾಗೂ ಸಾಮಾನ್ಯ ಮಾರಾಟ ಪ್ರತಿನಿಧಿಗಳ ಪರವಾಗಿ ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗೆ ಪ್ರಯಾಣಿಸಲು ಅನುವು ಮಾಡಲಾಗಿತ್ತು.

ಪರಿಚಯಾತ್ಮಕ ಟ್ರಿಪ್ಪುಗಳು/ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗಿನ ಅತಿಥಿಗಳಿಗೆ ಸಂಬಂಧಿಸಿದ ಕೆಎಸ್‌ಟಿಡಿಸಿಯ ಕಾರ್ಯನೀತಿಯ ಪ್ರಕಾರ, ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗಿನ ಅತಿಥಿಗಳಿಗೆ ಸುವರ್ಣ ರಥದಲ್ಲಿ ಪ್ರಯಾಣಿಸುವುದಕ್ಕಾಗಿ ಯಾವುದೇ ವೆಚ್ಚವನ್ನೂ ವಿಧಿಸುವಂತಿಲ್ಲ, ಆದರೆ ಬಾರು, ವ್ಯಾಪಾರ ಕೇಂದ್ರ, ಆರೋಗ್ಯ ಕ್ಲಬ್ಬು ಮುಂತಾದ ಇತರೆ ಅನುಕೂಲತೆಗಳ ಬಳಕೆಗಾಗಿನ ವೆಚ್ಚಗಳನ್ನು ವಿಧಿಸಬೇಕು ಹಾಗೂ ಅಂತಹ ವೆಚ್ಚಗಳನ್ನು ಕೆಎಸ್‌ಟಿಡಿಸಿ ಹಾಗೂ ವ್ಯವಸ್ಥಾಪನಾ ಪಾಲುದಾರರು ಸಮನಾಗಿ ಹಂಚಿಕೊಳ್ಳತಕ್ಕದ್ದು. ಪ್ರತಿಯೊಂದು ಟ್ರಿಪ್ಪಿಗೂ ಗರಿಷ್ಠ ಐದು ಸದಸ್ಯರನ್ನು ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗೆ ಅನುವು ಮಾಡಬಹುದು ಎಂಬುದಾಗಿಯೂ ಕಾರ್ಯನೀತಿಯು ನಿರ್ದಿಷ್ಟಪಡಿಸಿತ್ತು.

ನಾವು ಗಮನಿಸಿದ್ದೇನೆಂದರೆ

- 31 ಟ್ರಿಪ್ಪುಗಳಿಗೆ ಅನುವು ಮಾಡಬಹುದಾಗಿದ್ದ 155 ಪ್ರಯಾಣಿಕರಿಗೆ ಪ್ರತಿಯಾಗಿ, 2008–09ರಲ್ಲಿ 286 ಪ್ರಯಾಣಿಕರನ್ನು ಅನುವು ಮಾಡಲಾಗಿತ್ತು ಹಾಗೂ 26 ಟ್ರಿಪ್ಪುಗಳಿಗೆ ಅನುವು ಮಾಡಬಹುದಾಗಿದ್ದ 130 ಪ್ರಯಾಣಿಕರಿಗೆ ಪ್ರತಿಯಾಗಿ 2009–10ರಲ್ಲಿ 153 ಪ್ರಯಾಣಿಕರಿಗೆ ಅನುವು ಮಾಡಲಾಗಿತ್ತು.
- 7 ಏಪ್ರಿಲ್ 2008 ಮತ್ತು 10 ಅಕ್ಟೋಬರ್ 2011ರ ನಡುವೆ ಕಾರ್ಯಾಚರಣೆಗೊಳಿಸಲಾದ 10 ಟ್ರಿಪ್ಪುಗಳಲ್ಲಿ, ಪರಿಚಯಾತ್ಮಕ/ ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ

[67] ಟ್ರೈನಿನ ಬಗ್ಗೆ ವಿಶ್ವಾದ್ಯಂತ ಪ್ರಚಾರ ಮಾಡುವ ಸಲುವಾಗಿ, ಸಾಮಾನ್ಯವಾಗಿ ಬಿಬಿಸಿ, ನ್ಯಾಷನಲ್ ಜಿಯೋಗ್ರಾಫಿಕ್ ಚಾನಲ್, ಇತ್ಯಾದಿ ಮಾಧ್ಯಮಗಳಿಂದ ಬಂದಂತಹ ಜನರು ಹಾಗೂ ಮುದ್ರಣ ಮಾಧ್ಯಮದಿಂದ ಬಂದಂತಹ ಜನರನ್ನು ಸಹ ಸುವರ್ಣ ರಥದಲ್ಲಿ ಪ್ರಯಾಣಿಸಲು ಅನುವು ಮಾಡಲಾಗಿದೆ. ಅಂತಹ ಪ್ರವಾಸಕ್ಕಾಗಿ ಸ್ವತ: ಮಾಧ್ಯಮದವರಿಂದಲೇ ಕೋರಿಕೆಗಳು ಬರುತ್ತವೆ. ಈ ಪ್ರಯಾಣಿಕರನ್ನು ಪರಿಚಯಾತ್ಮಕ ಟ್ರಿಪ್ಪಿನ ಅತಿಥಿಗಳು ಎಂಬುದಾಗಿ ಕರೆಯಲಾಗುತ್ತದೆ.

ಆಧಾರದ ಮೇರೆಗಿನ ಅತಿಥಿಗಳ ಸಂಖ್ಯೆಯು, ಪಾವತಿಸಿ ಬಂದಿದ್ದ ಪ್ರಯಾಣಿಕರ ಸಂಖ್ಯೆಯನ್ನು ಮೀರಿತ್ತು. ಈ 10 ಟ್ರಿಪ್ಪುಗಳನ್ನು ಕಾರ್ಯಾಚರಣೆಗೊಳಿಸುವಲ್ಲಿ ಕೆಎಸ್‌ಟಿಡಿಸಿಯು ಸಾಗಾಣಿಕೆ ವೆಚ್ಚವನ್ನು ಭರಿಸಿದನಂತರ ಅನುಭವಿಸಿದ್ದ ನಷ್ಟವು ₹ 1.30 ಕೋಟಿ[68] ಆಗಿತ್ತು. 4 ಪ್ರಕರಣಗಳಲ್ಲಿ, ಪ್ರಯಾಣಿಕರ ಸಂಖ್ಯೆಯು ನಿರ್ದಿಷ್ಟಪಡಿಸಲಾಗಿದ್ದ ಕನಿಷ್ಠ ಸಂಖ್ಯೆಗಿಂತಲೂ ಕಡಿಮೆಯಿತ್ತು ಹಾಗೂ ಈ ಟ್ರಿಪ್ಪುಗಳನ್ನು ಕಾರ್ಯಾಚರಣೆಗೊಳಿಸುವಲ್ಲಿ ಯಾವ ಸಮರ್ಥನೆಯೂ ಇರಲಿಲ್ಲ.

- ಪರಿಚಯಾತ್ಮಕ ಟ್ರಿಪ್ಪುಗಳಲ್ಲಿ ಪ್ರಯಾಣಿಸುವವರಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಲಾಗಿರುವ ಷರತ್ತನ್ನು ಪೂರೈಸಿರಲಿಲ್ಲ. ವ್ಯಕ್ತಿಗಳು ಹಾಗೂ ಕಂಪನಿ/ಮಾಧ್ಯಮಗಳನ್ನು ಪ್ರತಿನಿಧಿಸುವ ವ್ಯಕ್ತಿಗಳ ವ್ಯಕ್ತಿಚಿತ್ರಣ ಹಾಗೂ ಪ್ರವಾಸಿ ಅನುಭವದ/ ಪ್ರವಾಸದ ನಂತರದ ವರದಿಗಳು/ಲೇಖನಗಳು ದಾಖಲೆಯಲ್ಲಿರಲಿಲ್ಲ. ಈ ರೀತಿಯಾಗಿ, ನೆಲೆಸಿರುವಿಕೆಯ ಸಂಖ್ಯೆಯನ್ನು ಉತ್ತಮಗೊಳಿಸಲು ಸುವರ್ಣ ರಥದ ಬಗ್ಗೆ ವಿಸ್ತೃತ ಪ್ರಚಾರವನ್ನು ನೀಡುವುದಕ್ಕಾಗಿ, ಪರಿಚಯಾತ್ಮಕ ಟ್ರಿಪ್ಪುಗಳನ್ನು ಮಾಡಿದ ವ್ಯಕ್ತಿಗಳು ಪ್ರವಾಸೋದ್ಯಮ ಕ್ಷೇತ್ರದಲ್ಲಿ ವೃತ್ತಿಪರರಾಗಿದ್ದರು ಎಂಬುದನ್ನು ಸೂಚಿಸುವಂತಹ ಯಾವುದೇ ದಾಖಲೆಗಳೂ ಇರಲಿಲ್ಲ.

- 2008–09ರಿಂದ 2010–11 ಸಾಲುಗಳಲ್ಲಿ ಕೆಎಸ್‌ಟಿಡಿಸಿಯು ವ್ಯವಸ್ಥಾಪನಾ ಪಾಲುದಾರರಿಗೆ ಪರಿಚಯಾತ್ಮಕ ಟ್ರಿಪ್ಪು ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗಿನ ಪ್ರವಾಸದ ಮೇಲೆ ಟ್ರೈನಿನ ಒಳಗೆ ಹಾಗೂ ಹೊರಗೆ ಭರಿಸಲಾದ ₹ 0.45 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಮರುತುಂಬಿಕೊಟ್ಟಿತು. ಪರಿಚಯಾತ್ಮಕ ಟ್ರಿಪ್ಪು/ ಅಭಿನಂದನಾಪೂರ್ವಕವಾಗಿ ನೀಡಲಾದ ಉಚಿತ ಪಾಸುಗಳ ಆಧಾರದ ಮೇರೆಗಿನ ಪ್ರವಾಸದ ಮೇಲಿನ ವೆಚ್ಚವನ್ನು ಹಂಚಿಕೊಳ್ಳಲು ಯಾವುದೇ ಖಚಿತ ಷರತ್ತುಗಳೂ ಇರಲಿಲ್ಲವಾದ್ದರಿಂದ, ಈ ವೆಚ್ಚವನ್ನು ಹಂಚಿಕೊಳ್ಳಲು ಕೆಎಸ್‌ಟಿಡಿಸಿಯು ತೆಗೆದುಕೊಂಡ ನಿರ್ಧಾರವು ಸೇವಾ ಒಡಂಬಡಿಕೆಯನ್ನು ಉಲ್ಲಂಘಿಸಿ ವ್ಯವಸ್ಥಾಪನಾ ಪಾಲುದಾರರಿಗೆ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು. ಅಂತಹ ಒಂದು ವ್ಯವಸ್ಥೆಯನ್ನು ಕಾರ್ಯಾಚರಣೆಯ ವೆಚ್ಚಗಳಲ್ಲಿ ಸಾಗಾಣಿಕೆಗೆ ಮಾಡಲಾದ ವೆಚ್ಚಗಳನ್ನು ಪರಿಗಣಿಸದೆಯೇ ಮಾಡಲಾಗಿತ್ತು.

ಮುಂದುವರೆದು, ಟ್ರೈನಿನ ಹೊರಗೆ ಮಾಡಲಾದ ಸಾರಿಗೆ ವೆಚ್ಚಗಳಿಗಾಗಿ, ಕೆಎಸ್‌ಟಿಡಿಸಿಯು ಪ್ರೈಡ್ ಆಫ್ ಸೌತ್‌ನ ಪ್ರತಿ ಟ್ರಿಪ್ಪಿಗೆ ₹ 65,000ವನ್ನು ಹಾಗೂ ಸದರ್ನ್ ಸ್ಪೆಂಡರ್‌ನ ಪ್ರತಿ ಟ್ರಿಪ್ಪಿಗೆ ₹ 1,50,000ವನ್ನು ವ್ಯವಸ್ಥಾಪನಾ ಪಾಲುದಾರರಿಂದ ಸಂಗ್ರಹಿಸಿತ್ತು. ಟ್ರಿಪ್ ಒಂದಕ್ಕೆ ವೆಚ್ಚಗಳನ್ನು 2008–09ರಲ್ಲಿ ನಿಗದಿಗೊಳಿಸಲಾಗಿತ್ತು. ಇಂಧನ, ನಿರ್ವಹಣೆ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಗಳು, ಇವೇ ಮುಂತಾದ ಕಾರ್ಯಾಚರಣೆ ವೆಚ್ಚಗಳು ಅಧಿಕಗೊಂಡಿದ್ದವಾದರೂ ಸಹ ಯಾವುದೇ ಪರಿಷ್ಕರಣೆಯನ್ನೂ ಮಾಡದೆ ಅದೇ ದರಗಳನ್ನು 2013–14ರಲ್ಲಿಯೂ ಸಹ ಮುಂದುವರೆಸಿಕೊಂಡು ಹೋಗಲಾಗಿತ್ತು.

**ಸಾಮಾನ್ಯ ಮಾರಾಟ ಪ್ರತಿನಿಧಿಗಳು**

**3.1.15.**ಸುವರ್ಣ ರಥದಲ್ಲಿ ಪ್ರಯಾಣಿಸುವ ಪ್ರವಾಸಿಗರಿಗೆ ಟಿಕೇಟುಗಳನ್ನು ಕಾಯ್ದಿರಿಸುವ ವ್ಯವಸ್ಥೆಯ ಉದ್ದೇಶಕ್ಕಾಗಿ ಕೆಎಸ್‌ಟಿಡಿಸಿಯು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಸಾಮಾನ್ಯ ಮಾರಾಟ ಪ್ರತಿನಿಧಿಗಳನ್ನು ನೇಮಕ ಮಾಡಿತ್ತು (2008–09). ಕೆಎಸ್‌ಟಿಡಿಸಿಯು ಸಾಮಾನ್ಯ ಮಾರಾಟ ಪ್ರತಿನಿಧಿಗಳೊಂದಿಗೂ ಷರತ್ತುಗಳು ಮತ್ತು ನಿಬಂಧನೆಗಳನ್ನು ನಿರ್ದಿಷ್ಟಪಡಿಸಿ ಒಡಂಬಡಿಕೆಗಳನ್ನು ಮಾಡಿಕೊಂಡಿತ್ತು. ಅವಧಿಯ ಮುಕ್ತಾಯಗೊಂಡಂತೆಲ್ಲಾ ಒಡಂಬಡಿಕೆಗಳನ್ನು ನವೀಕರಿಸಲಾಗುತ್ತಿತ್ತು.

***ಒಡಂಬಡಿಕೆಯನ್ನು ಉಲ್ಲಂಘಿಸಿ ಅನುಕೂಲತೆಗಳನ್ನು ನೀಡಿದ್ದುದು***

**3.1.16.** ಒಂದು ಏಕೈಕ ಟ್ರಿಪ್ಪಿನಲ್ಲಿ ಹದಿನೈದು ಪ್ರಯಾಣಿಕರನ್ನು ನೋಂದಾಯಿಸಿಕೊಟ್ಟಲ್ಲಿ ಸಾಮಾನ್ಯ ಮಾರಾಟ ಪ್ರತಿನಿಧಿಗಳಿಗೆ ಅಭಿನಂದನಾಪೂರ್ವಕವಾಗಿ ಒಂದು ಆಸನವನ್ನು ನೀಡಲು ಸಾಮಾನ್ಯ ಮಾರಾಟ ಪ್ರತಿನಿಧಿಗಳ ಜೊತೆ ಮಾಡಿಕೊಳ್ಳಲಾಗಿದ್ದ ಒಡಂಬಡಿಕೆಯ ಷರತ್ತು ಅನುವು ಮಾಡಿತ್ತು.

[68] ಕಂಡಿಕೆ ಸಂಖ್ಯೆ 3.1.12ರಲ್ಲಿ ವಿಮರ್ಶಿಸಿರುವ ಟ್ರಿಪ್ಪು ಸಂಖ್ಯೆ 2,3, 35 ಹಾಗೂ 70ರ ನಷ್ಟವನ್ನು ಹೊರತುಪಡಿಸಿ.

ಕೆಎಸ್‌ಟಿಡಿಸಿಯು ಐದು ಸಂದರ್ಭಗಳಲ್ಲಿ ಈ ಷರತ್ತನ್ನು ಉಲ್ಲಂಘಿಸಿದ್ದನ್ನು ಪರೀಕ್ಷಾ ಪರಿಶೀಲನೆಯಲ್ಲಿ ನಾವು ಗಮನಿಸಿದೆವು.

ಸಾಮಾನ್ಯ ಮಾರಾಟ ಪ್ರತಿನಿಧಿಗಳ ಜೊತೆ ಮಾಡಿಕೊಳ್ಳಲಾಗಿದ್ದ ಒಡಂಬಡಿಕೆಯ ಷರತ್ತುಗಳು, ಮಾರಾಟ ಮಾಡಿಕೊಡಲಾದ ಟಿಕೇಟುಗಳ ಮೌಲ್ಯದ ಶೇಕಡಾ 17ರ ದರದಲ್ಲಿ ಕಮಿಷನ್ನಿಗೆ ಅನುವು ಮಾಡಿತ್ತಾದರೂ, ಕೆಎಸ್‌ಟಿಡಿಸಿಯು ಶೇಕಡಾ 20ರಿಂದ 25ರ ದರದಲ್ಲಿ ಕಮಿಷನ್ ನೀಡಿ ₹ 0.38 ಕೋಟಿಯಷ್ಟು ಹೆಚ್ಚುವರಿ ಲಾಭವನ್ನು ಮಾಡಿಕೊಟ್ಟಿತ್ತು.

***ಅಭಿನಂದನಾಪೂರ್ವಕ ಉಚಿತ ಪಾಸುಗಳು/ ಪರಿಚಯಾತ್ಮಕ ಟ್ರಿಪ್ ಪಾಸುಗಳ ನೀಡಿಕೆ***

**3.1.17.** ಕೆಎಸ್‌ಟಿಡಿಸಿಯ ಜೊತೆ ಮಾಡಿಕೊಳ್ಳಲಾಗಿದ್ದ ಒಡಂಬಡಿಕೆಯ ಪ್ರಕಾರ, ಅಂತಹ ಯಾವುದೇ ಅನುಕೂಲತೆಗೆ ಅರ್ಹರಿರಲಿಲ್ಲವಾದರೂ ಸಾಮಾನ್ಯ ಮಾರಾಟ ಪ್ರತಿನಿಧಿಗಳ ಪರವಾಗಿ ಅಭಿನಂದನಾಪೂರ್ವಕ ಮತ್ತು ಪರಿಚಯಾತ್ಮಕ ಟ್ರಿಪ್ಪುಗಳಲ್ಲಿ ಪ್ರಯಾಣಿಸಲು 29 ಪ್ರಯಾಣಿಕರಿಗೆ ಅನುವು ಮಾಡಲಾಗಿತ್ತು ಎಂಬುದನ್ನು ನಾವು ಗಮನಿಸಿದೆವು. ಇದು ಕೆಎಸ್‌ಟಿಡಿಸಿಯ ಮೇಲೆ ₹ 0.52 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೊರಿಸಿತು.

***ಬ್ಯಾಂಕು ಖಾತರಿಗಳನ್ನು ಖಚಿತಪಡಿಸಿಕೊಳ್ಳದಿದ್ದುದು***

**3.1.18.** ಸಾಮಾನ್ಯ ಮಾರಾಟ ಪ್ರತಿನಿಧಿಗಳು ಕೆಎಸ್‌ಟಿಡಿಸಿಯ ಹೆಸರಿನಲ್ಲಿ ಎರಡು ವರ್ಷಗಳ ಅವಧಿಗೆ ಹಾಗೂ ಮತ್ತೊಂದು ವರ್ಷಕ್ಕೆ ವಿಸ್ತರಿಸುವ ರೀತಿಯಲ್ಲಿ ಭದ್ರತಾ ಠೇವಣಿ ಅಥವಾ ಅಪರಿವರ್ತನೀಯ ಬ್ಯಾಂಕು ಖಾತರಿಯ ರೂಪದಲ್ಲಿ ₹ 4 ಲಕ್ಷ ಮೊತ್ತದ ಕಾರ್ಯನಿರ್ವಹಣಾ ಭದ್ರತಾ ಠೇವಣಿಯನ್ನು ಒದಗಿಸುವ ಅಗತ್ಯತೆಯನ್ನು ಒಡಂಬಡಿಕೆಯ ಷರತ್ತುಗಳು ಹೊಂದಿದ್ದವು. 31 ಮಾರ್ಚ್ 2014ರಲ್ಲಿದ್ದಂತೆ, ಎಂಟು ಸಾಮಾನ್ಯ ಮಾರಾಟಗಳ ಪ್ರತಿನಿಧಿಗಳ ಜೊತೆಗಿನ ಒಡಂಬಡಿಕೆಗಳು ಚಾಲ್ತಿಯಲ್ಲಿದ್ದವು.

ಕೆಎಸ್‌ಟಿಡಿಸಿಯು ಸಾಮಾನ್ಯ ಮಾರಾಟ ಪ್ರತಿನಿಧಿಗಳು ಒದಗಿಸಿದ ಬ್ಯಾಂಕು ಖಾತರಿಗಳು ಆ ಊರ್ಜಿತಗೊಂಡಿರುವ ಬಗ್ಗೆ ಹಾಗೂ ಅವುಗಳ ಯಥಾರ್ಥತೆ ಬಗ್ಗೆ ಸಂಬಂಧಿತ ಬ್ಯಾಂಕುಗಳಿಂದ ಸ್ವತಂತ್ರ ಖಚಿತತೆಯನ್ನು ಪಡೆದುಕೊಂಡಿರಲಿಲ್ಲ. ಮುಂದುವರೆದು, ಮೂರು ಸಾಮಾನ್ಯ ಮಾರಾಟ ಪ್ರತಿನಿಧಿಗಳಿಗೆ[69] ಸಂಬಂಧಿಸಿದಂತೆ ಬ್ಯಾಂಕು ಖಾತರಿಗಳನ್ನು ದಾಖಲೆಗಳಲ್ಲಿ ಇಟ್ಟಿರಲಿಲ್ಲ.

ಇತರೆ ಸಾಮಾನ್ಯ ಮಾರಾಟ ಪ್ರತಿನಿಧಿಗಳಂತೆಯೇ ಟ್ರೈನಿಗೆ ಟಿಕೇಟುಗಳನ್ನು ಮಾರಾಟ ಮಾಡುತ್ತಿದ್ದ ಲಕ್ಷುರಿ ಹಾಲಿಡೇಸ್, ಇವರಿಂದ ಕೆಎಸ್‌ಟಿಡಿಸಿಯು ಭದ್ರತಾ ಠೇವಣಿಯನ್ನಾಗಲೀ ಅಥವಾ ಬ್ಯಾಂಕು ಖಾತರಿಯನ್ನಾಗಲೀ ಪಡೆದುಕೊಂಡಿರಲಿಲ್ಲ ಎಂಬುದನ್ನೂ ಸಹ ನಾವು ಗಮನಿಸಿದೆವು. ಟಿಕೇಟುಗಳ ಮಾರಾಟಕ್ಕೆ ಪ್ರತಿಯಾಗಿ ಲಕ್ಷುರಿ ಹಾಲಿಡೇಸ್, ಇವರು ನೀಡಿದ್ದ ಚೆಕ್ಕುಗಳು ಅನೇಕ ದೃಷ್ಟಾಂತಗಳಲ್ಲಿ ಹಿಂತಿರುಗಿ ಬಂದಿದ್ದವು (ಬೌನ್ಸ್), ಇದು ಬಾಕಿಗಳನ್ನು ವಸೂಲಾತಿ ಮಾಡದಿರುವಲ್ಲಿ ಪರಿಣಮಿಸಿತ್ತು. 31 ಮಾರ್ಚ್ 2014ರಲ್ಲಿದ್ದಂತೆ ಟಿಕೇಟುಗಳ ಮಾರಾಟಗಳ ಪ್ರತಿಯಾಗಿ ಲಕ್ಷುರಿ ಹಾಲಿಡೇಸ್ ₹ 0.29 ಕೋಟಿ ಮೊತ್ತವನ್ನು ಪಾವತಿಸಲು ಬಾಧ್ಯರಿದ್ದರು.

**ಹಣಕಾಸು ನಿರ್ವಹಣೆ**

***ಹಣವನ್ನು ಸ್ವೀಕರಿಸದೆಯೇ ಸೀಟು ಕಾಯ್ದಿರಿಸಿರುವಿಕೆಗೆ ಒಪ್ಪಿಗೆ***

**3.1.19.** ಟಿಕೇಟುಗಳ ಮಾರಾಟವು/ಸೀಟುಗಳ ಕಾಯ್ದಿರಿಸಿರುವಿಕೆಯು ಖಚಿತಗೊಂಡ ಸಮಯದಲ್ಲಿ ಟಿಕೇಟಿನ ಮೌಲ್ಯದ ಶೇಕಡಾ 20ರಷ್ಟನ್ನು ಪಾವತಿಸತಕ್ಕದ್ದು ಹಾಗೂ ಉಳಿದ ಶೇಕಡಾ 80ರಷ್ಟನ್ನು

[69] ದಿ ಇಂಡಿಯಾ ಎಕ್ಸ್‌ಪೀರಿಯನ್ಸ್, ಎಸ್‌ಡಿಯು ಟ್ರಾವೆಲ್ ಪ್ರೈವೇಟ್ ಲಿಮಿಟೆಡ್, ರಾಯಲ್ ಇಂಡಿಯಾ ಟ್ರೈನ್ ಜರ್ನೀಸ್.

ಟ್ರೈನು ಹೊರಡುವ ದಿನದ 30 ದಿನಗಳ ಮೊದಲು ಪಾವತಿಸತಕ್ಕದ್ದು ಎಂಬುದಾಗಿ ಸುವರ್ಣ ರಥದ ದರ ವಿಧಾನವು ನಿರ್ದಿಷ್ಟಪಡಿಸಿತ್ತು.

ಟ್ರೈನಿನ ಟಿಕೇಟುಗಳ ಮಾರಾಟ ವ್ಯವಸ್ಥೆ ಮಾಡಿದ್ದ ವ್ಯವಸ್ಥಾಪನಾ ಪಾಲುದಾರರಾದ ಲಕ್ಷುರಿ ಹಾಲಿಡೇಸ್ ಹಾಗೂ ಸಾಮಾನ್ಯ ಮಾರಾಟ ಪ್ರತಿನಿಧಿಗಳು ಟ್ರೈನು ಹೊರಟನಂತರ ಆರು ತಿಂಗಳುಗಳ ವಿಳಂಬದೊಂದಿಗೆ ಟಿಕೇಟು ಮೌಲ್ಯವನ್ನು ಪಾವತಿಸಿದ್ದರು. 2009–10ರಿಂದ 2013–14 ಸಾಲುಗಳಿಗೆ ವಿಳಂಬವಾಗಿ ಪಾವತಿಸಿದ್ದ ಮೊತ್ತಗಳ ಮೌಲ್ಯವು ₹ 9.80 ಕೋಟಿ ಆಗಿತ್ತು.

ಕೆಎಸ್‌ಟಿಡಿಸಿಯು ಸುವರ್ಣ ರಥದ ಪ್ರತಿಯೊಂದು ಟ್ರಿಪ್ಪಿಗೂ ಟ್ರೈನು ಹೊರಡುವ ಹದಿನೈದು ದಿನಗಳ ಮೊದಲು ಭಾರತೀಯ ರೈಲ್ವೆಗೆ ಸಾಗಾಣಿಕೆ ವೆಚ್ಚಗಳನ್ನು ಪಾವತಿಸಬೇಕಿತ್ತು ಎಂಬುದನ್ನು ನಾವು ಗಮನಿಸಿದೆವು. ಪ್ರತಿಯೊಂದು ಟ್ರಿಪ್ಪಿಗೂ ಪಾವತಿಸಬೇಕಿದ್ದ ಸಾಗಾಣಿಕೆ ವೆಚ್ಚಗಳು ₹ 0.19 ಕೋಟಿಯಿಂದ ₹ 0.40 ಕೋಟಿಯವರೆಗೂ ಆಗಿದ್ದವು, ಅದನ್ನು ಕೆಎಸ್‌ಟಿಡಿಸಿಯ ಓವರ್ ಡ್ರಾಫ್ಟ್ ಖಾತೆಯಿಂದ ಹೊರಸೆಳೆದ ಹಣಕಾಸಿನಿಂದ ಪಾವತಿಸಲಾಯಿತು. ತತ್ಪರಿಣಾಮವಾಗಿ, ಟಿಕೇಟಿನ ಮೌಲ್ಯ ಪಾವತಿಯಾಗುವವರೆಗೂ ಪಾವತಿಸುವವರೆಗೂ ಕೆಎಸ್‌ಟಿಡಿಸಿಯು ಪಾವತಿಸಲಾದ ಸಾಗಾಣಿಕೆ ವೆಚ್ಚಗಳ ಮೇಲೆ ಬಡ್ಡಿಯ ಹೊರೆಯನ್ನು ಹೊತ್ತುಕೊಳ್ಳಬೇಕಿತ್ತು. ಇದು ಹಣಕಾಸಿನ ಸಮರ್ಪಕ ನಿರ್ವಹಣೆಯ ಕೊರತೆಯನ್ನು ಸೂಚಿಸುತ್ತಿತ್ತು.

***ಹಣಕಾಸಿನ ತಾತ್ಕಾಲಿಕ ದುರುಪಯೋಗದ ಸಂಭವಕ್ಕೆ ದಾರಿ ಮಾಡಿಕೊಟ್ಟ ಆಂತರಿಕ ನಿಯಂತ್ರಣಗಳ ಅನುಪಸ್ಥಿತಿ***

**3.1.20.** ಸುವರ್ಣ ರಥದಲ್ಲಿ ಪ್ರಯಾಣಿಸುವ ಪ್ರಯಾಣಿಕರು ನೇರವಾಗಿ ಕೆಎಸ್‌ಟಿಡಿಸಿಯ ಮೂಲಕ ಅಥವಾ ಸಾಮಾನ್ಯ ಮಾರಾಟ ಪ್ರತಿನಿಧಿಗಳ ಮೂಲಕ ಅಥವಾ ಪ್ರವಾಸಿ ಏಜೆಂಟರ ಮೂಲಕ ತಮ್ಮ ಟಿಕೇಟುಗಳನ್ನು ಕಾಯ್ದಿರಿಸಬಹುದು. ಟಿಕೇಟುಗಳ ಮಾರಾಟದಿಂದ ಆ ರೀತಿ ಸಂಗ್ರಹಿಸಲಾದ ಮೊತ್ತವನ್ನು ಏಕ್ಸಿಸ್ ಬ್ಯಾಂಕಿನಲ್ಲಿ ಸುವರ್ಣ ರಥದ ಕಾರ್ಯಾಚರಣೆಗಾಗಿಯೇ ತೆರೆಯಲಾಗಿದ್ದ ಪ್ರತ್ಯೇಕ ಖಾತೆಗೆ ನೇರವಾಗಿ ಪಾವತಿಸಬೇಕಿತ್ತು.

1 ನವೆಂಬರ್ 2012ರಂದು ನಡೆಸಲಾದ ಟ್ರಿಪ್ಪಿಗಾಗಿ ಬೆಂಗಳೂರಿನ ಲಯನ್ಸ್ ಕ್ಲಬ್ 59 ಟಿಕೇಟುಗಳನ್ನು ಖರೀದಿಸಿತ್ತು ಹಾಗೂ ₹ 43.45 ಲಕ್ಷ ಮೊತ್ತವನ್ನು ಕೆಎಸ್‌ಟಿಡಿಸಿಗೆ ನಗದು ಹಾಗೂ ಚೆಕ್ಕುಗಳ ಮೂಲಕ ಪಾವತಿಸಿತ್ತು. ಒಟ್ಟು ಸ್ವೀಕರಿಸಲಾದ (ಅಕ್ಟೋಬರ್ 2012 ಹಾಗೂ ನವೆಂಬರ್ 2012) ₹ 43.45 ಲಕ್ಷ ಮೊತ್ತದ ಪೈಕಿ ನಗದು ರೂಪದಲ್ಲಿ ಸ್ವೀಕರಿಸಲಾದ ₹ 17.28 ಲಕ್ಷ ಮೊತ್ತವನ್ನು ಆರರಿಂದ 21 ದಿನಗಳ ನಂತರ ಬ್ಯಾಂಕಿಗೆ ಪಾವತಿಸಲಾಗಿತ್ತು.

ಟಿಕೇಟುಗಳ ಮಾರಾಟಕ್ಕೆ ಪ್ರತಿಯಾಗಿ ಸ್ವೀಕರಿಸಲಾದ ಹಾಗೂ ಬ್ಯಾಂಕಿಗೆ ಜಮೆ ಮಾಡಲಾದ ಮೊತ್ತಗಳನ್ನು ದೈನಂದಿನ ಆಧಾರದ ಮೇರೆಗೆ ಸಮನ್ವಯಗೊಳಿಸುವ ವ್ಯವಸ್ಥೆಇರಲಿಲ್ಲ. ಸ್ವೀಕರಿಸಲಾದ ದಿನದಂದು ಅಥವಾ ತದನಂತರದ ದಿನದಂದು ಹಣವನ್ನು ಬ್ಯಾಂಕಿಗೆ ಜಮೆ ಮಾಡದಿರಲು ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಇದು ಆಂತರಿಕ ನಿಯಂತ್ರಣಗಳ ಅನುಪಸ್ಥಿತಿಯನ್ನು ಪ್ರತಿಬಿಂಬಿಸುತ್ತಿತ್ತು. ವಿಳಂಬದಿಂದ ಕೂಡಿದ್ದ ಪಾವತಿ ಹಣಕಾಸಿನ ತಾತ್ಕಾಲಿಕ ದುರುಪಯೋಗಕ್ಕೆ ದಾರಿ ಮಾಡಿಕೊಡುವ ಸಂಭಾವ್ಯ ಅಪಾಯದಿಂದ ಕೂಡಿರುತ್ತದೆ.

***ಟಿಕೇಟು ದರ ಕಾರ್ಯನೀತಿಯ ಉಲ್ಲಂಘನೆ***

**3.1.21.** ಸುವರ್ಣ ರಥದ ದರ ವಿಧಾನದ ಪ್ರಕಾರ, ವಿವಿಧ ಅಂಶಗಳನ್ನು ಅಂದರೆ, ರಾಷ್ಟ್ರೀಯತೆ (ಭಾರತೀಯ ಅಥವಾ ವಿದೇಶಿಗ), ನೆಲೆಸುವಿಕೆ (ಏಕೈಕ, ಜೋಡಿ ಅಥವಾ ಮೂವರು) ಹಾಗೂ ಪ್ರಯಾಣದ ಹಾದಿಯನ್ನು (ಪ್ರೈಡ್ ಆಫ್ ಸೌತ್, ಸದರ್ನ್ ಸ್ಪ್ಲೆಂಡರ್) ಅವಲಂಬಿಸಿ ವಿವಿಧ ದರಗಳನ್ನು ವಿಧಿಸಲಾಗುತ್ತಿತ್ತು.

2013–14ರಲ್ಲಿ, ಕೆಎಸ್‌ಟಿಡಿಸಿಯು ಪ್ರೈಡ್ ಆಫ್ ಸೌತ್ ಟ್ರಿಪ್ಪನ್ನು ಕಾರ್ಯಾಚರಣೆ ಮಾಡಿತು (120ನೆಯ/25–11–2013), ಅದರಲ್ಲಿ ಜಪಾನ್ ರಾಷ್ಟ್ರೀಯತೆಯ 68 ಪ್ರಯಾಣಿಕರು ಒಂದು ಗುಂಪಾಗಿ ಟಿಕೇಟುಗಳನ್ನು ಖರೀದಿಸಿದ್ದರು. ಕೆಎಸ್‌ಟಿಡಿಸಿಯು ಅನ್ವಯಗೊಳ್ಳುವ ಕಮಿಷನ್ ಜೊತೆ ಸುವರ್ಣ ರಥಕ್ಕೆ ಚಾಲ್ತಿಯಲ್ಲಿದ್ದ ದರ ವಿಧಾನದ ಪ್ರಕಾರ ವಿಧಿಸಬೇಕಿದ್ದ ₹ 1.37 ಕೋಟಿಗೆ ಪ್ರತಿಯಾಗಿ ಸೇವಾ ತೆರಿಗೆಯನ್ನು ಒಳಗೊಂಡು ಒಟ್ಟಾರೆ ₹ 0.75 ಕೋಟಿ ಮೊತ್ತವನ್ನು ವಿಧಿಸಿತ್ತು. ಈ ಕ್ರಮದಿಂದಾಗಿ, ಕೆಎಸ್‌ಟಿಡಿಸಿಯು ₹ 0.62 ಕೋಟಿ ವರಮಾನವನ್ನು ಬಿಟ್ಟುಕೊಟ್ಟಿತ್ತು.

***ವ್ಯವಸ್ಥಾಪನಾ ಪಾಲುದಾರರ ಮೂಲಕ ಸೇವಾ ತೆರಿಗೆ ಮತ್ತು ಮೂಲದಲ್ಲಿಯೇ ಕಡಿತಗೊಂಡ ತೆರಿಗೆಯ ಪಾವತಿ***

**3.1.22.** ಕೆಎಸ್‌ಟಿಡಿಸಿಯು ಸಾಮಾನ್ಯ ಮಾರಾಟ ಪ್ರತಿನಿಧಿಗಳು ಹಾಗೂ ಇತರೆ ಪ್ರವಾಸಿ ಪ್ರತಿನಿಧಿಗಳು ಮಾರಾಟ ಮಾಡಿದ್ದ ಟಿಕೇಟುಗಳ ಮಾರಾಟ ಮೌಲ್ಯದ ಮೇಲೆ ನಿರ್ದಿಷ್ಟ ದರಗಳಲ್ಲಿ ಸೇವಾ ತೆರಿಗೆಯನ್ನು ವಸೂಲಿ ಮಾಡುತ್ತಿತ್ತು. ಅದೇ ರೀತಿ, ಅದು ಸಾಮಾನ್ಯ ಮಾರಾಟ ಪ್ರತಿನಿಧಿಗಳು ಹಾಗೂ ಇತರೆ ಪ್ರವಾಸಿ ಪ್ರತಿನಿಧಿಗಳಿಗೆ ಪಾವತಿಸಬೇಕಾದ ಕಮಿಷನ್ನಿನಿಂದ ತೆರಿಗೆಯನ್ನು ಮೂಲದಲ್ಲಿಯೇ ಕಡಿತಗೊಳಿಸುತ್ತಿತ್ತು. 2008–14ರ ಅವಧಿಯಲ್ಲಿ, ಕೆಎಸ್‌ಟಿಡಿಸಿಯು ₹ 1.13 ಕೋಟಿ ಮೊತ್ತದಷ್ಟು ಸೇವಾ ತೆರಿಗೆಯನ್ನು ಸಂಗ್ರಹಿಸಿತ್ತು ಹಾಗೂ ₹ 0.72 ಕೋಟಿ ಮೊತ್ತದಷ್ಟು ತೆರಿಗೆಯನ್ನು ಮೂಲದಲ್ಲಿಯೇ ಕಡಿತಗೊಳಿಸಿತ್ತು.

ಕೆಎಸ್‌ಟಿಡಿಸಿಯು ಆ ರೀತಿ ವಸೂಲಾತಿ ಮಾಡಿದ್ದ ತೆರಿಗೆಗಳನ್ನು ತನ್ನ ವ್ಯವಸ್ಥಾಪನಾ ಪಾಲುದಾರರ ಬಳಿ ಠೇವಣಿ ಇಟ್ಟಿತ್ತೇ ಹೊರತು ನಿರ್ದಿಷ್ಟ ಸಮಯದ ಒಳಗೆ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡುವುದನ್ನು ಖಚಿತಪಡಿಸಿಕೊಂಡಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು.

## ತುಲನಾತ್ಮಕ ಅಧ್ಯಯನ

**3.1.23.**ಸುವರ್ಣ ರಥದ ಕಾರ್ಯಾಚರಣೆಯ ಮಾದರಿಯಲ್ಲಿಯೇ, ರಾಜಾಸ್ಥಾನ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಆರ್‌ಟಿಡಿಸಿ) ಹಾಗೂ ಮಹಾರಾಷ್ಟ್ರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಎಂಟಿಡಿಸಿ)ಗಳೂ ಸಹ ಅನುಕ್ರಮವಾಗಿ 'ರಾಯಲ್ ರಾಜಾಸ್ಥಾನ್ ಆನ್ ವ್ಹೀಲ್ಸ್' ಹಾಗೂ 'ಡೆಕ್ಕನ್ ಒಡೆಸ್ಸೀ'ಗಳನ್ನು ಕಾರ್ಯಾಚರಣೆಗೊಳಿಸುತ್ತಿವೆ.

ಮೂರು ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು ವ್ಯವಸ್ಥಾಪನೆ/ಅತಿಥಿ ಸತ್ಕಾರ ಪಾಲುದಾರರ ಜೊತೆ ಮಾಡಿಕೊಂಡಿರುವ ಸೇವಾ ಒಡಂಬಡಿಕೆಗಳಲ್ಲಿ ಅಳವಡಿಸಿಕೊಂಡಿರುವ ಪ್ರಮುಖ ಪರಿಮಿತಿಗಳ ಒಂದು ತುಲನಾತ್ಮಕ ಅಧ್ಯಯನವು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

**ಕೋಷ್ಟಕ 3.1: ಮೂರು ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು ಮಾಡಿಕೊಂಡಿರುವ ಸೇವಾ ಒಡಂಬಡಿಕೆಗಳಲ್ಲಿನ ಪ್ರಮುಖ ಪರಿಮಿತಿಗಳ ತುಲನಾತ್ಮಕ ಅಧ್ಯಯನ.**

| ಕ್ರಮ ಸಂಖ್ಯೆ | ಪರಿಮಿತಿ | ಕೆಎಸ್‌ಟಿಡಿಸಿ | ಆರ್‌ಟಿಡಿಸಿ | ಎಂಟಿಡಿಸಿ |
|---|---|---|---|---|
| 1 | ಒಡಂಬಡಿಕೆಯ ಅವಧಿ | 10 ವರ್ಷಗಳಿಗೆ – ಮುಂದಿನ 5 ವರ್ಷಗಳವರೆಗೆ ವಿಸ್ತರಿಸಬಹುದು | - | ಮೂರು ವರ್ಷಗಳು – ಎಂಟಿಡಿಸಿ ಏಕಮಾತ್ರ ವಿವೇಚನೆಯಂತೆ ಮುಂದಿನ ಮೂರು ವರ್ಷಗಳಿಗೆ ವಿಸ್ತರಿಸಬಹುದು. |
| 2 | ವರಮಾನ ಹಂಚಿಕೆ | ಕೆಎಸ್‌ಟಿಡಿಸಿ ಹಾಗೂ ವ್ಯವಸ್ಥಾಪನ ಪಾಲುದಾರರ ನಡುವೆ 55:45 ಅನುಪಾತದಲ್ಲಿ | - | ಎಂಟಿಡಿಸಿ ಹಾಗೂ ವ್ಯವಸ್ಥಾಪನಾ ಪಾಲುದಾರರ ನಡುವೆ 75:25 ಅನುಪಾತದಲ್ಲಿ. ಅಲ್ಲದೇ, ವ್ಯವಸ್ಥಾಪನಾ ಪಾಲುದಾರರಿಗೆ ಒಂದು |

| ಕ್ರಮ ಸಂಖ್ಯೆ | ಪರಿಮಿತಿ | ಕೆಎಸ್‌ಟಿಡಿಸಿ | ಆರ್‌ಟಿಡಿಸಿ | ಎಂಟಿಡಿಸಿ |
|---|---|---|---|---|
| | | | | ಕಾರ್ಯಾಚರಣೆಯ ವರ್ಷಕ್ಕೆ ₹ 65 ಲಕ್ಷ ಮೊತ್ತದಂತೆ ವ್ಯವಸ್ಥಾಪನಾ ಶುಲ್ಕ, ಅದನ್ನು ಪ್ರತೀ ವರ್ಷವೂ ಶೇಕಡಾ 5ರ ದರದಲ್ಲಿ ಹೆಚ್ಚಳಗೊಳಿಸಿ ಪಾವತಿಸತಕ್ಕದ್ದು. |
| 3 | ಇತರೆ ವರಮಾನ (ಜಿಮ್, ಸ್ಪಾ ಹಾಗೂ ಬಾರು ಮಾರಾಟ) | ವ್ಯವಸ್ಥಾಪನ ಪಾಲುದಾರರು 'ಇತರೆ ವರಮಾನ'ವನ್ನು ಸಂಪೂರ್ಣವಾಗಿ ಉಳಿಸಿಕೊಳ್ಳಲು ಅರ್ಹರಿದ್ದರು.<br><br>ಯಾವುದೇ ಪರವಾನಗಿ ಶುಲ್ಕ ಇರುವುದಿಲ್ಲ. | ಈ ಉದ್ದೇಶಕ್ಕಾಗಿ ಯೇ ಒಂದು ಪ್ರತ್ಯೇಕ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿತ್ತು. ಪರವಾನಿಗೆದಾರರು ಆರ್‌ಟಿಡಿಸಿಗೆ ₹ 1.06 ಲಕ್ಷ ಪಾವತಿಸತಕ್ಕದ್ದು. ವರಮಾನವನ್ನು ಆರ್‌ಟಿಡಿಸಿ ಹಾಗೂ ಪರವಾನಿಗೆದಾರರ ನಡುವೆ 48:52 ಅನುಪಾತದಲ್ಲಿ ಹಂಚಿಕೊಳ್ಳತಕ್ಕದ್ದು. | ಅಂತಹ ವ್ಯವಸ್ಥೆ/ಹಂಚಿಕೆಯು ಇಲ್ಲ. |
| 4 | ಸಾಗಾಣಿಕೆ ವೆಚ್ಚಗಳು | ಕೆಎಸ್‌ಟಿಡಿಸಿಯು ಸಾಗಾಣಿಕೆಯ ಸಂಪೂರ್ಣ ವೆಚ್ಚವನ್ನು ಭರಿಸತಕ್ಕದ್ದು. ಸಾಗಾಣಿಕೆ ವೆಚ್ಚವನ್ನು ಪಾಲು ಮಾಡದೆಯೇ ಕೆಎಸ್‌ಟಿಡಿಸಿ ಹಾಗೂ ವ್ಯವಸ್ಥಾಪನಾ ಪಾಲುದಾರರ ನಡುವೆ ವರಮಾನ ಹಂಚಿಕೆ. | - | ಸಾಗಾಣಿಕೆ ವೆಚ್ಚವನ್ನು ಕಾರ್ಯಾಚರಣೆಗಳ ನಿವ್ವಳ ವರಮಾನದಿಂದ ಭರಿಸಲಾಗುತ್ತದೆ ಹಾಗೂ ಉಳಿದ ಮೊತ್ತವನ್ನು ಎಂಟಿಡಿಸಿ ಹಾಗೂ ವ್ಯವಸ್ಥಾಪನಾ ಪಾಲುದಾರರ ನಡುವೆ ಹಂಚಿಕೊಳ್ಳಲಾಗುವುದು |
| 5 | ಲಾಭದಾಯಕತೆ 2008–14 | ಕಾರ್ಯಾಚರಣೆಗಳು ಸಂಚಿತ ನಷ್ಟವನ್ನು ಅನುಭವಿಸಿದವು. | ಕಾರ್ಯಾಚರಣೆಗಳು 2011–12ರಿಂದ ಲಾಭದಾಯಕವಾಗಿ ನಡೆಯುತ್ತಿವೆ. ಗಳಿಸಲಾಗಿದ್ದ ಲಾಭ (2011–12ರಿಂದ 2013–14) ₹ 4.52 ಕೋಟಿ ಆಗಿತ್ತು. | ಕಾರ್ಯಾಚರಣೆಗಳು 2008–09 ಹಾಗೂ 2012–13 ಸಾಲುಗಳನ್ನು ಹೊರತುಪಡಿಸಿ ಲಾಭದಾಯಕವಾಗಿ ನಡೆಯುತ್ತಿವೆ. ಗಳಿಸಲಾಗಿದ್ದ ಲಾಭ (2008–09ರಿಂದ 2013–14) ₹ ಒಂದು ಕೋಟಿ. |

ನಾವು ಗಮನಿಸಿದ್ದೇನೆಂದರೆ

- ಒಡಂಬಡಿಕೆಯ ಅವಧಿಯು ಅಸಮಂಜಸವಾದ 10 ವರ್ಷಗಳ ದೀರ್ಘಾವಧಿಯದಾಗಿದ್ದು, ವರಮಾನ ಹಂಚಿಕೆಯ ಪ್ರಸಕ್ತ ವ್ಯವಸ್ಥೆಯು ಅದಕ್ಕೆ ಅನುಕೂಲಕರವಾಗಿಲ್ಲವಾದರೂ, ಒಡಂಬಡಿಕೆಯ ಅವಧಿಯು ಮುಕ್ತಾಯಗೊಳ್ಳುವವರೆಗೂ ಒಡಂಬಡಿಕೆಯ ಷರತ್ತುಗಳನ್ನು ಪರಿಷ್ಕರಿಸಲು ಕೆಎಸ್‌ಟಿಡಿಸಿಗೆ ಮತ್ಯಾವ ಆಯ್ಕೆಯೂ ಇರಲಿಲ್ಲ. ಇದು ಒಂದು ಹೊಸ ಸಾಹಸೋದ್ಯಮವಾಗಿರುವುದರಿಂದ, ಕಾರ್ಯಾಚರಣೆಗಳ ಸಮಂಜಸ ನಿರ್ಧರಣೆಗಾಗಿ ಕೆಎಸ್‌ಟಿಡಿಸಿಯು ಎಂಟಿಡಿಸಿಯ ರೀತಿಯಲ್ಲಿ ಅಲ್ಪಾವಧಿಯನ್ನು ನಿಗದಿಗೊಳಿಸಬೇಕಿತ್ತು.

- ಕೆಎಸ್‌ಟಿಡಿಸಿಯು ನಿಗದಿಗೊಳಿಸಿದ್ದ ವರಮಾನ ಹಂಚಿಕೆಯು ಪ್ರಮುಖ ಕಾರ್ಯಾಚರಣೆಯ ವೆಚ್ಚವಾಗಿದ್ದ ಸಾಗಾಣಿಕೆ ವೆಚ್ಚಕ್ಕೆ ಸಂಬಂಧ ಕಲ್ಪಿಸಿರಲಿಲ್ಲ. ಆದರೆ ಎಂಟಿಡಿಸಿಯು ಸಾಗಾಣಿಕೆ ವೆಚ್ಚವನ್ನು ಭರಿಸಿದ ನಂತರ ನಿಶ್ಚಿತ ವ್ಯವಸ್ಥಾಪನಾ ಶುಲ್ಕ ಹಾಗೂ ವರಮಾನದ ಪಾಲನ್ನು ಪಾವತಿಸಿತ್ತು. ಕೆಎಸ್‌ಟಿಡಿಸಿಯು ಸೇವಾ ಒಡಂಬಡಿಕೆಯನ್ನು ಎಂಟಿಡಿಸಿಯ ಒಡಂಬಡಿಕೆಯ (ಡಿಸೆಂಬರ್ 2003) ನಂತರ ಅಂತಿಮ ರೂಪಕ್ಕೆ ತಂದಿತ್ತಾದ್ದರಿಂದ (ಸೆಪ್ಟಂಬರ್ 2007),

ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕಿತ್ತು.

- ಸುವರ್ಣ ರಥದಲ್ಲಿ, ಜಿಮ್, ಸ್ಪಾ ಹಾಗೂ ಬಾರು ಮಾರಾಟ ಇಂತಹ ಸೇವೆಗಳಿಂದ ಬಂದಂತಹ ಇತರೆ ಆದಾಯವನ್ನು ವ್ಯವಸ್ಥಾಪನಾ ಪಾಲುದಾರರು ಉಳಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಆರ್‌ಟಿಡಿಸಿಯು ನಿಶ್ಚಿತ ಪರವಾನಗಿ ಶುಲ್ಕ ಹಾಗೂ ವರಮಾನದ ಪಾಲನ್ನು ವಸೂಲಾತಿ ಮಾಡುತ್ತಿತ್ತು ಹಾಗೂ ಎಂಟಿಡಿಸಿಯು ಅಂತಹ ಸೇವೆಗಳಿಗಾಗಿ ವರಮಾನ ಹಂಚಿಕೆಯ ಬಗ್ಗೆ ಚಿಂತಿಸಿರಲಿಲ್ಲ.

ವಿಷಯವನ್ನು ಸರ್ಕಾರದ ಗಮನಕ್ಕೆ ಜೂನ್ 2014ರಲ್ಲಿ ತರಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

## ನಿರ್ಣಯ

**ಯೋಜನೆಯನ್ನು ಉತ್ತಮ ರೀತಿಯಲ್ಲಿ ಚಿಂತಿಸಿರಲಿಲ್ಲವಾದ್ದರಿಂದ ಹಾಗೂ ಯೋಜಿಸಿರಲಿಲ್ಲವಾದ್ದರಿಂದ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವ ಹಾಗೂ ವಿಶಿಷ್ಟ ಪ್ರವಾಸಿ ಆಕರ್ಷಣೆಗಳನ್ನು ಪ್ರದರ್ಶಿಸುವ ಸುವರ್ಣ ರಥ ಯೋಜನೆಯ ಉದ್ದೇಶಗಳು ಈಡೇರಲಿಲ್ಲ. ಕಂಪನಿಯು ವ್ಯವಸ್ಥಾಪನಾ ಪಾಲುದಾರರಿಗೆ ಹಾಗೂ ಸಾಮಾನ್ಯ ಮಾರಾಟಗಳ ಪ್ರತಿನಿಧಿಗಳಿಗೆ ಕಮಿಷನನ್ನು ಕೂಡ ಅಧಿಕ ಪ್ರಮಾಣದಲ್ಲಿ ಪಾವತಿಸಿತ್ತು. ವ್ಯವಸ್ಥಾಪನಾ ಪಾಲುದಾರರ ಜೊತೆಗಿನ ದೀರ್ಘಾವಧಿಯ ಸೇವಾ ಒಡಂಬಡಿಕೆಯು, ಷರತ್ತುಗಳು ಕಂಪನಿಗೆ ಅನುಕೂಲಕರವಾಗಿರದಿದ್ದಾಗ್ಯೂ ಒಡಂಬಡಿಕೆಯ ಅವಧಿಯು ಮುಕ್ತಾಯಗೊಳ್ಳುವವರೆವಿಗೂ ಮುಂದುವರೆಯುವುದನ್ನು ಹೊರತುಪಡಿಸಿ ಕಂಪನಿಗೆ ಅನ್ಯ ಮಾರ್ಗವು ಇರಲಿಲ್ಲ ಎಂಬುದಾಗಿ ಅರ್ಥೈಸುತ್ತದೆ. ಕಾರ್ಯಾಚರಣೆಯಲ್ಲಿನ ಲೋಪದೋಷಗಳು ಅಗತ್ಯತೆಗಿಂತ ಅಧಿಕ ಭೋಗಿಗಳನ್ನು ಓಡಿಸಿದ್ದು ಹಾಗೂ ಇದರಿಂದಾಗಿ ಅನಗತ್ಯ ಸಾಗಾಣಿಕೆ ವೆಚ್ಚಗಳನ್ನು ಪಾವತಿಸುವಲ್ಲಿ ಪರಿಣಮಿಸಿದ್ದು, ನೆಲೆಸಿರುವಿಕೆಯು ನಿರ್ದಿಷ್ಟ ಪಡಿಸಿದ್ದ ಸಂಖ್ಯೆಗಿಂತ ಕಡಿಮೆ ಇದ್ದ ಸಂದರ್ಭದಲ್ಲಿಯೂ ಟ್ರೈನನ್ನು ಓಡಿಸಿದ್ದು ಇತ್ಯಾದಿಗಳನ್ನು ಒಳಗೊಂಡಿದ್ದವು. ಸರ್ಕಾರದಿಂದ ₹ 13.22 ಕೋಟಿ ಹಣಕಾಸು ಸಹಾಯವನ್ನು ಪಡೆದ ಹೊರತಾಗಿಯೂ, ವಿವಿಧ ಲೋಪದೋಷಗಳು ಕಂಪನಿಯು ತನ್ನ ಕಾರ್ಯಾಚರಣೆಯ ವೆಚ್ಚಗಳನ್ನೂ ಸಹ ವಸೂಲಾತಿ ಮಾಡದಿರುವುದಕ್ಕೆ ಕೊಡುಗೆ ನೀಡಿದ್ದವು.**

**ಇದರ ಫಲಿತಾಂಶವು ಕಂಪನಿಯು ₹ 27.11 ಕೋಟಿ (ಮಾರ್ಚ್ 2014) ನಷ್ಟದ ಹೊರೆಯನ್ನು ಹೊರುವಂತಾಯಿತು.**

## ಶಿಫಾರಸುಗಳು

- **ತನ್ನ ವರಮಾನದ ಪಾಲಿಗೆ ಅನುಗುಣವಾಗಿ ಸಾಗಾಣಿಕೆ ವೆಚ್ಚಗಳನ್ನು ಹಂಚಿಕೊಳ್ಳುವ ರೀತಿಯಲ್ಲಿ ಹಾಗೂ ಅದರಿಂದಾಗಿ ಪಾಲುದಾರರು ನೆಲೆಸಿರುವಿಕೆ ಪರಿಮಾಣವನ್ನು ಉತ್ತಮಗೊಳಿಸುವತ್ತ ಅವರನ್ನು ಒತ್ತಾಯಿಸುವ ಸಲುವಾಗಿ ಕಂಪನಿಯು ವ್ಯವಸ್ಥಾಪನಾ ಪಾಲುದಾರರ ಜೊತೆ ಪುನರ್–ಸಂಧಾನ ನಡೆಸಬೇಕು. ವ್ಯವಸ್ಥಾಪನಾ ಪಾಲುದಾರರು ಗಳಿಸಿದ 'ಇತರೆ ವರಮಾನ'ದಿಂದಲೂ ಸಹ ಒಂದು ನಿಶ್ಚಿತ ಮೊತ್ತವನ್ನು ಕಂಪನಿಯು ಹಂಚಿಕೊಳ್ಳಬೇಕು.**

- **ವ್ಯವಸ್ಥಾಪನಾ ಪಾಲುದಾರರು ಹಾಗೂ ಮಾರುಕಟ್ಟೆ ಪಾಲುದಾರರು ಮಾರಾಟ ಮಾಡಿದ ಟಿಕೇಟುಗಳ ಮೌಲ್ಯದ ಮೇಲಿನ ಕಮಿಷನನ್ನು ಸೇವಾ ಒಡಂಬಡಿಕೆಯ ಷರತ್ತುಗಳ ಪ್ರಕಾರವೇ ಪಾವತಿಸತಕ್ಕದ್ದು.**

- **ಟಿಕೇಟು ಕಾಯ್ದಿರಿಸಿರುವಿಕೆಗಳ ಮೇಲೆ ದರ ಕಾರ್ಯನೀತಿಗೆ ಕಂಪನಿಯು ಬದ್ಧವಾಗಿರಬೇಕು ಹಾಗೂ ದೊಡ್ಡ ಪ್ರಮಾಣದ ಟಿಕೇಟುಗಳ ಮಾರಾಟಗಳ ಮೇಲೆ ನೀಡಲಾಗುವ ಕಮಿಷನ್ ವಿವೇಚನೆಯಿಂದ ಕೂಡಿರಬೇಕು ಹಾಗೂ ಏಕಪ್ರಕಾರವಾಗಿರಬೇಕು.**

- **ಕಂಪನಿಯು, ನ್ಯಾಯಸಮ್ಮತ ರೀತಿಯಲ್ಲಿ ವರಮಾನವನ್ನು ಗಳಿಸುವುದಕ್ಕಾಗಿ ಮಾತ್ರವಲ್ಲದೇ ಸಾಂಸ್ಕೃತಿಕ ಪ್ರವಾಸೋದ್ಯಮದ ಪ್ರೋತ್ಸಾಹಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿಯೂ ಪರಿಚಯಾತ್ಮಕ**

**ಟ್ರಿಪ್ಪುಗಳಿಗೆ ಸಂಬಂಧಿಸಿದ ಪ್ರಯಾಣಿಕರ ಗರಿಷ್ಠ ಸಂಖ್ಯೆ ಹಾಗೂ ಪ್ರವಾಸದ ನಂತರದ ಲೇಖನಗಳಿಗೆ/ಬರಹಗಳಿಗೆ ಸಂಬಂಧಿಸಿದಂತೆ ಇರುವ ಷರತ್ತುಗಳಿಗೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು.**

- **ಮಾರುಕಟ್ಟೆ ವ್ಯವಸ್ಥೆಯ ಪಾಲುದಾರರಿಗೆ ಅವರ ಪಾಲಿನ ಮಾರುಕಟ್ಟೆ ನಿಧಿಯನ್ನು ಬಿಡುಗಡೆಗೊಳಿಸುವ ಮೊದಲು ಮಾರುಕಟ್ಟೆ ವ್ಯವಸ್ಥೆ ಹಾಗೂ ಪ್ರಚಾರದ ಮೇಲೆ ಅವರು ಭರಿಸಿದ ವೆಚ್ಚದ ಬಗ್ಗೆ ಮಾಹಿತಿಯನ್ನು ಪಡೆಯುವುದಕ್ಕಾಗಿ ಕಂಪನಿಯು ಒಂದು ವರದಿ ಸಲ್ಲಿಕೆ ವ್ಯವಸ್ಥೆಯನ್ನು ಸ್ಥಾಪಿಸಬೇಕು.**

- **ಸೇವಾ ಒಡಂಬಡಿಕೆಯನ್ನು ಪ್ರತೀ ಮೂರು ವರ್ಷಗಳಿಗೆ ಒಂದು ಸಲ ನವೀಕರಿಸಬೇಕು ಹಾಗೂ ವ್ಯವಸ್ಥಾಪನಾ ಪಾಲುದಾರರ ಕಾರ್ಯಸಾಧನೆಯ ಆಧಾರದ ಮೇರೆಗೆ ಹಾಗೂ ಕಂಪನಿಯ ಹಣಕಾಸಿನ ಆಸಕ್ತಿಯನ್ನು ಪರಿಗಣಿಸಿದಂತೆ ಷರತ್ತುಗಳು ಹಾಗೂ ನಿಬಂಧನೆಗಳನ್ನು ನವೀಕರಣದ ಸಮಯದಲ್ಲಿ ಪುನರ್–ನಿರ್ಧರಣೆ ಮಾಡಬೇಕು.**

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

### 3.2 *ನಿರ್ಮಿಸಲಾದ ಮೂಲಭೂತಸೌಕರ್ಯವನ್ನು ಬಳಸಿಕೊಳ್ಳದಿದ್ದುದು*

**ಬಾಕಿ ಇದ್ದಂತಹ ಬಿಲ್ಲುಗಳನ್ನು ಗುತ್ತಿಗೆದಾರರಿಗೆ ಪಾವತಿಸದಿದ್ದ ಕಾರಣ ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ₹ 19.41 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಮೂಲಭೂತಸೌಕರ್ಯವನ್ನು ಒಂದು ವರ್ಷದಿಂದಲೂ ಬಳಸಿಕೊಳ್ಳಲಾಗಿರಲಿಲ್ಲ. ಅಲ್ಲದೇ, ಈ ಅನುಕೂಲತೆಗಳನ್ನು ಯಾವ ಸಂಸ್ಥೆಯು ಕಾರ್ಯಾಚರಣೆಗೊಳಿಸಬೇಕು ಎಂಬುದರ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲವಾದ್ದರಿಂದ ₹ 4.11 ಕೋಟಿ ಮೊತ್ತದಷ್ಟು ವರಮಾನವು ನಷ್ಟವಾಗುವುದರಲ್ಲಿ ಪರಿಣಮಿಸಿದ್ದಲ್ಲದೇ ಈ ಅನುಕೂಲತೆಗಳಿಂದ ಪ್ರವಾಸಿಗರು ವಂಚಿತರಾದರು.**

ಕರ್ನಾಟಕದಲ್ಲಿ ಒಂದು ಗಿರಿಧಾಮವಾಗಿರುವ ಕೆಮ್ಮಣ್ಣುಗುಂಡಿಗೆ ಭೇಟಿ ಕೊಡುವ ಪ್ರವಾಸಿಗರಿಗೆ ಮೂಲಭೂತಸೌಕರ್ಯದ ಅನುಕೂಲತೆಗಳನ್ನು ಉತ್ತಮಪಡಿಸುವುದಕ್ಕಾಗಿ ವಿವಿಧ ಅಭಿವೃದ್ಧಿಯ ಕಾಮಗಾರಿಗಳನ್ನು[70] ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ (ಕಂಪನಿ) ವಹಿಸಲಾಯಿತು (ನವೆಂಬರ್ 2010). ಪ್ರವಾಸೋದ್ಯಮ ಇಲಾಖೆಯು ₹ 12.78 ಕೋಟಿ ವೆಚ್ಚದ ಒಂಭತ್ತು ಕಾಮಗಾರಿಗಳಿಗಾಗಿ ಅಂದಾಜುಗಳನ್ನು ಕಂಪನಿಗೆ ಕಳುಹಿಸಿಕೊಟ್ಟಿತು (ಡಿಸೆಂಬರ್ 2010).

ಕಂಪನಿಯು ಒಂಬತ್ತು ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಿತು (ಡಿಸೆಂಬರ್ 2010–ಏಪ್ರಿಲ್ 2011) ಹಾಗೂ ಕಾರ್ಯಗತಗೊಳಿಸುವುದಕ್ಕಾಗಿ ಓರ್ವ ಗುತ್ತಿಗೆದಾರರಿಗೆ ₹ 14.99 ಕೋಟಿ ಒಟ್ಟಾರೆ ಮೌಲ್ಯಕ್ಕೆ ನೀಡಿತು (ಏಪ್ರಿಲ್–ಜೂನ್ 2011). ಪ್ರವಾಸೋದ್ಯಮ ಇಲಾಖೆಯು ಕಾರ್ಯಗತಗೊಳಿಸುವುದಕ್ಕಾಗಿ ಕಂಪನಿಗೆ ವಹಿಸಿದ್ದ ಇನ್ನೂ ಮೂರು ಕಾಮಗಾರಿಗಳನ್ನು ಕಂಪನಿಯು ಗುತ್ತಿಗೆದಾರರುಗಳಿಗೆ ₹ 4.43 ಕೋಟಿಗೆ ನೀಡಿತು (ಏಪ್ರಿಲ್/ಜುಲೈ 2012). ಪ್ರವಾಸೋದ್ಯಮ ಇಲಾಖೆಯು ಯೋಜನೆಗಾಗಿ 2011–12 ಸಾಲಿನಲ್ಲಿ ಕೇವಲ ₹ 9.18 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿತ್ತು. ಪ್ರವಾಸೋದ್ಯಮ ಇಲಾಖೆಯು ಹಣಕಾಸನ್ನು ಬಿಡುಗಡೆಗೊಳಿಸದಿದ್ದ ಕಾರಣ ಕಾಮಗಾರಿಗಳನ್ನು ಅಮಾನತ್ತಿನಲ್ಲಿಡಲಾದ್ದರಿಂದ ಕಂಪನಿಯು ₹ 7.23 ಕೋಟಿ[71] ಮೊತ್ತದಷ್ಟು ಹಣಕಾಸನ್ನು ಬ್ಯಾಂಕುಗಳಿಂದ ಸಾಲವಾಗಿ ಪಡೆಯಿತು (ಜುಲೈ 2012ರಿಂದ ಏಪ್ರಿಲ್ 2013) ಹಾಗೂ ಗುತ್ತಿಗೆದಾರರಿಗೆ ಪಾವತಿಸಿತು. ಸಾಲವಾಗಿ ಪಡೆದ ಹಣಕಾಸಿನ ಮೇಲಿನ ₹ 0.92 ಕೋಟಿ (ಮಾರ್ಚ್

---

[70] ವಿವಿಧ ಬ್ಲಾಕುಗಳಲ್ಲಿ ಕಾಟೇಜುಗಳು/ಕೊಠಡಿಗಳ ವಿಸ್ತರಣೆ ಹಾಗೂ ಉನ್ನತದರ್ಜೆಗೆ ಏರಿಸುವಿಕೆ.

[71] ಸಾಲವಾಗಿ ಪಡೆದ ಹಣಕಾಸಿನ ಮೇಲಿನ 0.92 ಕೋಟಿ (ಮಾರ್ಚ್ 2014ರವರಗೆ) ಬಡ್ಡಿಯನ್ನು ಕಂಪನಿಯು ಭರಿಸಿತು.

2014ರವರೆಗೆ) ಮೊತ್ತದಷ್ಟು ಬಡ್ಡಿಯ ವೆಚ್ಚವನ್ನು ಕಂಪನಿಯು ಭರಿಸಿತು. ಕಾಮಗಾರಿಗಳು ಫೆಬ್ರವರಿ 2012 ಹಾಗೂ ಮೇ 2013ರ ನಡುವೆ ₹ 19.42 ಕೋಟಿಗಳ[72] ವೆಚ್ಚದಲ್ಲಿ ಪೂರ್ಣಗೊಂಡಿದ್ದವು.

ಕಾಮಗಾರಿಗಳು ಮೇ 2013ರಲ್ಲಿ ಪೂರ್ಣಗೊಂಡಿದ್ದವಾದರೂ, ಆಸ್ತಿಗಳ ಸ್ವಾಧೀನವನ್ನು ಒಂದು ವರ್ಷಕ್ಕಿಂತಲೂ[73] ಅಧಿಕ ವಿಳಂಬದ ನಂತರ ಕೇವಲ ಜುಲೈ 2014ರಲ್ಲಿ ಪಡೆಯಲಾಯಿತು ಹಾಗೂ ಪ್ರವಾಸೋದ್ಯಮ ಇಲಾಖೆಯು ಹಣಕಾಸನ್ನು ಬಿಡುಗಡೆಗೊಳಿಸಿರಲಿಲ್ಲವಾದ್ದರಿಂದ ₹ 3.35 ಕೋಟಿ ಬಾಕಿ ಪಾವತಿಗಳನ್ನು ಗುತ್ತಿಗೆದಾರರಿಗೆ ಬಿಡುಗಡೆಗೊಳಿಸಿರಲಿಲ್ಲ (ಅಕ್ಟೋಬರ್ 2014) ಎಂಬುದನ್ನು ನಾವು ಗಮನಿಸಿದೆವು.

ತೋಟಗಾರಿಕೆ ಇಲಾಖೆಯ ನಿರ್ದೇಶಕರು ಕೂಡ ಹಾಜರಿದ್ದ ಅಕ್ಟೋಬರ್ 2010ರಲ್ಲಿ ನಡೆಸಲಾದ ಒಂದು ಸಭೆಯಲ್ಲಿ, ಕಾಮಗಾರಿಗಳು ಪೂರ್ಣಗೊಂಡನಂತರ, ನಿರ್ವಹಣೆಗಾಗಿ ಮೂರು ಯೋಜನೆಗಳನ್ನು ತೋಟಗಾರಿಕೆ ಇಲಾಖೆಗೆ ವಹಿಸತಕ್ಕದ್ದು ಹಾಗೂ ಆರು ಯೋಜನೆಗಳನ್ನು ಕಂಪನಿಯು ನಿರ್ವಹಿಸತಕ್ಕದ್ದು ಎಂಬುದಾಗಿ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ನಿರ್ದೇಶಿಸಿದ್ದರು. ನುರಿತ/ತಜ್ಞ ಸಿಬ್ಬಂದಿಯ ಕೊರತೆಯ ಕಾರಣ ಆಸ್ತಿಗಳ ನಿರ್ವಹಣೆಯು ತನ್ನಿಂದ ಸಾಧ್ಯವಿಲ್ಲವೆಂಬುದಾಗಿಯೂ ಹಾಗೂ ಪ್ರವಾಸೋದ್ಯಮ ಅನುಕೂಲತೆಗಳನ್ನು ಕಂಪನಿಯು ಒಂದು ಪರಸ್ಪರ ಒಡಂಬಡಿಕೆಯ ಮೂಲಕ ನಿರ್ವಹಿಸಬಹುದು ಎಂಬುದಾಗಿ ತೋಟಗಾರಿಕೆ ಇಲಾಖೆಯು ಅಭಿಪ್ರಾಯ ಪಟ್ಟಿತು (ನವೆಂಬರ್ 2013). ಅಗತ್ಯ ಆದೇಶಗಳನ್ನು ನೀಡುವಂತೆ ಪ್ರವಾಸೋದ್ಯಮ ಇಲಾಖೆಯು ತೋಟಗಾರಿಕೆ ಇಲಾಖೆಯನ್ನು ಕೋರಿತು (ಫೆಬ್ರವರಿ 2014). ಆದಾಗ್ಯೂ, 22 ಜುಲೈ 2014ರಂದು ನಡೆದ ಒಂದು ಸಭೆಯಲ್ಲಿ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಮಂತ್ರಿಯವರು ನಿರ್ದೇಶನ ನೀಡಿದ ನಂತರವಷ್ಟೇ ತೋಟಗಾರಿಕೆ ಇಲಾಖೆಯು ಆಸ್ತಿಗಳನ್ನು 26 ಜುಲೈ 2014ರಂದು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಆದರೆ, ಈ ಆಸ್ತಿಗಳನ್ನು ವರಮಾನವನ್ನು ಉತ್ಪತ್ತಿ ಮಾಡುವ ರೀತಿಯಲ್ಲಿ ಕಾರ್ಯಾರ್ಥಗೊಳಿಸಿರಲಿಲ್ಲ.

ಈ ರೀತಿಯಾಗಿ, ₹ 19.42 ಕೋಟಿ ವೆಚ್ಚದಲ್ಲಿ ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ನಿರ್ಮಿಸಲಾದ ಮೂಲಭೂತಸೌಕರ್ಯಗಳನ್ನು ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸದಿದ್ದುದರಿಂದ ಕಾರಣ ಹಾಗೂ ಆಸ್ತಿಗಳು/ಯೋಜನೆಗಳ ಕಾರ್ಯಾಚರಣೆಗಳನ್ನು ಯಾವ ಸಂಸ್ಥೆಯು ನಿರ್ವಹಿಸಬೇಕು ಎಂಬುದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿರಲಿಲ್ಲವಾದ್ದರಿಂದ ಒಂದು ವರ್ಷಕ್ಕೂ ಅಧಿಕ ಅವಧಿಗೆ ಬಳಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಇದು ₹ 4.11 ಕೋಟಿ[74](ಜೂನ್ 2013 ರಿಂದ ಜುಲೈ 2014) ಮೊತ್ತದಷ್ಟು ವರಮಾನದ ನಷ್ಟ ಸಂಭವಿಸುವಲ್ಲಿ ಪರಿಣಮಿಸಿತು. ಪ್ರಮುಖವಾಗಿ, ಗಿರಿಧಾಮಕ್ಕೆ ಭೇಟಿಕೊಡುವ ಪ್ರವಾಸಿಗರಿಗೆ ಉತ್ತಮ ಅನುಕೂಲತೆಗಳನ್ನು ಒದಗಿಸುವ ಉದ್ದೇಶವನ್ನು ಈವರೆಗೂ ಈಡೇರಿಸಲಾಗಿಲ್ಲ (ಅಕ್ಟೋಬರ್ 2014).

ವಿಷಯವನ್ನು ಸರ್ಕಾರಕ್ಕೆ ಜೂನ್ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

[72] ಅಂತಿಮ ಪಾವತಿ ಇನ್ನೂ ಆಗಬೇಕಾಗಿರುವುದರಿಂದ ಕಾರ್ಯಾದೇಶಗಳ ವೆಚ್ಚ (ಆಗಸ್ಟ್ 2014).

[73] ಎರಡು ಕಾಮಗಾರಿಗಳನ್ನು (ಕಾರಂಜಿ ಮತ್ತು ಸಂಬಂಧಿತ ಕಾಮಗಾರಿಗಳು ಮತ್ತು ಗಾಜಿನ ಮನೆ) ತೋಟಗಾರಿಕೆ ಇಲಾಖೆಗೆ ವಹಿಸಲಾಗಿದೆ ಎಂಬುದಾಗಿ ಹೇಳಲಾಗಿತ್ತು (ಏಪ್ರಿಲ್ 2014).

[74] ಕಂಪನಿಯು ಲೆಕ್ಕ ಹಾಕಿರುವಂತೆ, ಕೊಠಡಿಗಳಲ್ಲಿ ನೆಲೆಸಿರುವಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳ ಆದಾಯದ ಶೇಕಡಾ 60ರಂತೆ ಲೆಕ್ಕಹಾಕಲಾಗಿದೆ.

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

### 3.3 ಕೆಟ್ಟ ಯೋಜನೆಯ ಕಾರಣ ಆಸ್ತಿಗಳು ವ್ಯರ್ಥವಾಗಿ ಉಳಿದಿದ್ದುದು

**ಧ್ವನಿ ಮತ್ತು ಬೆಳಕು ಪ್ರದರ್ಶನ ಕಾರ್ಯಕ್ರಮದ ಸೆಟ್ಟುಗಳು/ಬಿಡಿಭಾಗಗಳ ಪುನರ್–ಬಳಕೆಗಾಗಿ ಮಾಡಲಾದ ಅಸಮರ್ಪಕ ಯೋಜನೆಯು ₹ 2.12 ಕೋಟಿ ಮೊತ್ತದಷ್ಟು ಆಸ್ತಿಗಳು ವ್ಯರ್ಥವಾಗಿ ಉಳಿಯುವಲ್ಲಿ ಪರಿಣಮಿಸಿತು.**

ಶ್ರೀ ಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ವಾರ್ಷಿಕೋತ್ಸವ ಆಚರಣೆಯ ಸ್ಮರಣಾರ್ಥವಾಗಿ 20 ಜಿಲ್ಲೆಗಳಲ್ಲಿ ತಾತ್ಕಾಲಿಕ ಧ್ವನಿ ಮತ್ತು ಬೆಳಕು ಪ್ರದರ್ಶನಗಳ ವ್ಯವಸ್ಥೆ ಮಾಡುವಂತೆ ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕಂಪನಿ) ನಿರ್ದೇಶಿಸಿತು (ಡಿಸೆಂಬರ್ 2009).

ಈ ಉದ್ದೇಶಕ್ಕಾಗಿ, ಕಂಪನಿಯು ಟೆಂಡರಿಗೆ ಏಕೈಕ ಸವಾಲುದಾರರಾಗಿದ್ದ ಮೆ. ಇನ್ನೋವೇಟೀವ್ ಲೈಟಿಂಗ್ ಸಿಸ್ಟಮ್ಸ್ ಕಾರ್ಪೋರೇಷನ್‌ನೊಂದಿಗೆ (ಗುತ್ತಿಗೆದಾರರು) ₹ 3.99 ಕೋಟಿ[75] ವೆಚ್ಚದಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿತು (ಏಪ್ರಿಲ್ 2010). ಒಡಂಬಡಿಕೆಯ ಕಲಮು 7ರ ಪ್ರಕಾರ, ಯೋಜನೆಯು ಪೂರ್ಣಗೊಂಡನಂತರ ಗುತ್ತಿಗೆದಾರರು ತಾಂತ್ರಿಕ ಬಿಡಿಭಾಗಗಳು, ಸೌಂಡ್ ಟ್ರ್ಯಾಕ್ ಹಾಗೂ ಸೆಟ್ಟುಗಳನ್ನು ಕಂಪನಿಗೆ ಹಸ್ತಾಂತರಿಸಬೇಕಾಗಿತ್ತು.

ಗುತ್ತಿಗೆದಾರರು ಪ್ರದರ್ಶನಗಳನ್ನು ನವೆಂಬರ್ 2010 ಮತ್ತು ಮಾರ್ಚ್ 2011ರ ನಡುವೆ ನಡೆಸಿದ್ದರು. ಪ್ರದರ್ಶನಗಳು ಪೂರ್ಣಗೊಂಡನಂತರ, ಸೆಟ್ಟುಗಳು ಹಾಗೂ ತಾಂತ್ರಿಕ ಬಿಡಿಭಾಗಗಳನ್ನು ಸುಪರ್ದಿಗೆ ತೆಗೆದುಕೊಳ್ಳುವಂತೆ ಗುತ್ತಿಗೆದಾರರು ಕಂಪನಿಯನ್ನು ಕೋರಿದರು (ಏಪ್ರಿಲ್ 2011). ಕಂಪನಿಯು ಸಾಮಗ್ರಿಗಳ ದಾಸ್ತಾನಿಗೆ ಯಾವುದೇ ವ್ಯವಸ್ಥೆಯನ್ನೂ ಹೊಂದಿರಲಿಲ್ಲವಾದ್ದರಿಂದ, ದಾಸ್ತಾನು ಸ್ಥಳವನ್ನು ಒದಗಿಸುವಂತೆ ಕರ್ನಾಟಕ ರಾಜ್ಯ ಉಗ್ರಾಣ ನಿಗಮವನ್ನು ಕೋರಿತು (ಏಪ್ರಿಲ್ 2011), ಆದರೆ ಅದು ಸಾಧ್ಯವಾಗಲಿಲ್ಲ. ತದನಂತರ, ಕಂಪನಿಯ ಕೋರಿಕೆಯಂತೆ (ಏಪ್ರಿಲ್ 2011), ಗುತ್ತಿಗೆದಾರರು ಸಾಮಗ್ರಿಗಳ ದಾಸ್ತಾನಿಗಾಗಿ ಒಂದು ಶೆಡ್ಡನ್ನು ತಿಂಗಳು ಒಂದಕ್ಕೆ ₹ 22,500ದಂತೆ ಬಾಡಿಗೆಗೆ ತೆಗೆದುಕೊಂಡರು (ಏಪ್ರಿಲ್ 2011). ಉಗ್ರಾಣದ ವೆಚ್ಚವು ₹ 9.45 ಲಕ್ಷ (ಸೆಪ್ಟಂಬರ್ 2014) ಆಗಿತ್ತು, ಅದನ್ನು ಇನ್ನೂ ಪಾವತಿಸಬೇಕಿದೆ.

ಸೃಷ್ಟಿಸಲಾದ ಆಸ್ತಿಯನ್ನು ಹಸ್ತಾಂತರಿಸಲು ಕಂಪನಿಯು ಪ್ರವಾಸೋದ್ಯಮ ಇಲಾಖೆಯಿಂದ ನಿರ್ದೇಶನಗಳನ್ನು ಕೋರಿತು (ಮೇ 2011). ಮೂರು ವರ್ಷಗಳು ಕಳೆದನಂತರವೂ, ಕಂಪನಿಯು ಸೆಟ್ಟುಗಳು ಹಾಗೂ ತಾಂತ್ರಿಕ ಬಿಡಿಭಾಗಗಳನ್ನು ಸ್ವಾಧೀನಕ್ಕೆ ಇನ್ನೂ ತೆಗೆದುಕೊಳ್ಳಬೇಕಾಗಿದೆ(ಸೆಪ್ಟಂಬರ್ 2014).

₹ 2.12 ಕೋಟಿ ಮೌಲ್ಯದ ಸೆಟ್ಟುಗಳು ಹಾಗೂ ತಾಂತ್ರಿಕ ಬಿಡಿಭಾಗಗಳನ್ನು ಪುನರ್–ಬಳಸುವ ಸಲುವಾಗಿ ಕಂಪನಿಯು ಯಾವುದೇ ಪೂರ್ವಭಾವಿ ಯೋಜನೆಯನ್ನೂ ಹೊಂದಿರಲಿಲ್ಲ ಎಂಬುದನ್ನು ಗಮನಿಸಲಾಯಿತು. ಪ್ರಾಸಂಗಿಕವಾಗಿ, ಶ್ರೀರಂಗಪಟ್ಟಣ ಕೋಟೆಯಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನವನ್ನು ಸ್ಥಾಪಿಸುವುದಕ್ಕಾಗಿ ಕಂಪನಿಯು ಟೆಂಡರುಗಳನ್ನು ಡಿಸೆಂಬರ್ 2011ರಲ್ಲಿ ಆಹ್ವಾನಿಸಿತು ಎಂಬುದನ್ನು ಗಮನಿಸಲಾಯಿತು. ಬಳಸಲಾಗಿದ್ದ ತಾಂತ್ರಿಕ ಬಿಡಿಭಾಗಗಳು ಒಂದೇ ವಿಧವಾಗಿದ್ದರಿಂದ, ₹ 0.80 ಕೋಟಿ ಮೌಲ್ಯದ್ದಾಗಿದ್ದ ಅವುಗಳನ್ನೇ ಈ ಪ್ರದರ್ಶನದಲ್ಲಿಯೂ ಬಳಸಬಹುದಾಗಿತ್ತು. ಈ ರೀತಿಯಾಗಿ ಯೋಜನಾ ವೆಚ್ಚವನ್ನು ಅಷ್ಟರ ಮಟ್ಟಿಗೆ ಕಡಿಮೆಗೊಳಿಸಬಹುದಾಗಿತ್ತು. ಮುಂದುವರೆದು, ಗುತ್ತಿಗೆದಾರರು ಹಿಂತಿರುಗಿಸಿದ್ದ ಸಾಮಗ್ರಿಗಳ ಬಳಕೆಗೆ ಕಂಪನಿಯು ಯಾವುದೇ ಪೂರ್ವಭಾವಿ ಯೋಜನೆಯನ್ನೂ ಮಾಡಿರಲಿಲ್ಲ.

---

[75] ಸೆಟ್ಟುಗಳ ಸರಬರಾಜಿಗೆ ₹ 1.32 ಕೋಟಿ , ತಾಂತ್ರಿಕ ಬಿಡಿಭಾಗಗಳಿಗೆ ₹ 0.80 ಕೋಟಿ, ಸೃಜನಾತ್ಮಕ ಬಿಡಿಭಾಗಗಳಿಗೆ ₹ 0.57 ಕೋಟಿ ಹಾಗೂ ಸಂಬಂಧಿತ ಮೂಲಭೂತಸೌಕರ್ಯಗಳಿಗೆ ₹ 1.30 ಕೋಟಿಯನ್ನು ಒಳಗೊಂಡಿದೆ.

ಪದೇಪದೇ ಮಾಡಲಾದ ಕೋರಿಕೆಗಳ ಹೊರತಾಗಿಯೂ, ಸೃಷ್ಟಿಸಲಾದ ಆಸ್ತಿಗಳನ್ನು ಒಪ್ಪಿಸುವುದಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಯು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂಬುದಾಗಿ ಕಂಪನಿಯು ಉತ್ತರಿಸಿತು (ಮೇ 2014). ಆದಾಗ್ಯೂ, ಆಸ್ತಿಗಳ ಪುನರ್–ಬಳಕೆಗೆ ಯಾವುದೇ ಪೂರ್ವಭಾವಿ ಯೋಜನೆಯೂ ಹೊಂದಿರದೇ ಇರುವುದರ ಜೊತೆಗೆ, ಈ ಆಸ್ತಿಗಳನ್ನು ಶ್ರೀರಂಗಪಟ್ಟಣ ಕೋಟೆಯಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನದಲ್ಲಿ ಬಳಸುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಈ ರೀತಿಯಾಗಿ, ಸಾಮಗ್ರಿಗಳನ್ನು ಪುನರ್–ಬಳಸಲು ಪೂರ್ವಭಾವಿ ಯೋಜನೆಯ ಕೊರತೆಯು ₹ 2.12 ಕೋಟಿ ಮೌಲ್ಯದ ಆಸ್ತಿಗಳು, ಕಳೆದ ಮೂರು ವರ್ಷಗಳಲ್ಲಿ ಆಸ್ತಿಗಳ ಮೌಲ್ಯ ಹಾಗೂ ಭೌತಿಕ ಸ್ಥಿತಿಗತಿಗಳು ಸಂಭಾವ್ಯ ಕೀಳುಮಟ್ಟಕ್ಕೆ ತಲುಪಿರಬಹುದರ ಜೊತೆಗೆ ವ್ಯರ್ಥವಾಗಿ ಉಳಿದಿರುವಲ್ಲಿ ಪರಿಣಮಿಸಿತು.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

### 3.4 *ನಿಷ್ಫಲ ವೆಚ್ಚ*

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ಬೆಳಗಾವಿಯ ಕಿತ್ತೂರು ಕೋಟೆಯಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನವನ್ನು ನಡೆಸಲು ಮೂಲಭೂತಸೌಕರ್ಯಗಳನ್ನು ಸೃಷ್ಟಿಸುವುದಕ್ಕಾಗಿ ₹ ಎರಡು ಕೋಟಿ ವೆಚ್ಚ ಮಾಡಿತು, ಆದರೆ ಪೂರ್ಣಗೊಳಿಸಲಾದ ಯೋಜನೆಯನ್ನು ಕಾರ್ಯಾಚರಣೆಗೊಳಿಸುವಲ್ಲಿ ವಿಫಲಗೊಂಡಿತು, ಇದು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಮೂಲ ಉದ್ದೇಶವನ್ನೇ ಸೋಲಿಸಿತು.**

ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು, ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವುದಕ್ಕಾಗಿ ಬೆಳಗಾವಿ ಜಿಲ್ಲೆಯ ಕಿತ್ತೂರು ಕೋಟೆಯಲ್ಲಿ ಧ್ವನಿ ಮತ್ತು ಬೆಳಕು ಪ್ರದರ್ಶನಕ್ಕಾಗಿ ಒಂದು ಯೋಜನೆಯನ್ನು ಕಾರ್ಯಗತಗೊಳಿಸುವಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕಂಪನಿ) ನಿರ್ದೇಶಿಸಿತು (ಜನವರಿ 2010).

ಕಂಪನಿಯು ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿತು (ಜುಲೈ 2010) ಹಾಗೂ ಕಾಮಗಾರಿಯನ್ನು ಮೆ. ಇನ್ನೋವೇಟೀವ್ ಲೈಟಿಂಗ್ ಸಿಸ್ಟಮ್ಸ್ ಕಾರ್ಪೋರೇಷನ್ (ಗುತ್ತಿಗೆದಾರರು)ಗೆ ₹ 1.95 ಕೋಟಿ ಮೊತ್ತಕ್ಕೆ ನೀಡಿತು (ಆಗಸ್ಟ್ 2010). ಗುತ್ತಿಗೆದಾರರು ಯೋಜನೆಯನ್ನು ಡಿಸೆಂಬರ್ 2011ರಲ್ಲಿ ಪೂರ್ಣಗೊಳಿಸಿದರು, ಆದಾಗ್ಯೂ, ಸೆಪ್ಟಂಬರ್ 2014ರಲ್ಲಿದ್ದಂತೆ ಯೋಜನೆಯು ಕಾರ್ಯಪ್ರವೃತ್ತವಾಗಿರಲಿಲ್ಲ.

ನಾವು ಗಮನಿಸಿದ್ದೇನೆಂದರೆ, ಪ್ರದರ್ಶನಗಳನ್ನು ನಿಯತಕಾಲಿಕವಾಗಿ ನಡೆಸುವುದಕ್ಕಾಗಿ ಯೋಜನೆಗೆ ವಿದ್ಯುತ್ ಸರಬರಾಜು ಇರಲಿಲ್ಲ. ವಿದ್ಯುತ್ತಿನ ಮೂಲವನ್ನು ಯೋಜನಾ ವರದಿಯಲ್ಲಿಯೂ ತಿಳಿಸಿರಲಿಲ್ಲ, ಅದರ ವೆಚ್ಚವನ್ನು ಅಂದಾಜುಗಳಲ್ಲಿಯೂ ಸೇರಿಸಿರಲಿಲ್ಲ. ಮಾರ್ಚ್ 2012ರಲ್ಲಿಯಷ್ಟೇ ಕಂಪನಿಯು 180 ಕಿವ್ಯಾ ಡೀಸೆಲ್ ಜನರೇಟರು ಸೆಟ್ಟನ್ನು ಸರಬರಾಜು ಮಾಡಲು ಹಾಗೂ ಸ್ಥಾಪಿಸಲು ಟೆಂಡರುಗಳನ್ನು ಆಹ್ವಾನಿಸಿತು, ಅದನ್ನು ಜುಲೈ 2012ರಲ್ಲಿ ₹ 13.10 ಲಕ್ಷ ವೆಚ್ಚದಲ್ಲಿ ಸ್ಥಾಪಿಸಲಾಯಿತು ಹಾಗೂ ಅದರ ಕಾರ್ಯಾಚರಣೆಗೆ ವಿದ್ಯುತ್ ಪರಿವೀಕ್ಷಕರಿಂದ ಸೆಪ್ಟಂಬರ್ 2012ರಲ್ಲಿ ಅನುಮತಿ ಸಿಕ್ಕಿತು. ಕಂಪನಿಯ ಕೋರಿಕೆಯಂತೆ, ಕಿತ್ತೂರು ಉತ್ಸವದ ವೇಳೆಯಲ್ಲಿ ಗುತ್ತಿಗೆದಾರರು ಅಕ್ಟೋಬರ್ 2010 ಮತ್ತು ಅಕ್ಟೋಬರ್ 2011ರಲ್ಲಿ, ತಲಾ ಮೂರು ದಿನಗಳಂತೆ ತಾತ್ಕಾಲಿಕವಾಗಿ ಧ್ವನಿ ಮತ್ತು ಬೆಳಕು ಪ್ರದರ್ಶನವನ್ನು ನಡೆಸಿದರು ಹಾಗೂ ಈ ಉದ್ದೇಶಕ್ಕಾಗಿ 180 ಕಿವ್ಯಾ ಮತ್ತು 160 ಕಿವ್ಯಾ ಡಿಜಿ ಸೆಟ್ಟನ್ನು ಬಾಡಿಗೆಗೆ ಪಡೆಯಲಾಗಿತ್ತು ಎಂಬುದನ್ನು ಇಲ್ಲಿ ತಿಳಿಸುವುದು ಪ್ರಸ್ತುತವೆನಿಸುತ್ತದೆ. ಇದು ಪ್ರದರ್ಶನಗಳನ್ನು ನಡೆಸಲು ಒಂದು ಡಿಜಿ ಸೆಟ್ಟಿನ ಅಗತ್ಯತೆ ಇತ್ತು ಎಂಬುದು ಕಂಪನಿಗೆ ಅರಿವಿತ್ತಾದರೂ

ಡಿಜಿ ಸೆಟ್ಟನ್ನು ಖರೀದಿಸಲು ಯೋಜನೆಯು ಪೂರ್ಣಗೊಂಡನಂತರವಷ್ಟೇ ಕ್ರಮವನ್ನು ಕೈಗೊಳ್ಳಲಾಯಿತು ಎಂಬುದನ್ನು ಸೂಚಿಸುತ್ತದೆ. ಸಿಬ್ಬಂದಿ ಹಾಗೂ ಕಾರ್ಯಾಚರಣೆಯ ವೆಚ್ಚಗಳೂ ಒಳಗೊಂಡಂತೆ ಯಾವ ಪ್ರಾಧಿಕಾರವು ಯೋಜನೆಯನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ನಿರ್ಣಯವನ್ನು ನಿರೀಕ್ಷಿಸುತ್ತ, ಸಂಪೂರ್ಣ ವ್ಯವಸ್ಥೆಯ ಬಗ್ಗೆ ಗಮನ ಹರಿಸುವಂತೆ ಗುತ್ತಿಗೆದಾರರಿಗೆ ತಿಳಿಸಲಾಯಿತು.

ಸಂಬಂಧಿತ ಪ್ರಾಧಿಕಾರದ ಅನುಮೋದನೆಯನ್ನು ಪಡೆದುಕೊಂಡನಂತರ ಅನುಕೂಲತೆಯನ್ನು ಕಿತ್ತೂರು ಪ್ರಾಧಿಕಾರಕ್ಕೆ ವಹಿಸಿಕೊಡಲಾಗುವುದು ಎಂಬುದಾಗಿ ಕಂಪನಿಯು ಉತ್ತರಿಸಿತು (ಮೇ 2014). ಆದಾಗ್ಯೂ, ಯೋಜನೆಯನ್ನು ವಹಿಸಿಕೊಡುವುದಕ್ಕೆ ಸಂಬಂಧಿತ ಸರ್ಕಾರಿ ಆದೇಶವನ್ನು ಈವರೆಗೂ ನೀಡಿಲ್ಲ (ಸೆಪ್ಟಂಬರ್ 2014).

ವಿದ್ಯುತ್ ಸರಬರಾಜು, ಸಿಬ್ಬಂದಿ ಹಾಗೂ ಕಾರ್ಯಾಚರಣೆಯ ವೆಚ್ಚಗಳಿಗೆ ಅನುವನ್ನು ಮಾಡಿರಲಿಲ್ಲವಾದ್ದರಿಂದ ಯೋಜನೆಗೆ ಸಂಬಂಧಿಸಿದಂತೆ ಸಮರ್ಪಕವಾದ ಪೂರ್ವಭಾವಿ ಯೋಜನೆಯನ್ನು ತಯಾರಿಸಿರಲಿಲ್ಲ ಎಂಬುದನ್ನು ಕಂಪನಿಯ ಉತ್ತರದೊಂದಿಗೆ ಮೇಲಿನ ವಾಸ್ತವಾಂಶವು ಸೂಚಿಸುತ್ತದೆ.

ಈ ರೀತಿಯಾಗಿ ₹ ಎರಡು ಕೋಟಿ ವೆಚ್ಚದಲ್ಲಿ ಸೃಷ್ಟಿಸಲಾದ ಮೂಲಭೂತಸೌಕರ್ಯವು ಸೆಪ್ಟಂಬರ್ 2012ರಿಂದಲೂ ವ್ಯರ್ಥವಾಗಿ ಉಳಿದಿತ್ತು ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶವನ್ನು ಸಾಧಿಸಲಾಗಿಲ್ಲ.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ**

### 3.5 *ಅನುಚಿತ ಸ್ವಾಧೀನಗಳು ಹಾಗೂ ನ್ಯಾಯಾಲಯದ ಆದೇಶಗಳ ಮೇಲೆ ನಿಷ್ಕ್ರಿಯತೆ*

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ಸಾರ್ವಭೌಮ ಸರ್ಕಾರಕ್ಕೆ ನೀಡಲಾಗಿರುವ ಅಧಿಕಾರವನ್ನು ಬಳಸಿಕೊಂಡು, ಕೇವಲ ಖಾಸಗಿ ವ್ಯಕ್ತಿಗಳ ಪ್ರಯೋಜನಕ್ಕಾಗಿ ವರ್ಗಾಯಿಸುವುದಕ್ಕಾಗಿಯೇ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡಿತ್ತು. ಸ್ವಾಧೀನತೆಗಳನ್ನು ನ್ಯಾಯಾಲಯವು ರದ್ದು ಮಾಡಿದ್ದರೂ, ವರ್ಗಾವಣೆಗಳನ್ನು ನಿರರ್ಥಕಗೊಳಿಸಲು ಹಾಗೂ ಭೂಮಿಗಳ ಸ್ವಾಧೀನತೆಯನ್ನು ಹಿಂಪಡೆದುಕೊಳ್ಳಲು ಕಂಪನಿಯು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಸರ್ವೋಚ್ಚ ನ್ಯಾಯಾಲಯವೂ ಸೇರಿದಂತೆ ವಿವಿಧ ನ್ಯಾಯಾಲಯಗಳ ನಿರ್ದೇಶನಗಳನ್ನು ಕಡೆಗಣಿಸಿ ತೆಗೆದುಕೊಂಡಿದ್ದಂತಹ ಕಾನೂನುಬಾಹಿರ ಕ್ರಮಗಳಿಗಾಗಿ ಕಂಪನಿಯಲ್ಲಿನ ಹಾಗೂ ರಾಜ್ಯ ಸರ್ಕಾರದಲ್ಲಿನ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.**

ಬೆಂಗಳೂರಿನ ವಿಮಾನ ನಿಲ್ದಾಣದ ಹತ್ತಿರ ಹೋಟೆಲು–ಸಹಿತ–ಗಾಲ್ಫ್ ಕ್ಲಬ್ ಸ್ಥಾಪಿಸುವ ಉದ್ದೇಶಕ್ಕಾಗಿ ಭೂ ಸ್ವಾಧೀನಪಡಿಸಿಕೊಂಡಿದ್ದನ್ನು ರದ್ದುಪಡಿಸಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು ನೀಡಿದ್ದ ಆದೇಶವನ್ನು (ಏಪ್ರಿಲ್ 2005) ಪ್ರಶ್ನಿಸಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು(ಕಂಪನಿ) ಸಲ್ಲಿಸಿದ್ದ ವಿಶೇಷ ರಜೆ ಮನವಿ (ಮೇಲ್ಮನವಿ)ಯನ್ನು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ (ಸೆಪ್ಟಂಬರ್ 2011) ತಳ್ಳಿಹಾಕಿತು. ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಂಡಂತಹ ಭೂಮಿಯನ್ನು ಮಾರ್ಗಾಂತರಗೊಳಿಸಲಾಗಿದೆ ಹಾಗೂ ಅದನ್ನು ಖಾಸಗೀ ವೈಯಕ್ತಿಕ ವ್ಯಕ್ತಿಗಳಿಗೆ ನೀಡಲಾಗಿದೆ ಎಂಬುದನ್ನು ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಗಮನಿಸಿತು ಹಾಗೂ ಕಂಪನಿಯು ವಂಚನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ ಎಂಬುದಾಗಿ ಆರೋಪಿಸಿತು.

ನಾವು ಗಮನಿಸಿದ್ದೇನೆಂದರೆ

- ಸಾರ್ವಜನಿಕ ಉದ್ದೇಶಕ್ಕಾಗಿ, ಬೆಂಗಳೂರಿನ ವಿಮಾನ ನಿಲ್ದಾಣದ ಹತ್ತಿರ ಕಂಪನಿಯು ಹೋಟೆಲು ರೆಸಾರ್ಟ್-ಸಹಿತ-ಗಾಲ್ಫ್ ಕ್ಲಬ್ಬನ್ನು ಸ್ಥಾಪಿಸುವುದಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೋಡೀಹಳ್ಳಿ ಮತ್ತು ಚಲ್ಲಘಟ್ಟ ಗ್ರಾಮಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಭೂ ಸ್ವಾಧೀನ ಅಧಿನಿಯಮದ ಪರಿಚ್ಛೇದ 4(1)ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿತ್ತು(ಡಿಸೆಂಬರ್ 1981). ಅಧಿಸೂಚನೆಯನ್ನು ಹೊರಡಿಸಲಾಗಿದ್ದ 39 ಎಕರೆಗಳು ಮತ್ತು 27 ಗುಂಟೆಗಳಿಗೆ ಪ್ರತಿಯಾಗಿ ಕಂಪನಿಯು 23 ಎಕರೆಗಳು ಹಾಗೂ 36 ಗುಂಟೆಗಳಷ್ಟು ವಿಸ್ತೀರ್ಣದ ಭೂಮಿಯನ್ನು (₹ 45.54 ಲಕ್ಷ ವೆಚ್ಚದಲ್ಲಿ) ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಭೂ ಸ್ವಾಧೀನ ಅಧಿಕಾರಿಯವರು ತೀರ್ಪನ್ನು 1986ರಲ್ಲಿ ಜಾರಿಗೊಳಿಸಿದರು. ಸ್ವಾಧೀನಪಡಿಸಿಕೊಳ್ಳಲಾಗಿದ್ದ ಭೂಮಿಯ ಒಡೆತನವನ್ನು ಜುಲೈ 1987ರಲ್ಲಿ ಪಡೆದುಕೊಳ್ಳಲಾಯಿತು. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕಂಪನಿಯು ₹ 45.54 ಲಕ್ಷ ಮೊತ್ತದಷ್ಟು ಸಾಲವನ್ನು ಕೆನರಾ ಬ್ಯಾಂಕಿನಿಂದ 1987ರಲ್ಲಿ ಪಡೆದುಕೊಂಡಿತ್ತು ಹಾಗೂ ಅದನ್ನು ಮರುಪಾವತಿಸಲಾಯಿತು.

- ಅಧಿಸೂಚನೆಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಉದ್ದೇಶಕ್ಕಾಗಿ ಅಥವಾ ಇತರೆ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಬಳಸಿಕೊಳ್ಳುವ ಬದಲು, ಈ ಕೆಳಗೆ ವಿವರಿಸಿರುವಂತೆ ಪರಿಚ್ಛೇದ 4(1)ರ ಅಡಿಯಲ್ಲಿ ನೀಡಲಾಗಿದ್ದ ಅಧಿಸೂಚನೆಯನ್ನು ಹಾಗೂ ಪರಿಚ್ಛೇದ 6ರ ಅಡಿಯಲ್ಲಿನ ಘೋಷಣೆಯನ್ನು ರದ್ದುಮಾಡಿದ ನ್ಯಾಯಾಲಯದ ಆದೇಶಗಳ (ಸೆಪ್ಟಂಬರ್/ಅಕ್ಟೋಬರ್ 1991) ಹೊರತಾಗಿಯೂ ಕಂಪನಿಯು ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ, ಅವರುಗಳ ಒಡೆತನಕ್ಕಾಗಿ ಹಾಗೂ ಅನುಭೋಗಕ್ಕಾಗಿ ವರ್ಗಾಯಿಸಿತು:

  - ಒಂದು ಸಭೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕಂಪನಿಯು ನಿಶ್ಚಯಿಸಿದಂತೆ (ಜನವರಿ 1987) 14 ಎಕರೆಗಳು ಮತ್ತು 8 ಗುಂಟೆಗಳನ್ನು ಖಾಸಗಿ ಗೃಹ ನಿರ್ಮಾಣ ಚಟುವಟಿಕೆಗಳನ್ನು ಕಾರ್ಯಗತಗೊಳಿಸುತ್ತಿದ್ದ ಓರ್ವ ಖಾಸಗಿ ಅಭಿವೃದ್ಧಿಕಾರ ಶ್ರೀ ದಯಾನಂದ ಪೈ, ಇವರಿಗೆ ₹ 8.51 ಲಕ್ಷಕ್ಕೆ ಮಾರಾಟ ಮಾಡಲಾಯಿತು (ಮಾರ್ಚ್ 1988).

  - 5 ಎಕರೆಗಳು ಮತ್ತು 9 ಗುಂಟೆಗಳನ್ನು ಮೆ. ಯೂನಿವರ್ಸಲ್ ರೆಸಾರ್ಟ್ಸ್ ಲಿಮಿಟೆಡ್, ಇವರಿಗೆ ಪ್ರಾರಂಭಿಕವಾಗಿ 30 ವರ್ಷಗಳಿಗೆ (ಆಗಸ್ಟ್ 1992) ಹಾಗೂ ತದನಂತರ ಅದನ್ನು 60 ವರ್ಷಗಳಿಗೆ (ಆಗಸ್ಟ್ 1997) ತಿದ್ದುಪಡಿಗೊಳಿಸಿ ಗುತ್ತಿಗೆ ಆಧಾರದ ಮೇರೆಗೆ ನೀಡಲಾಯಿತು.

- 1987 ಮತ್ತು 1995ರ ನಡುವೆ ಭೂಮಿಯ ವಿವಿಧ ಭಾಗಗಳ ಮಾಲೀಕರು ಖಾಸಗಿ ವ್ಯಕ್ತಿಗಳಿಗೆ ಅನುಕೂಲ ಕಲ್ಪಿಸುವ/ಸಹಾಯ ಮಾಡುವ ಏಕೈಕ ಉದ್ದೇಶದಿಂದ ಭೂಮಿಯ ಕಾನೂನುಬಾಹಿರ ವರ್ಗಾವಣೆ ಹಾಗೂ ಭೂ ಸ್ವಾಧೀನ ಅಧಿನಿಯಮದ ದುರ್ಬಳಕೆಯ ಬಗ್ಗೆ ಅಪಾದನೆಗಳೊಂದಿಗೆ ರಿಟ್ ಮನವಿಗಳನ್ನು ಸಲ್ಲಿಸಿದರು ಹಾಗೂ ಆದ್ದರಿಂದ ಭೂಮಿಯ ಒಡೆತನವನ್ನು/ಸ್ವಾಮ್ಯತೆಯನ್ನು ತಮಗೆ ಪುನರ್-ಒಪ್ಪಿಸುವಂತೆ ಒತ್ತಾಯಿಸಿದರು.

- ಕಂಪನಿಯ ಕಾರ್ಯನಿರ್ವಹಣೆಯ ಬಗ್ಗೆ ಕರ್ನಾಟಕ ಶಾಸಕಾಂಗದ ಮುಂದೆ ಮಂಡಿಸಲಾದ (ಫೆಬ್ರವರಿ 1992) ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಐವತ್ತೆರಡನೆಯ ವರದಿಯು ಚಲ್ಲಘಟ್ಟ ಪ್ರದೇಶದಲ್ಲಿನ ಯೋಜನೆಗಳಿಗೆ ಸಂಬಂಧಿಸಿದಂತೆ ಅಸ್ತವ್ಯಸ್ತತೆಗಳ ಬಗ್ಗೆ ಒಂದು ಪರಿಪೂರ್ಣ ತನಿಖೆಯನ್ನು ನಡೆಸುವುದರ ಬಗ್ಗೆ ಹಾಗೂ ಅವುಗಳ ಪರಿಣಾಮಗಳಿಗಾಗಿ ಮತ್ತು ನಷ್ಟಗಳಿಗಾಗಿ ಜವಾಬ್ದಾರಿಯನ್ನು ನಿಗದಿಗೊಳಿಸುವುದನ್ನು ಆರು ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕೆಂಬುದಾಗಿಯೂ ಹಾಗೂ ತಪ್ಪಿತಸ್ಥರೆಂಬುದಾಗಿ ಕಂಡುಬಂದವರ ವಿರುದ್ಧ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವಂತೆಯೂ ಶಿಫಾರಸು ಮಾಡಿತು.

- ಆಗಸ್ಟ್ 2007ರಲ್ಲಿ, ಸಾರ್ವಜನಿಕ ಆಸ್ತಿಯನ್ನು ಪುನರ್-ವಶಪಡಿಸಿಕೊಳ್ಳಲು ಕಾನೂನಿನ ಪ್ರಕಾರ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ವರದಿಯನ್ನು

ಸಲ್ಲಿಸುವಂತೆ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು.

ನಾವು ತೀರ್ಮಾನಿಸಿರುವುದೇನೆಂದರೆ:

- ಕಂಪನಿಯು ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲಿನ ಸಮಿತಿಯ ನಿರ್ದೇಶನಗಳಿಗಾಗಲೀ ಅಥವಾ ನ್ಯಾಯಾಲಯದ ಆದೇಶಗಳಿಗಾಗಲೀ ಬದ್ಧವಾಗಿರಲಿಲ್ಲ.

- ಉನ್ನತ ಅಧಿಪತ್ಯ(ಎಮಿನೆಂಟ್ ಡೊಮೈನ್), ಪರಮಾಧಿಕಾರದ ಒಂದು ಗುಣವಾಗಿದ್ದು, ಪರಿಹಾರವನ್ನು ನೀಡುವುದರೊಂದಿಗೆ ಸಾರ್ವಜನಿಕರ ಬಳಕೆಗೆ ಖಾಸಗಿ ಆಸ್ತಿಯನ್ನು ವಶಪಡಿಸಿಕೊಳ್ಳಲು ಇರುವ ಅಧಿಕಾರವನ್ನು ಖಾಸಗಿ ವ್ಯಕ್ತಿಗಳ ಬಳಕೆಗಾಗಿ ಭೂಮಾಲೀಕರುಗಳಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉಪಯೋಗಿಸಲಾಯಿತು. ಕಂಪನಿಯು, ಈ ರೀತಿಯಾಗಿ, ಖಾಸಗಿ ವ್ಯಕ್ತಿಗಳಿಗೆ ಸಹಾಯ ಮಾಡುವುದಕ್ಕಾಗಿಯೇ ಅನುಚಿತ ಕ್ರಮಗಳಲ್ಲಿ ತೊಡಗಿಸಿಕೊಂಡಿತು. ಕಂಪನಿಯು, ಸೆಪ್ಟೆಂಬರ್ 2011ರಲ್ಲಿ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದ ಭೂ ಸ್ವಾಧೀನ ಅಧಿಕಾರಿಯವರು ಜಾರಿಗೊಳಿಸಿದ್ದ ತೀರ್ಪನ್ನು ರದ್ದುಗೊಳಿಸುವ ಮೂಲಕ, ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿತು, ಆಸ್ತಿಯ ಮಾಲೀಕರು ಸಲ್ಲಿಸಿದ್ದ ಮನವಿಯ ಆಧಾರದ ಮೇರೆಗೆ ನ್ಯಾಯಾಲಯವು ನೀಡಿದ್ದ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಬೆಂಗಳೂರಿನ ಕೋಡಿಹಳ್ಳಿ ಗ್ರಾಮದ ಕೇವಲ 1 ಎಕರೆ ಮತ್ತು 3 ಗುಂಟೆ ಅಳತೆಯ ಭೂಮಿಯನ್ನು ಮಾತ್ರ ಹಿಂಪಡೆಯಲಾಯಿತು (ಫೆಬ್ರವರಿ 2012).

- ₹ 147.00 ಕೋಟಿ[76] ಮೌಲ್ಯದ ಪ್ರಧಾನ ಭೂಮಿಯು ಖಾಸಗಿ ವ್ಯಕ್ತಿಗಳ ಒಡೆತನಕ್ಕಾಗಿ ಹಾಗೂ ಅನುಭೋಗದಲ್ಲಿ ಮುಂದುವರೆದುಕೊಂಡು ಹೋಗಿದೆ. ಭೂ ಸ್ವಾಧೀನತೆಯನ್ನು ರದ್ದುಗೊಳಿಸಿ ನ್ಯಾಯಾಲಯಗಳು ನೀಡಿದ್ದ ತೀರ್ಪುಗಳ ಹೊರತಾಗಿಯೂ, ಎಲ್ಲಾ ಒಡಂಬಡಿಕೆಗಳನ್ನು ಹಾಗೂ ವರ್ಗಾವಣೆಗಳನ್ನು ರದ್ದುಗೊಳಿಸಲು ಹಾಗೂ ಭೂಮಿಯ ಸ್ವಾಮ್ಯತೆಯನ್ನು ಹಿಂಪಡೆಯಲು ಕಂಪನಿಯು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ.

- ಒಡೆತನಕ್ಕಾಗಿ ಹಾಗೂ ಅನುಭೋಗಕ್ಕಾಗಿ ಭೂಮಿಯನ್ನು ಮಾರಾಟ ಮಾಡಲಾದ ಅಥವಾ ಗುತ್ತಿಗೆಗೆ ನೀಡಲಾದ ಫಲಾನುಭವಿಗಳು ವಾಣಿಜ್ಯ ಸಂಕೀರ್ಣಗಳು, ವಸತಿ ಸಮುಚ್ಚಯಗಳು, ವೈಭವೋಪೇತ ಸ್ಟಾರ್ ಹೋಟೆಲುಗಳು ಇತ್ಯಾದಿಗಳ ನಿರ್ಮಾಣಗಳನ್ನು ಮಾಡಿರುವರು. ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಪತ್ರಗಳು ಹಾಗೂ ಮಾರಾಟ ಮಾಡಬಲ್ಲ ಹಕ್ಕು ಪತ್ರಗಳನ್ನು ಘೋಷಿಸಿದ್ದಂತಹ ಒಡಂಬಡಿಕೆಗಳ ಮೂಲಕ ವರ್ಗಾಯಿಸಲಾಗಿತ್ತಾದ್ದರಿಂದ, ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಆಸ್ತಿಯ ಸ್ವಾಮ್ಯತ್ವವನ್ನು ಹಿಂಪಡೆಯುವ ಸಲುವಾಗಿ ಪಾವತಿಸಬೇಕಾದ ಪರಿಹಾರವನ್ನು ನಿರ್ಧರಣೆ ಮಾಡಲು ಸಾಧ್ಯವಾಗುವುದಿಲ್ಲ.

- ಕಂಪನಿಯಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಕಂಪನಿಯ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳ ವಿರುದ್ಧ, ಅವರ ಕಾನೂನುಬಾಹಿರ ಕ್ರಮಗಳಿಗಾಗಿ ಹಾಗೂ ಸರ್ವೋಚ್ಚ ನ್ಯಾಯಾಲಯವೂ ಸೇರಿದಂತೆ ವಿವಿಧ ನ್ಯಾಯಾಲಯಗಳ ನಿರ್ದೇಶನಗಳನ್ನು ಕಡೆಗಣಿಸಿದ್ದಕ್ಕಾಗಿ ಕ್ರಮಗಳನ್ನು ಕೈಗೊಳ್ಳಲಿಲ್ಲ.

- ಊಟೋಪಚಾರಗಳು, ವಸತಿ, ಮನೋರಂಜನೆ, ಪ್ರವಾಸ ಹಾಗೂ ಇತರೆ ಅನುಕೂಲತೆಗಳನ್ನು ನೀಡುವ ಮೂಲಕ ಗಾಲ್ಫ್ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಹಾಗೂ ಅದನ್ನು ಅತ್ಯಧಿಕ ಪ್ರಮಾಣಕ್ಕೆ ಏರಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.

ವಿಷಯವನ್ನು ಸರ್ಕಾರಕ್ಕೆ ಆಗಸ್ಟ್ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

---

[76] 18 ಎಕರೆಗಳು ಮತ್ತು 14 ಗುಂಟೆಗಳಿಗೆ ಮೌಲ್ಯಮಾಪಕರು ಮಾಡಿದ್ದ ಮೌಲ್ಯದ ಪ್ರಕಾರ ಎಕರೆಯೊಂದಕ್ಕೆ ₹ಎಂಟು ಕೋಟಿಯ ದರದಲ್ಲಿ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

### 3.6 *ಉಪಕೇಂದ್ರ ಹಾಗೂ ಸಹ–ವಿದ್ಯುನ್ಮಾರ್ಗ ಕಾಮಗಾರಿಗಳ ನಡುವೆ ಸಮನ್ವಯಗೊಳಿಸದಿದ್ದುದು*

**ವಿದ್ಯುನ್ಮಾರ್ಗ ಕಾಮಗಾರಿಗಳು ಮಾರ್ಗದ ಹಕ್ಕು ಸಮಸ್ಯೆಗಳನ್ನು ಎದುರಿಸುತ್ತವೆ ಎಂಬುದನ್ನು ಅರಿತಿದ್ದರೂ ಕೂಡ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಉಪಕೇಂದ್ರ ನಿರ್ಮಾಣದ ಕಾಮಗಾರಿಯನ್ನು ಮಾತ್ರ ನೀಡಿತು ಹಾಗೂ ವಿದ್ಯುನ್ಮಾರ್ಗ ಕಾಮಗಾರಿಗಳ ನೀಡಿಕೆಯನ್ನು ವಿಳಂಬಗೊಳಿಸಿತು. ತತ್ಪರಿಣಾಮವಾಗಿ, ₹ 32.04 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಉಪಕೇಂದ್ರವು, ಪ್ರಸರಣ ಮಾರ್ಗಗಳ ಅಗತ್ಯತೆಯ ಕಾರಣ ಜನವರಿ 2012ರಿಂದಲೂ ವ್ಯರ್ಥವಾಗಿ ಉಳಿದಿದೆ.**

ಯೋಜನೆಗಳನ್ನು ಕಾರ್ಯಗತಗೊಳಿಸುವುದರ ಪರಿಣಾಮವಾಗಿ ಉದ್ದೇಶಿತ ಎಲ್ಲಾ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಕಾಮಗಾರಿಗಳ ವಿವಿಧ ಭಾಗಗಳ ನಡುವೆ ಸಮರ್ಪಕ ಸಮನ್ವಯತೆ ಇರತಕ್ಕದ್ದು. ಉಪಕೇಂದ್ರವನ್ನು ಸ್ಥಾಪಿಸಿದ್ದರ ಉದ್ದೇಶವನ್ನು ಸಾಧಿಸುವುದಕ್ಕಾಗಿ ಉಪಕೇಂದ್ರದ ಕಾಮಗಾರಿಗಳು ಪೂರ್ಣಗೊಳ್ಳುವುದರ ಜೊತೆಗೆ ಪ್ರಸರಣ ಮಾರ್ಗಗಳನ್ನು ಪೂರ್ವಭಾವಿಯಾಗಿ ಯೋಜಿಸತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕಂಪನಿ) ವಿದ್ಯುತ್ತನ್ನು ವರ್ಗಾಯಿಸುವುದಕ್ಕಾಗಿ, ಪ್ರಸರಣ ಮಾರ್ಗಗಳ ಜೊತೆಗೇ ಉಪಕೇಂದ್ರದ ನಿರ್ಮಾಣವನ್ನು ಕೈಗೆತ್ತಿಕೊಳ್ಳುತ್ತದೆ. ಪೀಣ್ಯ, ಹೆಬ್ಬಾಳ ಹಾಗೂ ದೊಡ್ಡಬಳ್ಳಾಪುರದಲ್ಲಿ ಪ್ರಸ್ತುತ ಇರುವ ವಿದ್ಯುತ್–ಹೊರೆಯನ್ನು ಕಡಿಮೆಗೊಳಿಸುವ ಹಾಗೂ ಅಲ್ಲದೇ ಅಕ್ಕಪಕ್ಕದ ಉಪಕೇಂದ್ರಗಳಿಗೆ[77] ವಿದ್ಯುತ್ ಸರಬರಾಜಿನ ಬದಲಿ ಮೂಲವನ್ನು ಒದಗಿಸುವ ಉದ್ದೇಶದಿಂದ ಯಲಹಂಕದಲ್ಲಿ ಒಂದು 220 ಕಿವ್ಯಾ ಉಪಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಕಂಪನಿಯು ಸವಿವರ ಯೋಜನಾ ವರದಿಯನ್ನು ಅನುಮೋದಿಸಿತು (ಡಿಸೆಂಬರ್ 2009). ಯಲಹಂಕದ ಉಪಕೇಂದ್ರಕ್ಕೆ ವಿದ್ಯುತ್ತಿನ ಮೂಲವು ಸಿಂಗನಾಯಕನಹಳ್ಳಿಯಲ್ಲಿರುವ ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾದಿಂದ ಆಗಿತ್ತು.

ಮೆ. ಲಾರ್ಸೆನ್ ಅಂಡ್ ಟೋಬ್ರೊ ಲಿಮಿಟೆಡ್, ಇವರಿಗೆ ನೀಡಲಾಗಿದ್ದ (ಜೂನ್ 2010) ಯಲಹಂಕದ ಉಪಕೇಂದ್ರ ನಿರ್ಮಾಣ ಕಾಮಗಾರಿಯು ಜನವರಿ 2012ರಲ್ಲಿ ₹ 32.04 ಕೋಟಿ[78] ವೆಚ್ಚದಲ್ಲಿ ಪೂರ್ಣಗೊಂಡಿತು. ಯಲಹಂಕ ಉಪಕೇಂದ್ರದಿಂದ ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾದ ಉಪಕೇಂದ್ರಕ್ಕೆ ಹಾಗೂ ಯಲಹಂಕದ ಉಪಕೇಂದ್ರದಿಂದ ಅಕ್ಕಪಕ್ಕದಲ್ಲಿರುವ ಉಪಕೇಂದ್ರಗಳಿಗೆ ಸಂಪರ್ಕಿಸುವ ವಿದ್ಯುನ್ಮಾರ್ಗದ ನಿರ್ಮಾಣ ಕಾಮಗಾರಿಗಳ ಸಮನ್ವಯತೆಯ ಕೊರತೆಯ ಕಾರಣ ಯಲಹಂಕದ ಉಪಕೇಂದ್ರ ಇಂದಿನವರೆಗೂ (ಆಗಸ್ಟ್ 2014) ವ್ಯರ್ಥವಾಗಿ ಉಳಿದಿದೆ ಎಂಬುದನ್ನು ನಾವು ಗಮನಿಸಿದೆವು.

ಸವಿವರ ಯೋಜನಾ ವರದಿಯು (ಡಿಸೆಂಬರ್ 2009) ವಿದ್ಯುತ್ತನ್ನು ಹೊರಹಾಕುವ ಮಾರ್ಗಗಳಿಗೆ 'ಮಾರ್ಗದ ಹಕ್ಕು'[79] ಒಂದು ಪ್ರಮುಖ ಸಮಸ್ಯೆ ಎಂಬುದಾಗಿ ಪರಿಗಣಿಸಲಾಗಿತ್ತಾದ್ದರಿಂದ 220 ಕಿವ್ಯಾ ಪ್ರಸರಣ ಮಾರ್ಗಗಳು ಉಪಕೇಂದ್ರದಿಂದ ವಿದ್ಯುತ್ತನ್ನು ವರ್ಗಾಯಿಸುವುದನ್ನು ಸಮನ್ವಯಗೊಳಿಸುವುದಕ್ಕಾಗಿ ಚಿಂತಿಸಿರಲಿಲ್ಲ. ವಿದ್ಯುನ್ಮಾರ್ಗಗಳಿಗಾಗಿ (ಐದು) ಸವಿವರ ಯೋಜನಾ ವರದಿಯನ್ನು ಜೂನ್ 2010ರಲ್ಲಿಯಷ್ಟೇ ತಯಾರಿಸಲಾಗಿತ್ತು ಹಾಗೂ ಟೆಂಡರುಗಳನ್ನು ಮಾರ್ಚ್ 2011ರಲ್ಲಿ ಆಹ್ವಾನಿಸಲಾಗಿತ್ತು. ವಿದ್ಯುನ್ಮಾರ್ಗಗಳ ಕಾಮಗಾರಿಗಳನ್ನು ಟೆಂಡರಿಗೆ ಇಡುವ ಪ್ರಯತ್ನಗಳು

[77] ಯಲಹಂಕ, ರಾಜಾನುಕುಂಟೆ, ಕನಸವಾಡಿ, ಸಹಕಾರನಗರ ಹಾಗೂ ಸೋಲದೇವನಹಳ್ಳಿ ಮತ್ತು ಪೀಣ್ಯ ಡಿ.ಜಿ. ಸ್ಥಾವರ 1,2,3 ಹಾಗೂ 4ರ ನಡುವಿನ 66 ಕಿವ್ಯಾ ಮಾರ್ಗಗಳ ಮೇಲೆ ಅವಲಂಬಿತವಾದ ಉಪಕೇಂದ್ರಗಳು.

[78] ₹4.40 ಕೋಟಿ ಮೌಲ್ಯದ ಸಿವಿಲ್ ಕಾಮಗಾರಿಗಳು ಒಳಗೊಂಡಂತೆ.

[79] ವಿದ್ಯುತ್ ಮಾರ್ಗಗಳು ಯಾವ ಮಾರ್ಗದ ಮೂಲಕ ಸಾಗುತ್ತವೆಯೋ ಅದಕ್ಕೆ ಮಾರ್ಗದ ಹಕ್ಕು ಎಂಬುದಾಗಿ ಉಲ್ಲೇಖಿಸಲ್ಪಡುತ್ತದೆ.

ಐದು ಸಂದರ್ಭಗಳಲ್ಲಿ (ಮಾರ್ಚ್ 2011ರಿಂದ ಆಗಸ್ಟ್ 2013)[80] ಸಾಕಾರಗೊಂಡಿರಲಿಲ್ಲ. ಜೂನ್ 2014ರಲ್ಲಿದ್ದಂತೆ ಕಾಮಗಾರಿಯನ್ನು ನೀಡಿರಲಿಲ್ಲ. ಆಗಸ್ಟ್ 2014ರಲ್ಲಿದ್ದಂತೆ, ಐದರ ಪೈಕಿ ಎರಡು ವಿದ್ಯುನ್ಮಾರ್ಗಗಳನ್ನು ಮಾತ್ರ ನೀಡಲಾಗಿತ್ತು ಹಾಗೂ ಉಳಿದ ಮೂರು ಕಾಮಗಾರಿಗಳ ಅಂದಾಜುಗಳು ಪೂರ್ವ–ತಯಾರಿಯ ಹಂತದಲ್ಲಿದ್ದವು.

ಉಪಕೇಂದ್ರವು ವ್ಯರ್ಥವಾಗಿ ಉಳಿಯುವುದನ್ನು ತಪ್ಪಿಸುವುದಕ್ಕಾಗಿ, 220/66 ಕಿವ್ಯಾ ವಿದ್ಯುನ್ಮಾರ್ಗಗಳ ನಿರ್ಮಾಣಕ್ಕಾಗಿ ಎರಡು ಕಾಮಗಾರಿಗಳನ್ನು ನೀಡಲಾಯಿತು (ಜುಲೈ 2014) ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2014).

ಈ ರೀತಿಯಾಗಿ, ಡಿಸೆಂಬರ್ 2009ರಲ್ಲಿ ಉಪಕೇಂದ್ರ ಕಾಮಗಾರಿಗೆ ಅನುಮೋದನೆಯನ್ನು ನೀಡುವ ವೇಳೆಯಲ್ಲಿ ಮಾರ್ಗದ ಹಕ್ಕು ಸಮಸ್ಯೆಯನ್ನು ಕಂಪನಿಯು ಅರಿತಿತ್ತಾದರೂ, ಕಂಪನಿಯು ವಿದ್ಯುನ್ಮಾರ್ಗ ಕಾಮಗಾರಿಗಳ ನೀಡಿಕೆಯ ಜೊತೆಯಲ್ಲಿಯೇ ಅದರ ಸಮನ್ವಯತೆಯನ್ನು ಖಚಿತಪಡಿಸಿಕೊಳ್ಳದೆಯೇ ಉಪಕೇಂದ್ರದ ಕಾಮಗಾರಿಯನ್ನು ನೀಡಲು ಮುಂದಾಯಿತು. 2012–14ರಲ್ಲಿ ಪೀಣ್ಯ, ಹೆಬ್ಬಾಳ ಹಾಗೂ ದೊಡ್ಡಬಳ್ಳಾಪುರ ಉಪಕೇಂದ್ರಗಳಲ್ಲಿ ವಿದ್ಯುತ್ ಅಡಚಣೆಗಳ ದೃಷ್ಟಾಂತಗಳು ಮುಂದುವರೆದಿದ್ದವು, ಇದು ವಿದ್ಯುತ್ ಸರಬರಾಜಿನ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿತು ಹಾಗೂ ತತ್ಪರಿಣಾಮವಾಗಿ ಅಲ್ಲಿದ್ದ ಬಹಳಷ್ಟು ಕೈಗಾರಿಕಾ ಪ್ರದೇಶದ ಮೇಲೆ ಅದರ ಪ್ರಭಾವದ ಕಾರಣ ಒಂದು ಆರ್ಥಿಕ ವೆಚ್ಚವನ್ನೂ ಹೊಂದಿತ್ತು.

ಈ ರೀತಿಯಾಗಿ ಪ್ರಸರಣ ಮಾರ್ಗಗಳ ನಿರ್ಮಾಣವನ್ನು ಯಲಹಂಕದಲ್ಲಿನ ಉಪಕೇಂದ್ರದ ಜೊತೆ ಸಮನ್ವಯಗೊಳಿಸುವಲ್ಲಿನ ವಿಫಲತೆಯು ₹ 32.04 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಉಪಕೇಂದ್ರದ ಲೋಪದೋಷಗಳಿಂದ ಕೂಡಿದ ಪೂರ್ವಭಾವಿ ಯೋಜನೆಯ ಕಾರಣ ವ್ಯರ್ಥವಾಗಿ ಉಳಿದಿತ್ತು.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

## 3.7 *ಕೇಬಲ್ಲುಗಳ ಖರೀದಿ ಹಾಗೂ ದಾಸ್ತಾನಿಗೆ ಹಿಂತಿರುಗಿಸಿದ ಕೇಬಲ್ಲುಗಳ ಬಳಕೆಯ ವ್ಯವಸ್ಥೆಯಲ್ಲಿನ ನ್ಯೂನತೆ*

**ಬೆಂಗಳೂರು ನಗರ ಪ್ರದೇಶದಲ್ಲಿ ಅಧಿಕ ಸಾಮರ್ಥ್ಯದ ಕೇಬಲ್ಲುಗಳ ಬಳಕೆಯ ಬಗ್ಗೆ ನಿಶ್ಚಯಿಸಲಾಗಿತ್ತಾದರೂ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಟೆಂಡರುಗಳನ್ನು ಆಹ್ವಾನಿಸಿತು ಹಾಗೂ ಕಡಿಮೆ ಸಾಮರ್ಥ್ಯದ ಕೇಬಲ್ಲುಗಳನ್ನು ಖರೀದಿಸಿತು. ಅಲ್ಲದೇ, ದಾಸ್ತಾನಿನಲ್ಲಿರುವ ಕೇಬಲ್ಲುಗಳ ಬಳಕೆಗೆ ಗುತ್ತಿಗೆಯಲ್ಲಿನ ಷರತ್ತುಗಳಲ್ಲಿ ತಿಳಿಸಲಾಗಿತ್ತಾದರೂ, ಗುತ್ತಿಗೆದಾರರು ಕೇಬಲ್ಲುಗಳನ್ನು ಖರೀದಿಸುವುದನ್ನು ಅನುವು ಮಾಡಿ, ಹೊಸ ಕಾಮಗಾರಿ ಆದೇಶಗಳನ್ನು ನೀಡಲಾಯಿತು.**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕಂಪನಿ) ತನ್ನ ಪ್ರಸರಣ ವಿದ್ಯುತ್‌ಜಾಲಕ್ಕಾಗಿ ಭೂಗತ ಕೇಬಲ್ಲುಗಳನ್ನು ಹಾಕುವ ಕಾಮಗಾರಿಗೆ ಗುತ್ತಿಗೆಗಳನ್ನು ಒಟ್ಟಾರೆ ಟರ್ನ್‌ಕೀ ಆಧಾರದ[81] ಮೇರೆಗೆ ನೀಡುತ್ತದೆ.

ಟರ್ನ್‌ಕೀ ಗುತ್ತಿಗೆಗಳಲ್ಲಿನ ಷರತ್ತುಗಳು ಇನ್ನಿತರವುಗಳ ಜೊತೆಗೆ ಕಾಮಗಾರಿಗಳು ಪೂರ್ಣಗೊಂಡನಂತರ ಗುತ್ತಿಗೆದಾರರು ಭೂಗತ ಕೇಬಲ್ಲುಗಳ ಹೆಚ್ಚುವರಿ ಪರಿಮಾಣಗಳನ್ನು

[80] ಎಲ್ಲಾ ಐದು ವಿದ್ಯುತ್ ಮಾರ್ಗ ಕಾಮಗಾರಿಗಳನ್ನು ಮಾರ್ಚ್ 2011ರಲ್ಲಿ ಟೆಂಡರಿಗೆ ಇಡಲಾಯಿತು, ಆದರೆ ಮೌಲ್ಯಮಾಪನದ ವಿಧಾನ ನ್ಯೂನತೆಯಿಂದ ಕೂಡಿದ ಕಾರಣ ಟೆಂಡರನ್ನು ತಿರಸ್ಕರಿಸಲಾಯಿತು; ಎರಡು (ಐದರ ಪೈಕಿ) ವಿದ್ಯುತ್ ಮಾರ್ಗ ಕಾಮಗಾರಿಗಳಿಗಾಗಿ ಅಕ್ಟೋಬರ್ 2011ರಲ್ಲಿ ಟೆಂಡರನ್ನು ಆಹ್ವಾನಿಸಲಾಯಿತು, ಅದಕ್ಕೆ ಏಕೈಕ ಸವಾಲು ಬಂದಿದ್ದರಿಂದ, ರದ್ದುಗೊಳಿಸಲಾಯಿತು; ಎರಡು ಕಾಮಗಾರಿಗಳಿಗೆ ನವೆಂಬರ್ 2012ರಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಯಿತು ಆದರೆ ಯಾವುದೇ ಸವಾಲನ್ನೂ ಸ್ವೀಕರಿಸಲಿಲ್ಲ; ಐದು ವಿದ್ಯುತ್ ಮಾರ್ಗಗಳಿಗೆ ಫೆಬ್ರವರಿ 2013ರಲ್ಲಿ (ಎರಡು ಪ್ರತ್ಯೇಕ ಅಧಿಸೂಚನೆಗಳಲ್ಲಿ) ಟೆಂಡರನ್ನು ಆಹ್ವಾನಿಸಲಾಯಿತು, ಅದಕ್ಕೆ ಏಕೈಕ ಸವಾಲನ್ನು ಸ್ವೀಕರಿಸಲಾಯಿತಾದ್ದರಿಂದ ರದ್ದುಗೊಳಿಸಲಾಯಿತು, ಐದು ವಿದ್ಯುತ್ ಮಾರ್ಗಗಳಿಗೆ ಆಗಸ್ಟ್ 2013ರಲ್ಲಿ (ಎರಡು ಪ್ರತ್ಯೇಕ ಅಧಿಸೂಚನೆಗಳಲ್ಲಿ) ಆಹ್ವಾನಿಸಲಾದ ಟೆಂಡರನ್ನು ರದ್ದುಗೊಳಿಸಲಾಯಿತು.

[81] ವಿನ್ಯಾಸ, ಪರೀಕ್ಷಣೆ, ಸಾಮಗ್ರಿಗಳ ಸರಬರಾಜು, ಸಿವಿಲ್ ಹಾಗೂ ರಚನಾ/ನಿರ್ಮಾಣ ಕಾಮಗಾರಿಗಳು ಹಾಗೂ ಕಾರ್ಯಾರಂಭಗೊಳಿಸುವುದನ್ನು ಒಳಗೊಂಡಂತೆ.

ಕಂಪನಿಯ ಉಗ್ರಾಣಕ್ಕೆ ಹಿಂತಿರುಗಿಸತಕ್ಕದ್ದು ಎಂಬುದಾಗಿ ಅನುವು ಮಾಡಿದ್ದವು. ಗುತ್ತಿಗೆಗಳಲ್ಲಿನ ಷರತ್ತುಗಳು ಕಂಪನಿಯು ತನ್ನ ಉಗ್ರಾಣದಲ್ಲಿ ಲಭ್ಯವಿರುವ ಸಾಮಗ್ರಿಯನ್ನು ಸರಬರಾಜು ಮಾಡಬಹುದು ಎಂಬುದಾಗಿಯೂ ಅನುವು ಮಾಡಿದ್ದವು ಹಾಗೂ ಅದರಿಂದಾಗಿ ಗುತ್ತಿಗೆದಾರರು ಸರಬರಾಜು ಮಾಡುವ ಸಾಮಗ್ರಿಗಳ ವ್ಯಾಪ್ತಿಯನ್ನು ಅಷ್ಟರಮಟ್ಟಿಗೆ ಕಡಿಮೆಗೊಳಿಸಬಹುದಿತ್ತು.

2009–14ರಲ್ಲಿ, ಗುತ್ತಿಗೆದಾರರು 630 ಚದರ.ಮಿಮೀ ಗಾತ್ರದ 32.754 ಕಿಮೀಗಳಷ್ಟು ಹೆಚ್ಚುವರಿ ಭೂಗತ ಕೇಬಲ್ಲುಗಳನ್ನು ಹಿಂತಿರುಗಿಸಿದ್ದರು, ಅವನ್ನು ಬೆಂಗಳೂರಿನ ಪೀಣ್ಯದಲ್ಲಿರುವ ಕಂಪನಿಯ ಉಗ್ರಾಣದಲ್ಲಿ ದಾಸ್ತಾನು ಇಡಲಾಗಿತ್ತು. ಈ ಪರಿಮಾಣದ ಪೈಕಿ, ಉಗ್ರಾಣವು ಇತರ ಕಾಮಗಾರಿಗಳಿಗಾಗಿ 14.365 ಕಿಮೀಗಳಷ್ಟು ಕೇಬಲನ್ನು ನೀಡಿತು ಹಾಗೂ ಉಗ್ರಾಣದಲ್ಲಿ 26.48 ಕಿಮೀಗಳಷ್ಟು[82] ಬಾಕಿ ದಾಸ್ತಾನು ಉಳಿದಿತ್ತು (ಮಾರ್ಚ್ 2014).

ಕೇಬಲ್ಲುಗಳ ಖರೀದಿ ಹಾಗೂ ಬಳಕೆಯಲ್ಲಿನ ಈ ಕೆಳಗಿನ ವ್ಯವಸ್ಥಾ ವಿಫಲತೆಗಳನ್ನು ನಾವು ಗಮನಿಸಿದೆವು:

**ಅನುಮೋದಿತ ನಿರ್ದಿಷ್ಟ ನಿರೂಪಣೆಗಳ ಪ್ರಕಾರ ಸಾಮಗ್ರಿಗಳನ್ನು ಖರೀದಿಸುವಲ್ಲಿನ ವಿಫಲತೆ:**

- ಬೆಂಗಳೂರಿನಲ್ಲಿ ಕೇಂದ್ರೀಕೃತ ವಿದ್ಯುತ್ ಹೊರೆ ಬೆಳವಣಿಗೆಯನ್ನು ಪರಿಗಣಿಸಿದಂತೆ ಹಾಗೂ ಉಪಕೇಂದ್ರಗಳ ಸಮಸ್ಯೆಗಳು ಉದ್ಭವಿಸಿದಲ್ಲಿ ವಿದ್ಯುತ್ ಹೊರೆ ಸ್ಥಗಿತವನ್ನು ತಪ್ಪಿಸಲು ವಿದ್ಯುತ್ ಹೊರೆಯನ್ನು ವರ್ಗಾಯಿಸುವುದಕ್ಕಾಗಿ ಬೆಂಗಳೂರು ನಗರ ಪ್ರದೇಶದಲ್ಲಿ 1,000 ಚದರ ಮಿಮೀ ಕೇಬಲ್ಲುಗಳನ್ನು ಬಳಸಲು ಕಂಪನಿಯ ತಾಂತ್ರಿಕ ಸಲಹಾ ಸಮಿತಿಯು ನಿಶ್ಚಯಿಸಿತು (ಜುಲೈ 2006). ತಾಂತ್ರಿಕ ಸಲಹಾ ಸಮಿತಿಯ ಈ ನಿರ್ಣಯದ ಹೊರತಾಗಿಯೂ, ಕಂಪನಿಯು ವೃಷಭಾವತಿ ಕಣಿವೆಯಿಂದ (ಬೆಂಗಳೂರು ನಗರ ಪ್ರದೇಶ) ವಿವಿಧ ಸ್ಥಳಗಳಿಗೆ 31.860 ಕಿಮೀಗಳಷ್ಟು ಕಡಿಮೆ ಸಾಮರ್ಥ್ಯದ (630 ಚದರ ಮಿಮೀ) ಸಂಯೋಜಿತ ಉದ್ದದ ಮೂರು ವಿದ್ಯುತ್ ಹೊರತೆಗೆಯುವ ಮಾರ್ಗ ಕಾಮಗಾರಿಗಳಿಗಾಗಿ ಸವಿವರ ಕಾಮಗಾರಿ ನೀಡಿಕೆಗಳನ್ನು ₹ 79.90 ಲಕ್ಷ ಮೊತ್ತಕ್ಕೆ ಜೂನ್ 2007ರಲ್ಲಿ ನೀಡಿದುದು ಸಮರ್ಥನೆಯಿಂದ ಕೂಡಿರಲಿಲ್ಲ. ಈ ಕಾಮಗಾರಿಯಲ್ಲಿ 630 ಚದರ ಮಿಮೀಗೆ ಬದಲಾಗಿ 1,000 ಚದರ ಮಿಮೀ ಕೇಬಲನ್ನು ಬಳಸಲು ನಿಶ್ಚಯಿಸಲಾಯಿತಾದ್ದರಿಂದ, ಆ ರೀತಿ ಖರೀದಿಸಲಾದ ಸಾಮಗ್ರಿಗಳನ್ನು ನವೆಂಬರ್ 2009ರಲ್ಲಿ ಉಗ್ರಾಣಗಳಿಗೆ ಹಿಂತಿರುಗಿಸಲಾಯಿತು.

- ನವೆಂಬರ್ 2009ರಿಂದಲೂ ಉಗ್ರಾಣಗಳಲ್ಲಿ ಇದ್ದಂತಹ ಕೇಬಲ್ಲುಗಳನ್ನು ತದನಂತರ ಬಳಸಿಕೊಳ್ಳುವಲ್ಲಿ ಕಂಪನಿಯು ವಿಫಲಗೊಂಡಿತು. ಇದರಲ್ಲಿ ವಿಧ್ವಂಸಕ ಕೃತ್ಯದ ಸಂಭವವಿದೆ ಹಾಗೂ ಮಳೆಗಾಲದಲ್ಲಿ ಕಂಡಕ್ಟರ್ ಒಳಕ್ಕೆ ನೀರು ನುಗ್ಗುವುದರಿಂದ ಕೇಬಲ್ಲುಗಳಿಗೆ ತಾಂತ್ರಿಕ ಹಾನಿ ಸಂಭವಿಸುವ ಹಾಗೂ ಅದು ಕೇಬಲ್ಲುಗಳ ವಿಫಲತೆಗೆ ದಾರಿ ಮಾಡಿಕೊಡುವ ಸಂಭಾವ್ಯತೆ ಇರುತ್ತದೆ ಎಂಬುದಾಗಿ ಕೇಂದ್ರ ಖರೀದಿ ಸಮಿತಿಯು ಡಿಸೆಂಬರ್ 2007ರಲ್ಲಿಯೇ ಗಮನಿಸಿತು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತ. ಆದಾಗ್ಯೂ, ಕೇಬಲ್ಲುಗಳು (₹ 17.11 ಕೋಟಿ ಮೌಲ್ಯದ್ದು) ಪೀಣ್ಯ ಉಗ್ರಾಣದ ಮುಕ್ತ ಪ್ರದೇಶದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಬಿದ್ದಿದ್ದವು ಹಾಗೂ ಅವುಗಳ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

5.22 ಕಿಮೀಗಳಷ್ಟು (630 ಚದರ ಮಿ.ಮೀ.) ಕೇಬಲ್ಲುಗಳನ್ನು ಕಾಮಗಾರಿಗಳಿಗೆ ತೆಗೆದುಕೊಳ್ಳಲಾಗಿದೆ ಹಾಗೂ ನ್ಯಾಷನಲ್ ಕಾಲೇಜು ಮತ್ತು ವಿಕ್ಟೋರಿಯಾ ಉಪಕೇಂದ್ರಗಳ ನಡುವಿನ ಕಾಮಗಾರಿಗೆ ಬಳಸಿಕೊಳ್ಳಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2014). ಉಳಿಕೆ ಕೇಬಲ್ಲುಗಳನ್ನು ಎರಡು ಇತರೆ ಕಾಮಗಾರಿಗಳಿಗೆ/ಬಿಡಿಭಾಗಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ರಸ್ತೆಯನ್ನು ಅಗೆಯಲು ಅನುಮತಿಗಾಗಿ ನಿರೀಕ್ಷಿಸುತ್ತಿರುವುದರಿಂದ ಅವುಗಳನ್ನು ಇನ್ನೂ ಉಗ್ರಾಣದಿಂದ ತೆಗೆದುಕೊಳ್ಳಬೇಕಾಗಿದೆ ಎಂಬುದಾಗಿಯೂ ಉತ್ತರದಿಂದ ತಿಳಿಯಿತು.

[82] 2009ರ ಮೊದಲು ದಾಸ್ತಾನಿನಲ್ಲಿದ್ದ 8.088 ಕಿಮೀಗಳಷ್ಟು ಕೇಬಲ್ಲುಗಳೂ ಒಳಗೊಂಡಂತೆ.

**ದಾಸ್ತಾನಿನಲ್ಲಿ ಬಿದ್ದಿರುವ 1,000 ಚದರ ಮಿಮೀ ಕೇಬಲ್ಲುಗಳನ್ನು ಬಳಸಿಕೊಳ್ಳುವಲ್ಲಿನ ವಿಫಲತೆ**

- 2009–14ರಲ್ಲಿ, ಗುತ್ತಿಗೆದಾರರು 10.134 ಕಿಮೀಗಳಷ್ಟು 1,000 ಚದರ ಮಿಮೀ[83] ಗಾತ್ರದ ಭೂಗತ ಕೇಬಲನ್ನು ಪೀಣ್ಯದಲ್ಲಿರುವ ಉಗ್ರಾಣಕ್ಕೆ ಹಿಂತಿರುಗಿಸಿದ್ದರು. ಉಗ್ರಾಣವು 0.28 ಕಿ.ಮೀ.ನಷ್ಟು ಕೇಬಲನ್ನು ನೀಡಿತ್ತು, ಉಳಿದ 9.86 ಕಿಮೀಗಳಷ್ಟು (₹ 12.53 ಕೋಟಿ ಮೌಲ್ಯದ್ದು) ಕೇಬಲ್ಲು ಉಗ್ರಾಣದಲ್ಲಿ ಬಿದ್ದಿತ್ತು (ಮಾರ್ಚ್ 2014).

- ಕಂಪನಿಯು 2011–14ರ ಅವಧಿಯಲ್ಲಿ ನೀಡಿದ ಕಾಮಗಾರಿ ಆದೇಶಗಳಲ್ಲಿ (10 ಸಂಖ್ಯೆಗಳು) ಕಂಪನಿಯು ಕೇಬಲ್ಲುಗಳನ್ನು ಸರಬರಾಜು ಮಾಡಲು ಅವಕಾಶವಿರುವಂತಹ ಭಾಗಶ: ಟರ್ನ್‌ಕೀ ಗುತ್ತಿಗೆಗಳನ್ನು ನೀಡುವ ಮೂಲಕ ಉಗ್ರಾಣದಲ್ಲಿ ಲಭ್ಯವಿರುವಷ್ಟು ಪ್ರಮಾಣದ ಮಟ್ಟಿಗೆ ಈ ಕೇಬಲ್ಲುಗಳನ್ನು ಬಳಸಬಹುದಿತ್ತು ಎಂಬುದನ್ನು ನಾವು ಗಮನಿಸಿದೆವು.

ಭಾಗಶಃ ಟರ್ನ್‌ಕೀ ಟೆಂಡರುಗಳಲ್ಲಿನ ಖಾತರಿ/ಭರವಸೆಯ ಪ್ರಯೋಜನವನ್ನು ಪಡೆದುಕೊಳ್ಳುವ ಉದ್ದೇಶದಿಂದ, ಅಗತ್ಯವಿರುವ ಸಂಪೂರ್ಣ ಕೇಬಲನ್ನು ಕಂಪನಿಯು ಸರಬರಾಜು ಮಾಡಬೇಕಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2014). ಕೊಂಡದಾಸಪುರ ಮತ್ತು ಹೊಸಕೋಟೆ ನಡುವಿನ ಕಾಮಗಾರಿಗಾಗಿ 4.75 ಕಿಮೀಗಳಷ್ಟು ಕೇಬಲನ್ನು ಬಳಸಿಕೊಳ್ಳಲು ಈಗ ಪ್ರಸ್ತಾಪಿಸಲಾಗಿದೆ ಹಾಗೂ ಉಳಿದವನ್ನು ನಿರ್ವಹಣಾ ಕಾಮಗಾರಿಗಳಿಗೆ ಬಳಸಿಕೊಳ್ಳಲು ಪ್ರಸ್ತಾಪಿಸಲಾಗಿದೆ ಎಂಬುದಾಗಿಯೂ ಅದು ಉತ್ತರಿಸಿತು.

ಫೆಬ್ರವರಿ 2013ರಲ್ಲಿ 3.5 ಕಿಮೀ ಉದ್ದದ ಕೇಬಲನ್ನು ಹಾಕುವ ಹೊಸ ಕಾಮಗಾರಿಗೆ ಕಂಪನಿಯು ಕೋರಿಕೆ ಪತ್ರವನ್ನು ನೀಡಿತ್ತು ಹಾಗೂ 9.26 ಕಿಮೀಗಳಷ್ಟು[84] ಕೇಬಲ್ಲು (₹ 12.66 ಕೋಟಿ ಮೌಲ್ಯದ್ದು) ದಾಸ್ತಾನಿನಲ್ಲಿ ಲಭ್ಯವಿತ್ತಾದರೂ, ಅದನ್ನು ಬಳಸಿಕೊಂಡಿರಲಿಲ್ಲ ಎಂಬ ವಾಸ್ತವಾಂಶವನ್ನು ಉತ್ತರವು ಪರಿಗಣಿಸಿಲ್ಲ.

ಈ ರೀತಿಯಾಗಿ, ಬೆಂಗಳೂರು ನಗರ ಪ್ರದೇಶದಲ್ಲಿ ಕೇವಲ 1,000 ಚದರ ಮಿಮೀ ಕೇಬಲ್ಲುಗಳನ್ನು ಮಾತ್ರ ಬಳಸಲು ನಿಶ್ಚಯಿಸಲಾಗಿತ್ತಾದರೂ 630 ಚದರ ಮಿಮೀ ಕೇಬಲ್ಲುಗಳನ್ನು ಖರೀದಿಸಿದ್ದು ಹಾಗೂ ಹೊಸ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಉಗ್ರಾಣದಲ್ಲಿ ಲಭ್ಯವಿರುವ ಕೇಬಲ್ಲುಗಳ ಹೆಚ್ಚುವರಿ ದಾಸ್ತಾನನ್ನು ಬಳಸಿಕೊಳ್ಳುವ ವ್ಯವಸ್ಥೆಯ ಅನುಪಸ್ಥಿತಿಯು, ₹ 29.64 ಕೋಟಿ ಮೊತ್ತದಷ್ಟು ದಾಸ್ತಾನು ವ್ಯರ್ಥವಾಗಿ ಉಳಿದಿರುವಲ್ಲಿ ಪರಿಣಮಿಸಿತು. ಲೆಕ್ಕಪರಿಶೋಧನೆಯಲ್ಲಿ ಇದನ್ನು ಸ್ಪಷ್ಟಪಡಿಸಿದನಂತರ, ದಾಸ್ತಾನಿನಲ್ಲಿ ಉಳಿದಿದ್ದ ಕೇಬಲ್ಲುಗಳನ್ನು ಹೊಸ ಕಾಮಗಾರಿಗಳಿಗೆ ಹಂಚುವ/ನೀಡುವ ಪ್ರಸ್ತಾವನೆಗಳನ್ನು ಮಾಡಲಾಯಿತು.

---

[83] ಪ್ರತಿಯೊಂದು ಡ್ರಮ್ಮಿನಲ್ಲಿಯೂ ಭೂಮಿಯೊಳಗೆ ಹಾಕುವ ಕೇಬಲ್ಲಿನ ಉದ್ದವು 310 ಮೀಟರುಗಳಿಂದ 425 ಮೀಟರುಗಳವರೆಗೆ ಇರುತ್ತದೆ ಹಾಗೂ ಕೇಬಲ್ಲು ಜಂಟಿಗಳನ್ನು ಬಳಸುವ ಮೂಲಕ ಕೇಬಲ್ಲುಗಳನ್ನು ಒಂದಕ್ಕೊಂದು ಸೇರಿಸಲಾಗುವುದು.

[84] ಫೆಬ್ರವರಿ 2013ರ ಪ್ರಾರಂಭದಲ್ಲಿದ್ದಂತೆ ಕೇಬಲ್ಲುಗಳ ದಾಸ್ತಾನಿನ ಸ್ಥಿತಿಗತಿ. ತದನಂತರ ಫೆಬ್ರವರಿ 2013ರಿಂದ ಮಾರ್ಚ್ 2014ರ ನಡುವೆ 0.70 ಕಿಮೀಗಳಷ್ಟು ಕೇಬಲ್ಲುಗಳನ್ನು ಸ್ವೀಕರಿಸಲಾಗಿತ್ತು.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

## 3.8 *ಗುತ್ತಿಗೆದಾರರಿಗೆ ಅನುಚಿತ ಲಾಭ*

**ಭಾರತದೊಳಗೆ ಕಾರ್ಯನಿರ್ವಹಿಸುವ ಸೇವೆಗಳಿಗೆ ದರಗಳನ್ನು ಭಾರತೀಯ ರೂಪಾಯಿಗಳಲ್ಲಿ ಘೋಷಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿದ್ದ ಟೆಂಡರು ಸವಾಲು ಷರತ್ತುಗಳನ್ನು ಕಡೆಗಣಿಸಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಟೆಂಡರನ್ನು ಅಮೆರಿಕದ ಡಾಲರುಗಳಲ್ಲಿ ಒಪ್ಪಿಕೊಂಡಿತು, ಇದು ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್‌ಗೆ ₹ 7.23 ಕೋಟಿ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು(ಕಂಪನಿ) ತನ್ನ ಆರು ಕಾಮಗಾರಿ ನಿವೇಶನಗಳಲ್ಲಿ[85] 33.016 ಕಿಮೀಗಳಷ್ಟು ಒಟ್ಟಾರೆ ಉದ್ದದ ವಿದ್ಯುತ್ ಮಾರ್ಗಕ್ಕಾಗಿ 220 ಕಿವ್ಯಾ 1,000 ಚದರ ಮಿ.ಮೀ.ನ ಭೂಗತ ಕೇಬಲನ್ನು ಹಾಕುವ ಕಾಮಗಾರಿಗಾಗಿ ರೂಪುರೇಖೆ/ವಿನ್ಯಾಸ, ತಾಂತ್ರಿಕತೆ, ಸರಬರಾಜು, ಸ್ಥಾಪನೆ, ಪರೀಕ್ಷಣೆ ಹಾಗೂ ಕಾರ್ಯಾಚರಣೆಗೊಳಿಸುವಿಕೆಗಾಗಿ ಟೆಂಡರುಗಳನ್ನು ಆಹ್ವಾನಿಸಿತು (ಏಪ್ರಿಲ್ 2007/ಜನವರಿ 2008). ಗುತ್ತಿಗೆಗಳು ದೇಶೀಯ ಹಾಗೂ ಆಮದು ಮಾಡಿಕೊಳ್ಳಲ್ಪಡುವ ಸಾಮಗ್ರಿಗಳ ಸರಬರಾಜನ್ನು ಒಳಗೊಂಡಿದ್ದವು. ಕಾಮಗಾರಿಗಳನ್ನು ದೀಪಕ್ ಕೇಬಲ್ಸ್ (ಇಂಡಿಯಾ)ಗೆ ಲಿಮಿಟೆಡ್ (ಗುತ್ತಿಗೆದಾರರು), ನಾಲ್ಕು ಪ್ಯಾಕೇಜುಗಳಲ್ಲಿ (ಟಿಎಲ್–287, 288, 322 ಹಾಗೂ 323) ನೀಡಲಾಗಿತ್ತು (ಜನವರಿ 2008/ಏಪ್ರಿಲ್ 2008/ಮೇ 2009/ಜುಲೈ 2009).

ಟೆಂಡರು/ಸವಾಲು ದಾಖಲೆಯ ಒಂದು ಭಾಗವಾಗಿರುವ ಸವಾಲುದಾರರಿಗೆ ನಿರ್ದೇಶನಗಳು ಇನ್ನಿತರವುಗಳ ಜೊತೆಗೆ, ಸವಾಲುದಾರರು ಆಮದು ಮಾಡಿಕೊಳ್ಳುವ ಸಾಮಗ್ರಿಗಳನ್ನು ಅಮೇರಿಕದ ಡಾಲರುಗಳಲ್ಲಿ ಅಥವಾ ಭಾರತೀಯ ರೂಪಾಯಿಗಳಲ್ಲಿ ಹಾಗೂ ದೇಶೀಯ ಸಾಮಗ್ರಿಗಳನ್ನು ಭಾರತೀಯ ರೂಪಾಯಿಗಳಲ್ಲಿ ಮಾತ್ರ ಘೋಷಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿದ್ದವು. ಬಂದರಿನಲ್ಲಿ ಅನುಮತಿ ಪಡೆಯುವುದು, ಒಳನಾಡ ಸಾಗಾಣಿಕೆ, ವಿಮೆ, ಸಾಮಗ್ರಿಗಳನ್ನು ಇಳಿಸುವುದು, ದಾಸ್ತಾನು, ನಿವೇಶನದಲ್ಲಿ ನಿರ್ವಹಣೆ, ಸ್ಥಾಪನೆ, ಪರೀಕ್ಷಣೆ ಹಾಗೂ ಕಾರ್ಯಾರಂಭಗೊಳಿಸುವಿಕೆ ಇವೇ ಮುಂತಾದ ಕಾರ್ಯನಿರ್ವಹಿಸಬೇಕಾದ ಸೇವೆಗಳ ವೆಚ್ಚವನ್ನು ಭಾರತೀಯ ರೂಪಾಯಿಯಲ್ಲಿ ಘೋಷಿಸತಕ್ಕದ್ದು ಎಂಬುದಾಗಿಯೂ ಸವಾಲುದಾರರಿಗೆ ನೀಡಲಾಗಿದ್ದ ನಿರ್ದೇಶನಗಳು ನಿರ್ದಿಷ್ಟಪಡಿಸಿದ್ದವು.

ಭಾರತದೊಳಗೆ ಕಾರ್ಯನಿರ್ವಹಿಸಬೇಕಾದ ಸೇವೆಗಳು, ಅವೆಂದರೆ ಆಮದು ಸುಂಕ, ನಿವೇಶನಕ್ಕೆ ಸಾಗಾಣಿಕೆ ಹಾಗೂ ತುಂಬುವುದು ಹಾಗೂ ಇಳಿಸುವುದು, ಇವುಗಳಿಗೆ ಗುತ್ತಿಗೆದಾರರು ದರಗಳನ್ನು ಅಮೆರಿಕದ ಡಾಲರಿನಲ್ಲಿ ಘೋಷಿಸಿದ್ದರು (ಆಗಸ್ಟ್ 2007/ಫೆಬ್ರವರಿ 2008). ಅದು ದೇಶೀಯ ಸಾಮಗ್ರಿಗಳು ಮತ್ತು ಭಾರತದ ಒಳಗೆ ಕಾರ್ಯನಿರ್ವಹಿಸಬೇಕಾದ ಸೇವೆಗಳಿಗೆ ಭಾರತೀಯ ರೂಪಾಯಿಗಳಲ್ಲಿಯೇ ಘೋಷಿಸತಕ್ಕದ್ದು ಎಂಬುದಾಗಿ ತಿಳಿಸಿದ್ದ 'ಸವಾಲುದಾರರಿಗೆ ನೀಡಲಾಗಿದ್ದ ನಿರ್ದೇಶನ'ಗಳ ಪ್ರಕಾರ ಇರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ಸವಾಲುಗಳನ್ನು ಹೊರತೆಗೆಯುವ ವೇಳೆಯಲ್ಲಿ ಚಾಲ್ತಿಯಲ್ಲಿರುವ ದರಗಳಲ್ಲಿ ಅಮೆರಿಕದ ಡಾಲರನ್ನು ಒಪ್ಪಿಕೊಳ್ಳಲಾಗುವುದು ಎಂಬುದಾಗಿ ತಿಳಿಸುವಲ್ಲಿಯೂ ಕಾಮಗಾರಿಯನ್ನು ನೀಡುವ ವೇಳೆಯಲ್ಲಿ ಕಂಪನಿಯು ವಿಫಲಗೊಂಡಿತ್ತು.

[85] 220ಕಿವ್ಯಾ ಪೂರ್ವ ವಿಭಾಗ ಕಾಂಪೌಂಡು ಉಪಕೇಂದ್ರದಿಂದ 220ಕಿವ್ಯಾ 'ಎ ಸ್ಟೇಷನ್ನು' ಹಾಗೂ 220ಕಿವ್ಯಾ ಪೂರ್ವ ವಿಭಾಗ ಕಾಂಪೌಂಡು ಉಪಕೇಂದ್ರದಿಂದ 220ಕಿವ್ಯಾ ನಿಮ್ಹಾನ್ಸ್ ಉಪಕೇಂದ್ರ (ಟಿಎಲ್:287–8.97 ಕಿ.ಮೀ.ಗಳು); 220ಕಿವ್ಯಾ ಪೂರ್ವ ವಿಭಾಗ ಕಾಂಪೌಂಡು ಉಪಕೇಂದ್ರದಿಂದ 220ಕಿವ್ಯಾ ಎಚ್‌ಎಎಲ್ ಉಪಕೇಂದ್ರ (ಟಿಎಲ್:288–7.9 ಕಿ.ಮೀ.ಗಳು); 220ಕಿವ್ಯಾ ಎನ್‌ಆರ್‌ಎಸ್ ರಾಜಾಜಿನಗರದಿಂದ 220ಕಿವ್ಯಾ ಆನಂದರಾವ್ ವೃತ್ತ ಕೇಂದ್ರ ಹಾಗೂ ಕೇಬಲ್ಲು ಅಂತ್ಯಗೊಳ್ಳುವ ಟವರ್ ಕೇಂದ್ರದಿಂದ 220ಕಿವ್ಯಾ ಎಚ್‌ಎಸ್‌ಆರ್ ಬಡಾವಣೆ ಕೇಂದ್ರ (ಟಿಎಲ್:322–5.466 ಕಿಮೀಗಳು); 220ಕಿವ್ಯಾ ಎಚ್‌ಎಸ್‌ಆರ್ ಬಡಾವಣೆ ಕೇಂದ್ರದಿಂದ ನಿಮ್ಹಾನ್ಸ್ ಕೇಂದ್ರ (ಟಿಎಲ್:323–10.68 ಕಿ.ಮೀ.ಗಳು).

ಗುತ್ತಿಗೆದಾರರು ಈ ಸೇವೆಗಳಿಗೆ ಬಿಲ್ಲುಗಳನ್ನು ಅಮೆರಿಕದ ಡಾಲರುಗಳಲ್ಲಿ[86] ಕೋರಿದ್ದರು ಹಾಗೂ ಕಂಪನಿಯು ಪ್ರಸಕ್ತ ಇದ್ದಂತಹ ಅಮೆರಿಕದ ಡಾಲರಿನ ದರಗಳಲ್ಲಿ ಬಿಲ್ಲುಗಳನ್ನು ಒಪ್ಪಿಕೊಂಡಿತು (2008–09 ಹಾಗೂ 2013–14ರ ನಡುವೆ) ಕಂಪನಿಯು ಕಡೆಯ ಪಕ್ಷ ಬಿಲ್ಲುಗಳನ್ನು ಒಪ್ಪಿಕೊಳ್ಳುವ ವೇಳೆಯಲ್ಲಿಯಾದರೂ, ಸವಾಲುಗಳನ್ನು ಹೊರತೆಗೆಯುವ ವೇಳೆಯಲ್ಲಿ ಭಾರತೀಯ ರೂಪಾಯಿಗಳು 39.93 ಹಾಗೂ ಭಾರತೀಯ ರೂಪಾಯಿಗಳು 41.34ರ ನಡುವಿನಲ್ಲಿ ಇದ್ದಂತಹ ಅಮೆರಿಕದ ಡಾಲರಿನ ದರಗಳನ್ನು ಅಳವಡಿಸಿಕೊಳ್ಳಬೇಕಿತ್ತು. ಅದರ ಬದಲಾಗಿ, ಕಂಪನಿಯು ಬಿಲ್ಲುಗಳ ಪಾವತಿಯ ಸಮಯದಲ್ಲಿ ಇದ್ದಂತಹ ಭಾರತೀಯ ರೂಪಾಯಿಗಳು 41.92ರಿಂದ ಭಾರತೀಯ ರೂಪಾಯಿಗಳು 48.20ರ ನಡುವಿನ ಅಮೆರಿಕದ ಡಾಲರು ದರಗಳನ್ನು ಅಳವಡಿಸಿಕೊಂಡಿತು.

ಸವಾಲಿನ ಕರಾರುಗಳನ್ನು ಉಲ್ಲಂಘಿಸಿ ಟೆಂಡರನ್ನು ಅಮೆರಿಕದ ಡಾಲರುಗಳಲ್ಲಿ ಒಪ್ಪಿಕೊಂಡಿದ್ದು ಹಾಗೂ ಬಿಲ್ಲುಗಳನ್ನು ಪಾವತಿಸುವ ದಿನದಂದು ಇದ್ದ ದರಗಳನ್ನು ಅಳವಡಿಸಿಕೊಂಡಿದ್ದು ಗುತ್ತಿಗೆದಾರರಿಗೆ ₹ 7.23 ಕೋಟಿ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.

ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ, ಅಂತಿಮ ಬಿಲ್ಲುಗಳನ್ನು ಸ್ವೀಕರಿಸಿದನಂತರ ಈ ಬಗ್ಗೆ ಪರಿಶೀಲನೆಗಳನ್ನು ನಡೆಸುವ ಷರತ್ತಿಗೆ ಒಳಪಡಿಸಿ ವ್ಯತ್ಯಾಸದ ಮೊತ್ತಗಳನ್ನು ಲೆಕ್ಕಹಾಕಲಾಗುವುದು ಹಾಗೂ ಗುತ್ತಿಗೆದಾರರಿಂದ ವಸೂಲಾತಿ ಮಾಡಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2014).

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

### *3.9 ಹೆಚ್ಚಿನ ಮೂಲಭೂತಸೌಕರ್ಯಗಳ ನಿರ್ಮಾಣ*

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ₹ 3.57 ಕೋಟಿ ವೆಚ್ಚದಲ್ಲಿ ಮೂಲಭೂತಸೌಕರ್ಯಗಳನ್ನು ನಿರ್ಮಿಸಿತು, ಅದು ಅಗತ್ಯತೆಯ ಆಧಾರದ ಮೇರೆಗೆ ಆಗಿರಲಿಲ್ಲ.**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕಂಪನಿ) ಸ್ಟಾಟಿಕ್ ಫ್ರೀಕ್ವೆನ್ಸಿ ಕನ್ವರ್ಟರ್[87] ಸಮುಚ್ಚಯದಿಂದ ವಿದ್ಯುತ್ತನ್ನು ವರ್ಗಾಯಿಸುವ ಮತ್ತು ತುರ್ತು ಸಂದರ್ಭದಲ್ಲಿ ಕಾಯ್ದಿರಿಸಿದ ಮಾರ್ಗವನ್ನು ಒದಗಿಸುವ ಉದ್ದೇಶದಿಂದ ವಾಜಮಂಗಲ ಮತ್ತು ಕಡಕೊಳ ಉಪಕೇಂದ್ರಗಳ ನಡುವೆ ಒಂದು 66 ಕಿವ್ಯಾ ಜೋಡಿ ವಿದ್ಯುನ್ಮಂಡಲ ಮಾರ್ಗದ ನಿರ್ಮಾಣಕ್ಕಾಗಿ ಸವಿವರ ಯೋಜನಾ ವರದಿಗೆ ಅನುಮೋದನೆ ನೀಡಿತು (ಫೆಬ್ರವರಿ 2007).


ಜೋಡಿ ವಿದ್ಯುನ್ಮಂಡಲ ಮಾರ್ಗದ ನಿರ್ಮಾಣದ ಕಾಮಗಾರಿಯನ್ನು ಶರಾವತಿ ಕಂಡಕ್ಟರ್ಸ್ ಪ್ರೈವೇಟ್ ಲಿಮಿಟೆಡ್‌ಗೆ ಫೆಬ್ರವರಿ 2010ರಲ್ಲಿ ಪೂರ್ಣಗೊಳಿಸುವಂತೆ ₹ 3.60 ಕೋಟಿ ಮೊತ್ತಕ್ಕೆ ನೀಡಿತು (ಆಗಸ್ಟ್ 2009). ಸೆಪ್ಟೆಂಬರ್ 2014ರಲ್ಲಿದ್ದಂತೆ, ಕಂಪನಿಯು ₹ 3.57 ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿತ್ತು. ಆದರೆ ಮಾರ್ಗದ ಹಕ್ಕು ಸಮಸ್ಯೆಗಳ ಕಾರಣ ಕಾಮಗಾರಿಯನ್ನು ಪೂರ್ಣಗೊಳಿಸಿರಲಿಲ್ಲ.

---

[86] ಐಟಿಬಿಯ ಷರತ್ತು 13.0 ಪ್ರಕಾರ, ಅಮೆರಿಕದ ಡಾಲರ್‌ನಲ್ಲಿ ಘೋಷಿಸಲಾಗಿರುವ ಆಮದು ಮಾಡಿಕೊಂಡಿರುವ ಸರಕುಗಳಿಗೆ ಪಾವತಿಯನ್ನು ರವಾನೆಯ ದಿನಾಂಕದಂದು ನಿಗದಿಯಾಗಿರುವ ಅಥವಾ ವಾಸ್ತವಿಕ ಇವೆರಡರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸಮನಾದ ಭಾರತೀಯ ರೂಪಾಯಿಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕು ಅಧಿಸೂಚನೆ ಹೊರಡಿಸಿರುವ ದರದಲ್ಲಿ ಟಿಟಿ ಖರೀದಿ ಕಾರ್ಡು ವಿನಿಮಯ ದರದಲ್ಲಿ ಮಾಡತಕ್ಕದ್ದು.

[87] ನಿಷ್ಕ್ರಿಯ ಅಂತರ ಪರಿವರ್ತಕವನ್ನು ಶಿವನಸಮುದ್ರ ಹಾಗೂ ಶಿಂಷಾಪುರ ಜಲ ವಿದ್ಯುತ್ ಉತ್ಪಾದನಾ ಸ್ಥಾವರದಿಂದ ವರ್ಗಾಯಿಸಲಾದ ವಿದ್ಯುತ್ತನ್ನು ಗ್ರಿಡ್ಡಿಗೆ ಹರಿಸುವುದಕ್ಕೆ ಮೊದಲು ಅಗತ್ಯವಿರುವ ಅಂತರ ಮಟ್ಟಗಳಿಗೆ ಪರಿವರ್ತಿಸುವುದಕ್ಕಾಗಿ ಬಳಸಲಾಗುತ್ತಿತ್ತು.

ಎಸ್‌ಎಫ್ಸಿ ಸಂಕೀರ್ಣದ ಸುತ್ತಮುತ್ತಲಿನ ವಿದ್ಯುತ್‌ಜಾಲ ಸಂಪರ್ಕದ ನೀಲನಕ್ಷೆಯನ್ನು ಈ ಕೆಳಗೆ ನೀಡಲಾಗಿದೆ:



ಎಸ್‌ಎಫ್‌ಸಿ ಸಂಕೀರ್ಣದ ಸುತ್ತಮುತ್ತಲಿನ ವಿದ್ಯುತ್‌ಜಾಲ ಸಂಪರ್ಕದ ನೀಲನಕ್ಷೆ

ನಾವು ಈ ಕೆಳಗಿನ ಅಂಶಗಳನ್ನು ಗಮನಿಸಿದೆವು:

- ಎಸ್‌ಎಫ್‌ಸಿ ಸ್ಟೇಷನನ್ನು ಎರಡು ಜಲ ವಿದ್ಯುತ್ ಉತ್ಪಾದನಾ ಸ್ಥಾವರಗಳು, ಅವೆಂದರೆ ಶಿಂಷಾಪುರ (17.2 ಮೆವ್ಯಾ) ಹಾಗೂ ಶಿವಸಮುದ್ರಂ (42 ಮೆವ್ಯಾ) ನಿಂದ ವಿದ್ಯುತ್ತನ್ನು ವರ್ಗಾಯಿಸುವುದಕ್ಕಾಗಿ ವಿನ್ಯಾಸಗೊಳಿಸಲಾಗಿತ್ತು. ಶಿಂಷಾಪುರದಿಂದ ವಿದ್ಯುತ್ತನ್ನು ಟಿ.ಕೆ. ಹಳ್ಳಿ ಉಪಕೇಂದ್ರಕ್ಕೂ ಸಹ ವರ್ಗಾವಣೆ ಮಾಡಬಹುದಾಗಿತ್ತು (ನೀಲ ನಕ್ಷೆಯಲ್ಲಿ 1ನ್ನು ನೋಡಿ).

- ಎರಡು ಜಲ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಉತ್ಪಾದಿಸಲಾದ (ಗರಿಷ್ಠ 59.2 ಮೆವ್ಯಾ) ಹಾಗೂ ಎಸ್‌ಎಫ್‌ಸಿ ಸಂಕೀರ್ಣದಲ್ಲಿ ಸ್ವೀಕರಿಸಲಾದ ವಿದ್ಯುತ್ತನ್ನು ಮುಂದಕ್ಕೆ ಇತರೆ ಸಂಪರ್ಕಹೊಂದಿರುವ ಉಪಕೇಂದ್ರಗಳಿಗೆ ಈ ಕೆಳಗಿನ ಮಾರ್ಗಗಳ ಮೂಲಕ ಪ್ರಸರಣ ಮಾಡಲಾಗುತ್ತಿತ್ತು:

**ಕೋಷ್ಟಕ 3.2: ಎಸ್‌ಎಫ್‌ಸಿ ಸಂಕೀರ್ಣದಲ್ಲಿ ಪ್ರಸರಣ ಮಾರ್ಗಗಳು**

| ಮಾರ್ಗಗಳು | ಮಾರ್ಗಕ್ಕೆ ಸಂಪರ್ಕಿಸಲಾಗಿರುವ ಉಪ ಕೇಂದ್ರಗಳು | ನಕ್ಷೆಯಲ್ಲಿನ ಸಂಖ್ಯೆಯ ಉಲ್ಲೇಖ |
|---|---|---|
| ಎಸ್‌ಎಫ್‌ಸಿ–ವಾಜಮಂಗಲ | ಕಿರುಗಾವಲು, ಬನ್ನೂರು, ನಂಜಾಪುರ ಏತ ನೀರಾವರಿ ಯೋಜನೆ ಪಂಪುಗಳು, ವಾಜಮಂಗಲ | 3 |
| ಎಸ್‌ಎಫ್‌ಸಿ - ಮೇಘಲಾಪುರ | ಬಿಜಿ ಪುರ, ಟಿಎನ್ ಪುರ, ಮೇಘಲಾಪುರ | 4 |
| ಎಸ್‌ಎಫ್‌ಸಿ - ಶಿಂಷಾಪುರ | ಶಿಂಷಾಪುರ | 5 |
| ಎಸ್‌ಎಫ್‌ಸಿ - ಟಿ.ಕೆ. ಹಳ್ಳಿ | ಟಿಕೆ ಹಳ್ಳಿ | 6 |
| ಎಸ್‌ಎಫ್‌ಸಿ - ಮಧುವನಹಳ್ಳಿ | ಮಧುವನಹಳ್ಳಿ | 7 |
| ಎಸ್‌ಎಫ್‌ಸಿ - ಸತ್ತೇಗಾಲ | ಸತ್ತೇಗಾಲ | 8 |

ಉಪಕೇಂದ್ರಗಳ (ಮೇಲಿನ ಕೋಷ್ಟಕದಲ್ಲಿ ತಿಳಿಸಿರುವ) ಮೇಲಿನ ಅತ್ಯುನ್ನತ ಮಟ್ಟದ ಸಂಯೋಜಿತ ಏಕೀಕೃತ ವಿದ್ಯುತ್‌ಹೊರೆಯು 2008–09ರಲ್ಲಿ ಕಾಮಗಾರಿಯನ್ನು ನೀಡುವ ಮೊದಲು 70 ಮೆವ್ಯಾ[88]

[88] 2013–14ರಲ್ಲಿ ಅತ್ಯುಚ್ಚ ಮಟ್ಟದ ವಿದ್ಯುತ್–ಹೊರೆಯು 88 ಮೆವ್ಯಾ ಆಗಿತ್ತು.

ಆಗಿತ್ತು. ಅದು ಎರಡು ಜಲ ವಿದ್ಯುತ್ ಉತ್ಪಾದನಾ ಸ್ಥಾವರಗಳು ಉತ್ಪಾದಿಸಿ ಲಭ್ಯವಿರುವ 59.2 ಮೆವ್ಯಾ ವಿದ್ಯುತ್ತಿನ ಪ್ರಮಾಣವನ್ನು ಬಹಳಷ್ಟು ಮಟ್ಟಿಗೆ ಮೀರಿತ್ತು. ನಿಸ್ಸಂಶಯವಾಗಿ, ಈ ಮಾರ್ಗಗಳಲ್ಲಿ/ಸ್ಥಾವರಗಳಲ್ಲಿ ವಿದ್ಯುತ್ತಿಗೆ ಸಾಕಷ್ಟು ಬೇಡಿಕೆ ಇತ್ತು ಹಾಗೂ ಒಂದು ಮಾರ್ಗದಲ್ಲಿನ ತುರ್ತು ಕೋರಿಕೆಯ ಸಂದರ್ಭದಲ್ಲಿ ವಿದ್ಯುತ್ ಹೊರೆಯನ್ನು ಇತರೆ ಮಾರ್ಗಗಳಿಗೆ/ಸ್ಥಾವರಗಳಿಗೆ (ಕೋಷ್ಟಕದಲ್ಲಿ ನಮೂದಿಸಿರುವ) ವಿತರಿಸಬಹುದಿತ್ತು. ಆದ್ದರಿಂದ, ಉದ್ದೇಶಿಸಿದಂತೆ ಮತ್ತೊಂದು ಬದಲಿ ಮಾರ್ಗದ ಅಗತ್ಯತೆ ಇರಲಿಲ್ಲ.

ಮೇಲಿನ ಅಂಶಗಳ ಕಾರಣ, '*ಎಸ್‌ಎಫ್‌ಸಿ ಸಂಕೀರ್ಣದಿಂದ ವಿದ್ಯುತ್ತನ್ನು ವರ್ಗಾವಣೆಗೊಳಿಸುವ*' ಉದ್ದೇಶದಿಂದ ವಾಜಮಂಗಲ ಹಾಗೂ ಕಡಕೊಳ ಉಪಕೇಂದ್ರಗಳ (ನೀಲನಕ್ಷೆಯಲ್ಲಿ X ಎಂಬುದಾಗಿ ಗುರುತಿಸಲಾಗಿದೆ) ವಿದ್ಯುನ್ಮಂಡಲ ಮಾರ್ಗದ ನಿರ್ಮಾಣವು ಸಮರ್ಥನೀಯವಾಗಿರಲಿಲ್ಲ.

ವಿಶ್ವಸನೀಯತೆಯ ಒಂದು ನಿರ್ದಿಷ್ಟ ಪ್ರಮಾಣವನ್ನು ನಿರ್ವಹಿಸುವುದು ಅಗತ್ಯವಾಗಿತ್ತಾದ್ದರಿಂದ ಹಾಗೂ ಎಸ್‌ಎಫ್‌ಸಿ ಸಂಕೀರ್ಣದಿಂದ ವಿದ್ಯುತ್ತನ್ನು ವರ್ಗಾಯಿಸುವುದಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ತುರ್ತು ಕೋರಿಕೆಯ ಸಂದರ್ಭದಲ್ಲಿ ಮತ್ತೊಂದು ಬದಲಿ ಮಾರ್ಗವನ್ನು ಒದಗಿಸಲು ಪ್ರಸ್ತುತ ಮಾರ್ಗವನ್ನು ಪ್ರಸ್ತಾಪಿಸಲಾಯಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಅಕ್ಟೋಬರ್ 2014).

ಮೇಲಿನ ಕೋಷ್ಟಕದಲ್ಲಿ ಸೂಚಿಸಿರುವಂತೆ, ಪ್ರಸ್ತುತ ಇದ್ದಂತಹ ಉಪಕೇಂದ್ರಗಳ ಅತ್ಯುಚ್ಚ ಮಟ್ಟದ ಏಕೀಕೃತ ವಿದ್ಯುತ್‌ಹೊರೆಯು ಎಸ್‌ಎಫ್‌ಸಿ ಸಂಕೀರ್ಣದಿಂದ ಲಭ್ಯವಿರುವ ವಿದ್ಯುತ್ತಿನ ಪ್ರಮಾಣವನ್ನು ಬಹಳಷ್ಟು ಮಟ್ಟಿಗೆ ಮೀರಿತ್ತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ನೀಲನಕ್ಷೆಯಲ್ಲಿ ಸೂಚಿಸಿರುವಂತೆ, ತುರ್ತು ಕೋರಿಕೆಯ ಸಂದರ್ಭದಲ್ಲಿ ವಿಶ್ವಸನೀಯತೆಯ ನಿರ್ವಹಣೆಗಾಗಿ ಇತರೆ ಮಾರ್ಗಗಳು/ಸ್ಟೇಷನ್ನುಗಳು ಇದ್ದವು. ಮೂಲಭೂತಸೌಕರ್ಯದ ಮೇಲೆ ಮಾಡಲಾದ ₹ 3.57 ಕೋಟಿ ವೆಚ್ಚವು, ಅಗತ್ಯತೆಯ ಆಧಾರದ ಮೇರೆಗೆ ಆಗಿರಲಿಲ್ಲ, ಅದು ಸಂಬಂಧಿಸಿದವರ ಮೇಲೆ ಜವಾಬ್ದಾರಿಯನ್ನು ನಿಗದಿಗೊಳಿಸುವುದನ್ನು ಅಪೇಕ್ಷಿಸುತ್ತದೆ.

**ವಿದ್ಯುತ್ ಸರಬರಾಜು ಕಂಪನಿಗಳು**

## 3.10. *ರಾಜ್ಯದಲ್ಲಿ ವಿದ್ಯುತ್ತಿನ ಖರೀದಿ*

**ಎಸ್ಕಾಂಗಳು ವಿದ್ಯುತ್ತಿನ ಖರೀದಿಗೆ ಪೂರ್ವಭಾವಿ ಯೋಜನೆಯನ್ನು ತಯಾರಿಸಲು ಅನುಕೂಲ ಕಲ್ಪಿಸುತ್ತಿದ್ದಂತಹ ಬೇಡಿಕೆ–ಪೂರೈಕೆಯ ಅಂತರವನ್ನು ತಿಳಿಯಲು ವಾರ್ಷಿಕ ವಿದ್ಯುತ್–ಹೊರೆ ಪೂರ್ವಾನುಮಾನ ಅಂದಾಜನ್ನು ತಯಾರಿಸಿರಲಿಲ್ಲ. ರಾಜ್ಯದಲ್ಲಿ ಉಷ್ಣ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಅತ್ಯುತ್ತಮ ಬಳಕೆಯಾಗಿರಲಿಲ್ಲ. ಪಿಪಿಎಗಳ ಷರತ್ತುಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರಲಿಲ್ಲವಾದ್ದರಿಂದ ಎಸ್ಕಾಂಗಳಿಗೆ ಹೆಚ್ಚುವರಿ ಹಣಕಾಸಿನ ಹೊರೆಯುಂಟಾಯಿತು. ರಾಜ್ಯವು ಅತ್ಯುಚ್ಚ ಅವಧಿಯ ಬೇಡಿಕೆಯ ವಿದ್ಯುತ್ ಉತ್ಪಾದನೆಯ ಗರಿಷ್ಠೀಕರಣಕ್ಕಾಗಿ ರಾಜ್ಯದೊಳಗಿನ ಲಭ್ಯತೆ ಆಧಾರಿತ ದರಪಟ್ಟಿ ವ್ಯವಸ್ಥೆಯನ್ನು ಕಾರ್ಯಗತಗೊಳಿಸಿರಲಿಲ್ಲ.**

***ಪೀಠಿಕೆ***

**3.10.1.** ಆರ್ಥಿಕಸ್ಥಿತಿಯ ಸರ್ವಾಂಗೀಣ ಅಭಿವೃದ್ಧಿಗೆ ವಿದ್ಯುತ್ ಅತ್ಯವಶ್ಯಕವಾಗಿದೆ. ಕರ್ನಾಟಕದಲ್ಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) ವಿದ್ಯುತ್ತಿನ ಪ್ರಸರಣವನ್ನು ನಿರ್ವಹಿಸುತ್ತದೆ ಹಾಗೂ ಐದು ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು)[89] ರಾಜ್ಯದಲ್ಲಿನ ವಿದ್ಯುತ್ ವಿತರಣೆಯನ್ನು ನಿರ್ವಹಿಸುತ್ತವೆ. ಕರ್ನಾಟದ ವಿದ್ಯುತ್ ಕಂಪನಿ ನಿಯಮಿತವು (ಪಿಸಿಕೆಎಲ್) ವಿವಿಧ ವಿದ್ಯುತ್ ಉತ್ಪಾದನಾ ಯೋಜನೆಗಳ ಸ್ಥಾಪನೆಗೆ ಅನುಕೂಲಗಳನ್ನು ಕಲ್ಪಿಸುತ್ತದೆ ಹಾಗೂ ಎಸ್ಕಾಂಗಳ ನಡುವೆ ಹಂಚಿಕೆಗಾಗಿ ವಿವಿಧ ಮೂಲಗಳಿಂದ ವಿದ್ಯುತ್ ಖರೀದಿಯನ್ನು

[89] ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕೊ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ).

ಸಮನ್ವಯಗೊಳಿಸುತ್ತದೆ, ವ್ಯಾಪಾರ ಹಾಗೂ ಸಂಬಂಧಿತ ಕಾರ್ಯಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುತ್ತದೆ ಹಾಗೂ ಎಸ್ಕಾಂಗಳ ಪರವಾಗಿ ವಿದ್ಯುತ್ ಖರೀದಿ ಒಡಂಬಡಿಕೆಗಳನ್ನು (ಪಿಪಿಎಗಳು) ತಯಾರಿಸುತ್ತದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ರಾಜ್ಯದಲ್ಲಿನ ವಿದ್ಯುತ್ ವಲಯವನ್ನು ನಿಯಂತ್ರಿಸುತ್ತದೆ.

ರಾಜ್ಯವು ಕೇಂದ್ರ ಹಾಗೂ ರಾಜ್ಯ ವಲಯದ ವಿದ್ಯುತ್ ಉತ್ಪಾದನಾ ಕಂಪನಿಗಳನ್ನು ಅವಲಂಬಿಸಿದೆ, ಅವು ಒಟ್ಟಾರೆಯಾಗಿ 2012–13ರಲ್ಲಿ ರಾಜ್ಯದ ಒಟ್ಟಾರೆ ವಿದ್ಯುತ್ ಸರಬರಾಜಿನ ಶೇಕಡಾ 60.74ರಷ್ಟನ್ನು ನೀಡಿದ್ದವು. ಕೊರತೆಯನ್ನು ವ್ಯಾಪಾರಸ್ಥರು, ನವೀಕರಿಸಬಹುದಾದ ಇಂಧನ ಮೂಲಗಳು, ಇತ್ಯಾದಿಗಳಿಂದ ವಿದ್ಯುತ್ ಉತ್ಪಾದಿಸುವವರೂ ಒಳಗೊಂಡಂತೆ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ದೀರ್ಘ, ಮಧ್ಯಮ ಹಾಗೂ ಅಲ್ಪಾವಧಿಯ ಆಧಾರದ ಮೇರೆಗೆ ವಿದ್ಯುತ್ತನ್ನು ಖರೀದಿಸುವ ಮೂಲಕ ಹೊಂದಿಸಿಕೊಳ್ಳಲಾಗುತ್ತದೆ.

### *ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು*

#### ವಿದ್ಯುತ್ ಉತ್ಪಾದನೆ

**3.10.2** ಈ ಕೆಳಗಿನ ಕೋಷ್ಟಕವು 2012–13ರವರೆಗಿನ ಐದು ವರ್ಷಗಳಲ್ಲಿ ರಾಜ್ಯದ ಅತ್ಯುಚ್ಚ ಅವಧಿಯ ಬೇಡಿಕೆ ಹಾಗೂ ವಿವಿಧ ಮೂಲಗಳಿಂದ ಖರೀದಿಸಲಾದ ವಿದ್ಯುತ್ತಿನ ಸಾರಾಂಶವನ್ನು ತಿಳಿಸುತ್ತದೆ.

**ಕೋಷ್ಟಕ 3.3: ರಾಜ್ಯದ ಅತ್ಯುಚ್ಚ ಅವಧಿಯ ಬೇಡಿಕೆ ಹಾಗೂ ವಿವಿಧ ಮೂಲಗಳಿಂದ ಖರೀದಿಸಲಾದ ವಿದ್ಯುತ್.**

| ವಿವರಗಳು | 2008-09 | 2009-10 | 2010-11 | 2011-12 | 2012-13 |
|---|---|---|---|---|---|
| ಅತ್ಯುಚ್ಚ ಅವಧಿಯ ಬೇಡಿಕೆ (ಮೆವ್ಯಾ) | 6,892.00 | 7,942.00 | 8,430.00 | 10,545.00 | 10,124.00 |
| ಅತ್ಯುಚ್ಚ ಅವಧಿಯ ಲಭ್ಯತೆ (ಮೆವ್ಯಾ) | 6,548.00 | 6,897.00 | 7,815.00 | 8,549.00 | 8,761.00 |
| ವಿದ್ಯುತ್ತಿನ ಕೊರತೆ(ಮೆವ್ಯಾ) | (344.00) | (1,045.00) | (615.00) | (1,996.00) | (1,363.00) |
| ವಿದ್ಯುತ್ತಿನ ಖರೀದಿಗಳು (ಮಿಯೂಗಳು) | | | | | |
| **ಕೇಂದ್ರ ವಲಯ ಉತ್ಪಾದನಾ ಸ್ಥಾವರಗಳು** | 9,789.80 | 10,420.30 | 10,397.27 | 11,228.28 | 11,771.19 |
| **ರಾಜ್ಯ ವಲಯ ಉತ್ಪಾದನಾ ಸ್ಥಾವರಗಳು** | 23,843.37 | 24,728.19 | 21,473.17 | 26,823.17 | 22,944.88 |
| **ಸ್ವತಂತ್ರ ವಿದ್ಯುತ್ ಉತ್ಪಾದಕರು** | | | | | |
| ನವೀಕರಿಸಬಹುದಾದ ವಿದ್ಯುತ್ತಿನ ಮೂಲಗಳು | 3,961.20 | 5,205.44 | 4,917.71 | 5,733.72 | 5,411.73 |
| ಯುಪಿಸಿಎಲ್, ಜಿಎಂಆರ್, ಟಾಟಾ ಹಾಗೂ ರಾಯಲಸೀಮ ಆಲ್ಕಲೀಸ್ ಹಾಗೂ ಕೆಮಿಕಲ್ಸ್ ಕಂಪನಿ ಲಿಮಿಟೆಡ್ | 720.71 | 532.68 | 2,020.00 | 3,419.92 | 6,107.99 |
| **ವ್ಯಾಪಾರಿಗಳು** | | | | | |
| ಮಧ್ಯಮ ಅವಧಿ, ಅಲ್ಪಾವಧಿ ಆಧಾರದ ಮೇಲೆ ಹಾಗೂ ಐಇಎಕ್ಸ್/ಪಿಎಕ್ಸ್‌ಐಎಲ್ | 1,218.94 | 1,548.16 | 7,248.66 | 5,702.68 | 10,253.05 |
| ಪರಿಚ್ಛೇದ 11 ಮತ್ತು ಇತರೆ | 2,298.59 | 874.26 | 1,229.79 | 781.91 | 666.61 |
| **ಒಟ್ಟು** | **41,832.60** | **43,309.03** | **47,286.60** | **53,689.67** | **57,155.45** |

**(ಮೂಲ: ಕರ್ನಾಟಕ ಸರ್ಕಾರವು ಒದಗಿಸಿದ ಮಾಹಿತಿಯ ಪ್ರಕಾರ)**

**3.10.3.** ರಾಜ್ಯ ವಿದ್ಯುತ್ ಹೊರೆ ರವಾನೆ ಕೇಂದ್ರವು (ಎಸ್‌ಎಲ್‌ಡಿಸಿ) ಪ್ರತೀ ತಿಂಗಳೂ ಎಸ್ಕಾಂಗಳಿಂದ ವಿದ್ಯುತ್ತಿನ ವೆಚ್ಚ (ಸ್ಥಿರ ಹಾಗೂ ವ್ಯತ್ಯಯಗೊಳ್ಳಬಹುದಾದ ವೆಚ್ಚ) ಹಾಗೂ ಅಲ್ಪಾವಧಿಯ/ಮಧ್ಯಮ ಅವಧಿಯ ಒಡಂಬಡಿಕೆಗಳ ವಿವರಗಳನ್ನು ಪಡೆದುಕೊಳ್ಳುತ್ತದೆ. ಸ್ಥಿರ ವೆಚ್ಚದ ಹಾಗೂ ಅಲ್ಪಾವಧಿ/ಮಧ್ಯಮ ಅವಧಿಯ ಬದ್ಧತೆಗಳ ಆಧಾರದ ಮೇರೆಗೆ ರವಾನೆ ನಿರ್ದೇಶನಗಳನ್ನು

ನೀಡಲಾಗುವುದು. ಪಿಪಿಎಗಳು/ಆಶಯದ ಪತ್ರಗಳನ್ನು ದಾಖಲಿಸುವುದರಿಂದ/ನೀಡುವುದರಿಂದ ಖಾಸಗಿ ವ್ಯಕ್ತಿಗಳಿಂದ ಪಡೆಯಲಾಗುವ ವಿದ್ಯುತ್ತಿನ ರವಾನೆಗೆ ಆದ್ಯತೆಯನ್ನು ನೀಡಲಾಗುವುದು.

2008–09ರಲ್ಲಿ ವಿದ್ಯುತ್ತಿನ ಕೊರತೆಯು 344 ಮೆವ್ಯಾ ಆಗಿದ್ದಿತು ಹಾಗೂ ಅದು 2012–13ರಲ್ಲಿ 1,363ಕ್ಕೆ ಹೆಚ್ಚಳಗೊಂಡಿದ್ದಿತು ಎಂಬುದನ್ನು ನಾವು ಗಮನಿಸಿದೆವು. ರಾಜ್ಯ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ವಿದ್ಯುತ್ತನ್ನು ಪಡೆಯುವುದು 2012–13ರಲ್ಲಿ 23,843.37 ಮಿಯೂಗಳಿಂದ 22,944.88 ಮಿ ಯೂಗಳಿಗೆ ಇಳಿಮುಖಗೊಂಡಿದ್ದಿತು. ಅದೇ ಸಮಯದಲ್ಲಿ, ವ್ಯಾಪಾರಸ್ಥರಿಂದ ಮಧ್ಯಮ ಹಾಗೂ ಅಲ್ಪಾವಧಿಯ ವಿದ್ಯುತ್ ಖರೀದಿಯು 2008–09ರಲ್ಲಿದ್ದ 1,218.94 ಮಿಯೂಗಳಿಂದ 2012–13ರಲ್ಲಿ 10,253.05 ಮಿಯೂಗಳಿಗೆ ಏಕಪ್ರಕಾರವಾಗಿ ಹೆಚ್ಚಳಗೊಂಡಿದ್ದಿತು, ಇದು ರಾಜ್ಯ ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ ಲಭ್ಯವಿದ್ದ ವಿದ್ಯುತ್ತಿಗೆ ಪ್ರತಿಯಾಗಿ ಖಾಸಗಿ ಮೂಲಗಳಿಂದ ವಿದ್ಯುತ್ತಿನ ಖರೀದಿಯ ಮೇಲೆ ಅಧಿಕಗೊಂಡಿದ್ದ ಅವಲಂಬನೆಯನ್ನು ಸೂಚಿಸುತ್ತಿತ್ತು.

ರಾಜ್ಯ ಉತ್ಪಾದನಾ ಸ್ಥಾವರಗಳಿಂದ ವಿದ್ಯುತ್ತನ್ನು ಕಡಿಮೆ ಪ್ರಮಾಣದಲ್ಲಿ ಹೊರಸೆಳೆಯುವಲ್ಲಿನ ಕಾರಣಗಳನ್ನು ಸಮೀಕ್ಷಿಸಲಾಯಿತು. ರಾಜ್ಯ ಉತ್ಪಾದನಾ ಸ್ಥಾವರಗಳು (ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ – ಘಟಕ 1 ಹಾಗೂ ರಾಯಚೂರು ಉಷ್ಣ ವಿದ್ಯುತ್ ಸ್ಥಾವರ ಘಟಕಗಳು 1 ರಿಂದ 8) ಘೋಷಿಸಿಕೊಂಡಿದ್ದ ಲಭ್ಯತೆಯ ಪ್ರಕಾರ ವಿದ್ಯುತ್ತಿನ ಲಭ್ಯತೆಯನ್ನು ಎಸ್ಕಾಂಗಳು ಸಂಪೂರ್ಣವಾಗಿ ಬಳಸಿಕೊಂಡಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ರಾಜ್ಯ ಉಷ್ಣ ಉತ್ಪಾದನಾ ಸ್ಥಾವರಗಳು 2009–10ರಿಂದ 2012–13ರ ಅವಧಿಗೆ ನೀಡಿದ್ದ ಘೋಷಣೆಗಳ ಪ್ರಕಾರ, ಎಸ್ಕಾಂಗಳಿಗೆ ಲಭ್ಯವಿದ್ದ ವಿದ್ಯುತ್ತು 54,435.695 ಮಿಯೂಗಳು. ಇದಕ್ಕೆ ಪ್ರತಿಯಾಗಿ ಹೊರಸೆಳೆದಿದ್ದುದು 46,605.227 ಮಿಯೂಗಳು, ಇದರಿಂದಾಗಿ ಲಭ್ಯವಿದ್ದ ವಿದ್ಯುತ್ತಿನಲ್ಲಿ 7,830.468 ಮಿಯೂಗಳಷ್ಟು ಕಡಿಮೆ ಪ್ರಮಾಣ ಹೊರಸೆಳೆಯುವಂತಾಯಿತು.

ಈ ರೀತಿಯಾಗಿ, ಲಭ್ಯವಿದ್ದಷ್ಟರ ಮಟ್ಟಿಗೆ ರಾಜ್ಯ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಅಗ್ಗದ ದರದ ವಿದ್ಯುತ್ತನ್ನು ಖರೀದಿಸದಿದ್ದುದು ಹಾಗೂ ಇತರೆ ಮೂಲಗಳಿಂದ ಅಧಿಕ ದರಗಳಲ್ಲಿ ಖರೀದಿಸಲು ಮೊರೆ ಹೋದುದರಿಂದ ಎಸ್ಕಾಂಗಳಿಗೆ ₹ 1,434.13 ಕೋಟಿ[90] ಮೊತ್ತದಷ್ಟು ಹೆಚ್ಚುವರಿ ವೆಚ್ಚವಾಯಿತು, ಅದನ್ನು ಕಟ್ಟಕಡೆಯ ಹಂತದ ಬಳಕೆದಾರರಿಗೆ ವರ್ಗಾಯಿಸಲಾಯಿತು. ಶೇಕಡಾ 50ರಷ್ಟನ್ನು ಪರಿಗಣಿಸಿದರೂ ಕೂಡ, ಲೆಕ್ಕಹಾಕಲಾದ ಹೆಚ್ಚುವರಿ ವೆಚ್ಚವು ಸುಮಾರು ₹ 700 ಕೋಟಿ ಆಗುತ್ತದೆ.

ಉಪಕರಣಗಳು/ಸಂಸ್ಕರಣಾ ಸಮಸ್ಯೆಗಳು, ಒದ್ದೆ ಕಲ್ಲಿದ್ದಲು, ನಿಕೃಷ್ಟ ಗುಣಮಟ್ಟದ ಕಲ್ಲಿದ್ದಲು, ಗ್ರಿಡ್ ಅಡಚಣೆಗಳ ಕಾರಣ ವಿದ್ಯುತ್ ಮಾರ್ಗದಲ್ಲಿನ ನಷ್ಟಗಳು, ಬಾಯ್ಲರು ಕೊಳವೆ ಸೋರಿಕೆ, ಘಟಕಗಳಲ್ಲಿ ಗಮನಿಸಲಾದ ಅಂತರ್ಗತ ನ್ಯೂನತೆಗಳು, ಘಟಕಗಳನ್ನು ಕಾರ್ಯಾರಂಭಗೊಳಿಸುವಲ್ಲಿನ ವಿಳಂಬ, ಇತ್ಯಾದಿ ವಿದ್ಯುತ್ ಉತ್ಪಾದನಾ ವ್ಯವಸ್ಥೆಯಲ್ಲಿನ ನಿರ್ಬಂಧ/ಇತಿಮಿತಿಗಳ ಕಾರಣಗಳು ಮತ್ತು ವಿದ್ಯುತ್ ಹೊರೆ ರವಾನೆ ಕೇಂದ್ರವು ನೀಡಿದ ಹಿಂತೆಗೆತ ಸೂಚನೆಗಳು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಆಗುತ್ತಿದ್ದ ವಿದ್ಯುತ್ ಉತ್ಪಾದನೆಯಲ್ಲಿನ ನಷ್ಟಕ್ಕೆ ಕಾರಣ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014).

ಉತ್ಪಾದನಾ ಸ್ಥಾವರಗಳು ಎಲ್ಲಾ ಅಂಶಗಳನ್ನೂ ಹಾಗೂ ಸರ್ಕಾರವು ತಿಳಿಸಿದ ಕಾರಣಗಳನ್ನು ಗಣನೆಗೆ ತೆಗೆದುಕೊಂಡನಂತರ ತಮ್ಮ ಸಾಮರ್ಥ್ಯವನ್ನು ಘೋಷಿಸಿಕೊಂಡಿದ್ದವು ಹಾಗೂ ಅದನ್ನು ಸಂಪೂರ್ಣವಾಗಿ ಬಳಸಿಕೊಂಡಿರಲಿಲ್ಲ ಎಂಬ ವಾಸ್ತವಾಂಶದ ಕಾರಣ ಉತ್ತರವು ಒಪ್ಪುವಂತಿಲ್ಲ.

**3.10.3.1.** ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಎಸ್ಕಾಂಗಳಿಗೆ ಪರವಾನಿಗೆಗಳ ಷರತ್ತು) ನಿಯಮಗಳು 2004ರ ಪ್ರಕಾರ, ಪರವಾನಿಗೆದಾರರು ವಾರ್ಷಿಕ ಆಧಾರದ ಮೇರೆ ವಿದ್ಯುತ್ ಹೊರೆ ಪೂರ್ವಾನುಮಾನ ಅಂದಾಜನ್ನು ತಯಾರಿಸತಕ್ಕದ್ದು:

ನಾವು ಗಮನಿಸಿದ್ದೇನೆಂದರೆ

[90] ರಾಯಚೂರು ಉಷ್ಣ ವಿದ್ಯುತ್ ಉತ್ಪಾದನಾ ಸ್ಥಾವರದ ಘಟಕ 8ಕ್ಕೆ ಸಂಬಂಧಿಸಿದಂತೆ ಪಿಎಎಫ್ ಬಹಳ ಕಡಿಮೆ ಪ್ರಮಾಣದಲ್ಲಿದ್ದುದರಿಂದ ಲಭ್ಯವಿದ್ದ ವಿದ್ಯುತ್ತನ್ನು ಪರಿಗಣಿಸಿರಲಿಲ್ಲ .

- ಎಸ್ಕಾಂಗಳು ಯಾವುದೇ ವರ್ಷಗಳಲ್ಲಿಯೂ ವಾರ್ಷಿಕ ಪೂರ್ವಾನುಮಾನ ಅಂದಾಜನ್ನು ತಯಾರಿಸಿರಲಿಲ್ಲ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಪ್ರತೀ 10 ವರ್ಷಗಳಿಗೆ ಪ್ರಸರಣ ಮಾರ್ಗ ವಿದ್ಯುತ್ ಜಾಲಕ್ಕಾಗಿ ಪೂರ್ವಭಾವಿ ಯೋಜನೆಯನ್ನು ತಯಾರಿಸುವ ಸಲುವಾಗಿ ವಾರ್ಷಿಕ ವಿದ್ಯುತ್–ಹೊರೆ ಪೂರ್ವಾನುಮಾನವನ್ನು ಕೆಇಆರ್‌ಸಿ ನಿಯಮಗಳ ಪ್ರಕಾರ ನಿಯತಕಾಲಿಕವಾಗಿ ತಯಾರಿಸಲಾಗಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಮುಂದುವರೆದು, ಕೇಂದ್ರ ವಿದ್ಯುತ್ ಪ್ರಾಧಿಕಾರವು ಕೂಡ ವಾರ್ಷಿಕ ವಿದ್ಯುತ್–ಹೊರೆ ಪೂರ್ವಾನುಮಾನವನ್ನು ನಡೆಸಿತ್ತು. ಕಂಪನಿಯ ಪೂರ್ವಾನುಮಾನವು ಪ್ರಸರಣ ಮಾರ್ಗಗಳ ನಿರ್ಮಾಣಕ್ಕಾಗಿ ಆಗಿರುವುದಾದಲ್ಲಿ, ಕೇಂದ್ರ ವಿದ್ಯುತ್ ಪ್ರಾಧಿಕಾರದ ಪೂರ್ವಾನುಮಾನವು ಒಟ್ಟಾರೆ ದೇಶಕ್ಕಾಗಿ ಆಗಿರುವುದರಿಂದ ಉತ್ತರವು ಒಪ್ಪುವಂತಿಲ್ಲ. ಬೇಡಿಕೆ ಸರಬರಾಜುಗಳ ನಡುವಿನ ಅಂತರವನ್ನು ನಿರ್ಧಾರಣೆ ಮಾಡುವುದಕ್ಕಾಗಿ ಎಸ್ಕಾಂಗಳು ವಾರ್ಷಿಕ ವಿದ್ಯುತ್ ಹೊರೆ ಪೂರ್ವಾನುಮಾನವನ್ನು ಮಾಡಬೇಕು, ಅದು ಕೊರತೆಗಳನ್ನು ಕಡಿಮೆಗೊಳಿಸುವುದಕ್ಕಾಗಿ ವಿದ್ಯುತ್ತನ್ನು ಖರೀದಿಸಲು ಪೂರ್ವಭಾವಿ ಯೋಜನೆಯನ್ನು ತಯಾರಿಸಲು ಅನುಕೂಲ ಕಲ್ಪಿಸುತ್ತದೆ. ಕೆಇಆರ್‌ಸಿ ನಿಯಮಗಳು ಉದ್ದೇಶಿಸಿದ್ದಂತೆ ಎಸ್ಕಾಂಗಳು ತಮ್ಮ ಸರಬರಾಜು ಪ್ರದೇಶದಲ್ಲಿನ ಬೇಡಿಕೆಯನ್ನು ವಿಶ್ಲೇಷಿಸುವುದಕ್ಕಾಗಿ ವಿದ್ಯುತ್ ಹೊರೆಪೂರ್ವಾನುಮಾನವನ್ನು ತಯಾರಿಸಿರಲಿಲ್ಲ.

- ಪ್ರಸಕ್ತ ಇರುವ ರಾಜ್ಯದ ಉತ್ಪಾದನಾ ಸ್ಥಾವರಗಳು, ಕೇಂದ್ರ ಉತ್ಪಾದನಾ ಸ್ಥಾವರಗಳು ಹಾಗೂ ಇತರೆ ದೀರ್ಘಾವಧಿ ಪಿಪಿಎಗಳು ಹಾಗೂ ಕಳೆದ ಮೂರು ವರ್ಷಗಳಲ್ಲಿನ ಹೈಟೆನ್ಷನ್ ಬೆಳವಣಿಗೆಯ ಆಧಾರದ ಮೇರೆಗೆ ಕೈಗಾರಿಕಾ ಬಳಕೆದಾರರ ಹೈಟೆನ್ಷನ್‌ಗಾಗಿ ವಿದ್ಯುತ್ ಅಗತ್ಯತೆ, ಇವುಗಳನ್ನು ಊಹಿಸಿಕೊಂಡಲ್ಲಿ, ಮಾರ್ಚ್ 2012 ಹಾಗೂ ಜನವರಿಯಿಂದ ಮಾರ್ಚ್ 2013ವರೆಗೆ ಹೊರತುಪಡಿಸಿ ಯಾವುದೇ ತಿಂಗಳಿನಲ್ಲಿಯೂ ವಿದ್ಯುತ್ತಿನ ಕೊರತೆಯಿರಲಿಲ್ಲ ಹಾಗೂ ಜೂನ್ 2011ರಿಂದ ಮುಂದಕ್ಕೆ 24 ಗಂಟೆಯೂ ಯಾವುದೇ ವಿದ್ಯುತ್ತನ್ನು ಖರೀದಿಸುವ ಅಗತ್ಯತೆ ಇರಲಿಲ್ಲ ಎಂಬುದಾಗಿ ಜೆಸ್ಕಾಂ ತಿಳಿಸಿತು (ಮಾರ್ಚ್ 2011). 2013–14 ಹಣಕಾಸಿನ ವರ್ಷದ ಅಂತ್ಯದವರೆಗೂ ಅದನ್ನು ಯಾವುದೇ ಅಲ್ಪಾವಧಿ ಅಥವಾ ಮಧ್ಯಮಾವಧಿ 24 ಗಂಟೆಗಳ ಖರೀದಿಗಳಲ್ಲಿ ಸೇರಿಸುವ ಅಗತ್ಯವಿರುವುದಿಲ್ಲ ಎಂಬುದಾಗಿಯೂ ಜೆಸ್ಕಾಂ ಕೋರಿತು.

ಜೆಸ್ಕಾಂ 2011–12 ಹಾಗೂ 2012–13ರಲ್ಲಿ ಇತರೆ ಎಸ್ಕಾಂಗಳಿಂದ ವಿದ್ಯುತ್ತನ್ನು ಮಿತಿಮೀರಿ ಹೊರಸೆಳೆದಿರುವುದರಿಂದ ಅದರ ಅಭಿಪ್ರಾಯವು ಸರಿಯಾಗಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014).

ಬೇಡಿಕೆ ಸರಬರಾಜುಗಳ ನಡುವಿನ ಅಂತರದ ವಿಶ್ಲೇಷಣೆಯನ್ನು ಜೆಸ್ಕಾಂ ಮಾಡಿರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಎಸ್ಕಾಂಗಳು ಗುತ್ತಿಗೆ ಸಾಮರ್ಥ್ಯವನ್ನು ಹೊಂದಿರಲಿಲ್ಲ ಹಾಗೂ ರಾಜ್ಯ ವಿದ್ಯುತ್ ಹೊರೆ ರವಾನೆ ಕೇಂದ್ರದ (ಎಸ್‌ಎಲ್‌ಡಿಸಿ) ಜೊತೆ ವಿದ್ಯುತ್ತಿನ ವೇಳಾಪಟ್ಟಿಯನ್ನು ಹೊಂದಿರಲಿಲ್ಲ. ಎಸ್ಕಾಂಗಳು ವಿದ್ಯುತ್ತನ್ನು ಹೊರಸೆಳೆಯುವುದು ಸರ್ಕಾರದ ಹಂಚಿಕೆಯನ್ನು ಅವಲಂಬಿಸಿತ್ತೇ ಹೊರತು ಅವುಗಳ ಅಗತ್ಯತೆಯ ಪ್ರಕಾರವಾಗಿರಲಿಲ್ಲ. ಆದ್ದರಿಂದ, ವಿದ್ಯುತ್ತಿನ ಮಿತಿಮೀರಿದ ಹೊರಸೆಳೆಯುವಿಕೆ ಹಾಗೂ ಕಡಿಮೆ ಪ್ರಮಾಣದಲ್ಲಿ ಹೊರಸೆಳೆಯುವಿಕೆಯನ್ನು ನಿರ್ಧಾರಣೆ ಮಾಡಲು ಸಾಧ್ಯವಿಲ್ಲ.

**ರಾಜ್ಯ ವಲಯ ವಿದ್ಯುತ್ ಉತ್ಪಾದಕ ಸ್ಥಾವರಗಳಿಂದ ವಿದ್ಯುತ್ತಿನ ಖರೀದಿ**

**3.10.4.** ರಾಜ್ಯ ಉತ್ಪಾದಕ ಸ್ಥಾವರಗಳ ಜೊತೆ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿಕೊಳ್ಳಲಾದ ವಿದ್ಯುತ್ ಖರೀದಿ ಒಡಂಬಡಿಕೆಗಳನ್ನು ಸಮೀಕ್ಷೆ ಮಾಡಲಾಗಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

***ಪಿಪಿಎ ಪ್ರಕಾರ ಒಟ್ಟು ಶಾಖೋತ್ಪಾದಕ ಮೌಲ್ಯವನ್ನು ಅಳವಡಿಸಿಕೊಳ್ಳದಿದ್ದುದು***

**3.10.4.1.** ರಾಯಚೂರು ಉಷ್ಣ ವಿದ್ಯುತ್ ಸ್ಥಾವರದಲ್ಲಿನ 210 ಮೆವ್ಯಾಗಳ 7 ಘಟಕಗಳಿಗೆ ಸಂಬಂಧಿಸಿದಂತೆ, ಪಿಪಿಎ ಕಲಮು 1.1(ಎಎನ್) 'ಒಟ್ಟು ಶಾಖೋತ್ಪಾದಕ ಮೌಲ್ಯ'ವನ್ನು ಪ್ರತಿಯೊಂದು ಬಿಲ್ಲು ಮಾಡುವ ತಿಂಗಳಿಗೂ ವಿದ್ಯುತ್ ದರಗಳನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ

ಪ್ರಾಥಮಿಕ ಇಂಧನಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಬಿಲ್ಲು ಮಾಡುವ ತಿಂಗಳಿಗೆ *ರಾಯಚೂರು ಉಷ್ಣ ವಿದ್ಯುತ್ ಸ್ಥಾವರದಲ್ಲಿ* ಸ್ವೀಕರಿಸಲಾದ ಪ್ರಾಥಮಿಕ ಇಂಧನದ ಒಂದು ಕಿಲೋಗ್ರಾಂನಲ್ಲಿ ಅಡಕವಾಗಿರುವ ತೂಕ ಮಾಡಲ್ಪಟ್ಟ 'ಸರಾಸರಿ ಒಟ್ಟು ಶಾಖೋತ್ಪಾದಕ ಮೌಲ್ಯ' ಎಂಬುದಾಗಿ ವಿವರಿಸಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು, '*ರಾಯಚೂರು ಉಷ್ಣ ವಿದ್ಯುತ್ ಸ್ಥಾವರದಲ್ಲಿ ಸ್ವೀಕರಿಸಲಾದ*' '*ಒಟ್ಟು ಶಾಖೋತ್ಪಾದಕ ಮೌಲ್ಯ*'ದ ಆಧಾರದ ಮೇರೆಗೆ ಎಂಬುದಾಗಿ ನಿರ್ದಿಷ್ಟಪಡಿಸಿದ್ದ ಪಿಪಿಎ ಷರತ್ತುಗಳನ್ನು ಉಲ್ಲಂಘಿಸಿ, 'ಉರಿಸಿದ' ಕಲ್ಲಿದ್ದಲಿನ 'ಒಟ್ಟು ಶಾಖೋತ್ಪಾದಕ ಮೌಲ್ಯ'ದ ಆಧಾರದ ಮೇರೆಗೆ ವಿದ್ಯುತ್ ದರಗಳನ್ನು ಕೋರುತ್ತಿತ್ತು ಎಂಬುದನ್ನು ನಾವು ಗಮನಿಸಿದೆವು. ಇದರಿಂದ ಎಲ್ಲಾ ಎಸ್ಕಾಂಗಳೂ 2009–10ರಿಂದ 2012–13ರ ಅವಧಿಯಲ್ಲಿ ₹ 523.91 ಕೋಟಿ[91]ಯಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸುವಂತಾಯಿತು.

ಪಿಪಿಎನಲ್ಲಿ 'ರಾಯಚೂರು *ಉಷ್ಣ* ವಿದ್ಯುತ್ ಸ್ಥಾವರದಲ್ಲಿ ಸ್ವೀಕರಿಸಲಾದ' ಎಂಬ ಷರತ್ತನ್ನು ನಮೂದಿಸಿರುವ ಬಗ್ಗೆ ಸರ್ಕಾರವು ಯಾವುದೇ ಟೀಕೆಟಿಪ್ಪಣಿಯನ್ನೂ ನೀಡಲಿಲ್ಲ. ಪಿಪಿಎ ಷರತ್ತುಗಳ ಪ್ರಕಾರ ಬಿಲ್ಲುಗಳನ್ನು ಮಾಡದಿದ್ದರಿಂದ ಪರಿಣಮಿಸಿದ ಹೆಚ್ಚುವರಿ ವೆಚ್ಚವನ್ನು ಬಳಕೆದಾರರಿಗೆ ವರ್ಗಾಯಿಸಲಾಯಿತು ಎಂಬ ವಾಸ್ತವಾಂಶವು ಉಳಿಯುತ್ತದೆ.

***ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳಿಗಾಗಿ ಹೆಚ್ಚುವರಿ ಸಾಮರ್ಥ್ಯ ಶುಲ್ಕ ಪಾವತಿ***

**3.10.4.2.** ಕೆಇಆರ್‌ಸಿ (ಸಾಮಾನ್ಯ ದರಪಟ್ಟಿಯ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಗಳು 2009, ಕಲ್ಲಿದ್ದಲು ಆಧಾರಿತ ಉತ್ಪಾದನಾ ಸ್ಥಾವರಗಳಿಗೆ ಪ್ರಮಾಣಕ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚಗಳನ್ನು ಅನುವು ಮಾಡಿತ್ತು. ಮುಂದುವರೆದು, ಏಳು ಘಟಕಗಳಿಗೂ ಹೆಚ್ಚು ಇರುವ ಸ್ಥಾವರಗಳಿಗೆ, ಶೇಕಡಾ 85ರಷ್ಟು ಮಾತ್ರ ಪ್ರಮಾಣಕ ಕಾರ್ಯಾಚರಣೆ ವೆಚ್ಚಗಳನ್ನು ಅನುವು ಮಾಡಿತ್ತು. ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಘಟಕ 8ಕ್ಕೆ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳನ್ನು ಶೇಕಡಾ 100ರ ದರದಲ್ಲಿ ಪಾವತಿಸಲಾಗಿತ್ತು ಎಂಬುದನ್ನು ನಾವು ಗಮನಿಸಿದೆವು, ಇದರಿಂದ 2011–12 ಹಾಗೂ 2012–13 ಸಾಲುಗಳಿಗೆ ₹ 12.21 ಕೋಟಿಯಷ್ಟು ಸಾಮರ್ಥ್ಯ ವೆಚ್ಚಗಳನ್ನು ಹೆಚ್ಚುವರಿಯಾಗಿ ಪಾವತಿಸುವಂತಾಯಿತು.

ರಾಯಚೂರು ಉಷ್ಣ ವಿದ್ಯುತ್ ಸ್ಥಾವರದ ಘಟಕ 8ಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ (ಅಕ್ಟೋಬರ್ 2013) ದರಪಟ್ಟಿ ಅರ್ಜಿಯು ಕೆಇಆರ್‌ಸಿಯಲ್ಲಿ ಇನ್ನೂ ಬಾಕಿ ಇದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಅರ್ಜಿಯನ್ನು ದರಪಟ್ಟಿಯನ್ನು ನಿಗದಿಗೊಳಿಸುವುದಕ್ಕಾಗಿ ಮಾತ್ರ ಸಲ್ಲಿಸಿರುವುದರಿಂದ ಹಾಗೂ ರಾಯಚೂರು ಉಷ್ಣ ವಿದ್ಯುತ್ ಸ್ಥಾವರದ ಘಟಕ 8 ರಾಯಚೂರು ಉಷ್ಣ ವಿದ್ಯುತ್ ಉತ್ಪಾದನಾ ಸ್ಥಾವರದ ಒಂದು ಹೆಚ್ಚುವರಿ ಘಟಕವಾಗಿರುವುದರಿಂದ ಹಾಗೂ ದರಪಟ್ಟಿ ನಿಯಂತ್ರಣಗಳು ಶೇಕಡಾ 85ರಷ್ಟು ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳನ್ನು ಮಾತ್ರ ಪಾವತಿಸಲು ಅನುವು ಮಾಡಿರುವುದರಿಂದ ಉತ್ತರವು ಒಪ್ಪುವಂತಿಲ್ಲ.

***ಸ್ಥಾವರ ಲಭ್ಯತೆ ಅಂಶವನ್ನು ಪರಿಗಣಿಸದೆಯೇ ಸಾಮರ್ಥ್ಯ ವೆಚ್ಚಗಳು***

**3.10.4.3.** ಕೆಇಆರ್‌ಸಿ ನಿಯಮಗಳು 2009ರ ನಿಯಮ 22(2)(ಎ) ಪ್ರಕಾರ, ಒಂದು ಹಣಕಾಸು ವರ್ಷದಲ್ಲಿ ಸಾಧಿಸಲಾದ ಸ್ಥಾವರ ಲಭ್ಯತೆ ಅಂಶವು ಶೇಕಡಾ 70ಕ್ಕಿಂತ ಕಡಿಮೆ ಇದ್ದಲ್ಲಿ, ಆ ವರ್ಷಕ್ಕೆ

[91] ಕಲ್ಲಿದ್ದಲಿನ ಸ್ವೀಕರಿಸಲಾದ ಆಧಾರದ ಮೇರೆಗಿನ ವಾಸ್ತವಿಕ ಮಾಹಿತಿಯ ಅನುಪಸ್ಥಿತಿಯಲ್ಲಿ, ನಾವು, ಡ್ಯುಲಾಂಗ್‌ರ ಸೂತ್ರವನ್ನು ಅನ್ವಯಿಸುವ ಮೂಲಕ ಜಿಸಿವಿಯನ್ನು ಸ್ವೀಕರಿಸಲಾದ ಆಧಾರವನ್ನು ಕಂಡುಕೊಂಡೆವು, ಆ ಸಂದರ್ಭದಲ್ಲಿ, ಶೇಕಡಾ 10ರಷ್ಟು ತೇವದೊಂದಿಗೆ ಹಾಗೂ ಶೇಕಡಾ 25ರಷ್ಟು ಬಾಷ್ಪಶೀಲ ವಸ್ತುವಿನೊಂದಿಗೆ ಮಾದರಿಯ ಬಿಟ್ಯುಮನ್‌ಯುಕ್ತ ಕಲ್ಲಿದ್ದಲಿಗೆ ಒಟ್ಟಾರೆ ಹಾಗೂ ನಿವ್ವಳದ ನಡುವಿನ ವ್ಯತ್ಯಾಸದ ಶಾಖೋತ್ಪಾದಕ ಮೌಲ್ಯವು ಕಿಗ್ರಾಂ ಒಂದಕ್ಕೆ 260 ಕೆಸಿಎಎಲ್ ಎಂಬುದಾಗಿ ಲೆಕ್ಕ ಹಾಕಲಾಯಿತು.

ಪಾವತಿಸಬೇಕಾದ ಒಟ್ಟಾರೆ ಸಾಮರ್ಥ್ಯ ವೆಚ್ಚಗಳನ್ನು ಒಂದು ನಿರ್ದಿಷ್ಟ ಸೂತ್ರದ[92] ಮೂಲಕ ಲೆಕ್ಕಹಾಕಬೇಕು.

ರಾಯಚೂರು ಉಷ್ಣ ವಿದ್ಯುತ್ ಸ್ಥಾವರದ 8ನೇ ಘಟಕವು 2010–11ರಿಂದ 2012–13 ಸಾಲುಗಳಲ್ಲಿ ಸಾಧಿಸಿದ್ದ ಒಂದು ಹಣಕಾಸು ವರ್ಷದಲ್ಲಿನ ಸ್ಥಾವರ ಲಭ್ಯತೆ ಅಂಶವು ಶೇಕಡಾ 70ಕ್ಕಿಂತಲೂ[93] ಕಡಿಮೆ ಇತ್ತು, ಆದರೆ ಸೂತ್ರದಂತೆ ಸಾಮರ್ಥ್ಯ ವೆಚ್ಚವನ್ನು ಸೀಮಿತಗೊಳಿಸುವಲ್ಲಿನ ಎಸ್ಕಾಂಗಳ ವಿಫಲತೆಯು ₹ 153.83 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚವಾಗುವಂತೆ ಮಾಡಿತು. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕೆಇಆರ್‌ಸಿಗೆ ಅಕ್ಟೋಬರ್ 2013ರಲ್ಲಿ ದರಪಟ್ಟಿ ಅರ್ಜಿಯನ್ನು ಸಲ್ಲಿಸಿತು ಹಾಗೂ ಆ ವಿಷಯವು ಬಾಕಿ ಇದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಸಲ್ಲಿಸಲಾಗಿರುವ ಅರ್ಜಿಯು ಕೇವಲ ದರಪಟ್ಟಿ ನಿಗದಿಗಾಗಿ ಆಗಿರುವುದರಿಂದ ಹಾಗೂ ಕೋರಿಕೆಯು ಶೇಕಡಾ 70ಕ್ಕಿಂತ ಕಡಿಮೆ ಇರುವ ಒಂದು ಹಣಕಾಸು ವರ್ಷದಲ್ಲಿನ ಸ್ಥಾವರ ಲಭ್ಯತೆ ಅಂಶಕ್ಕೆ ಲಭ್ಯವಿರುವ ಪಾವತಿಯ ಪ್ರಕಾರ ಇರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

***ಆದಾಯ ತೆರಿಗೆಯ ಅಧಿಕ ಹಕ್ಕೊತ್ತಾಯ ಕೋರಿಕೆ***

**3.10.4.4.** ಪಿಪಿಎಗಳ ಪ್ರಕಾರ, ಕನಿಷ್ಟ ಬದಲಿ ತೆರಿಗೆ/ಆದಾಯ ತೆರಿಗೆಯನ್ನು ಒಂದು ಸಮತೂಗುವ ಪ್ರಕ್ರಿಯೆ ಎಂಬುದಾಗಿ ಪರಿಗಣಿಸಬೇಕು ಹಾಗೂ ಅದನ್ನು ಆರ್‌ಒಇ ಅಥವಾ ವಾಸ್ತವಿಕಗಳ ಮೇಲಿನ ತೆರಿಗೆಯ ಮೊತ್ತಕ್ಕೆ ಸೀಮಿತಗೊಳಿಸತಕ್ಕದ್ದು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವಾಸ್ತವಿಕ ಆದಾಯ ತೆರಿಗೆಯು 2009–10 ಹಾಗೂ 2012–13 ಅವಧಿಗೆ ₹ 327.10 ಕೋಟಿ ಆಗಿದ್ದಿತು, ಆರ್‌ಒಇ ಮೇಲಿನ ತೆರಿಗೆಯು ಕೇವಲ ₹ 154.27 ಕೋಟಿ ಆಗಿತ್ತು ಎಂಬುದನ್ನು ನಾವು ಗಮನಿಸಿದೆವು. ಆದಾಗ್ಯೂ, ಎಸ್ಕಾಂಗಳು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ₹ 462.77 ಕೋಟಿ ಮೊತ್ತವನ್ನು ಪಾವತಿಸಿದ್ದವು, ಇದರಿಂದ ₹ 308.50 ಕೋಟಿಯಷ್ಟು ಹೆಚ್ಚುವರಿ ಪಾವತಿ ಮಾಡುವಂತಾಯಿತು.

ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು ಹಾಗೂ ಇಂಧನ ವೆಚ್ಚಗಳ ಕಡೆಗೆ ಭರಿಸಲಾದ ವಾಸ್ತವಿಕ ವೆಚ್ಚಕ್ಕೆ ಪ್ರತಿಯಾಗಿ ಪಿಪಿಎಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಪರಿಮಾಣಗಳಿಗಿಂತ ₹ 1,541.89 ಕೋಟಿ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಸಂಪೂರ್ಣ ವಾಸ್ತವಿಕ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು ಹಾಗೂ ಇಂಧನ ವೆಚ್ಚಗಳನ್ನು ದರಪಟ್ಟಿ ವ್ಯವಸ್ಥೆಯ ಅಡಿಯಲ್ಲಿ ವಸೂಲಾತಿ ಮಾಡಿದ್ದಲ್ಲಿ, ವರಮಾನವು ಹೆಚ್ಚಳಗೊಳ್ಳುತ್ತಿತ್ತು ಹಾಗೂ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಸಾಂಸ್ಥಿಕ ತೆರಿಗೆಯನ್ನು ಪಾವತಿಸಬೇಕಾಗುತ್ತಿತ್ತು ಎಂಬುದಾಗಿಯೂ ತಿಳಿಸಿತು.

ಪಿಪಿಎನಲ್ಲಿನ ಪರಿಮಾಣಗಳನ್ನು ಮೀರಿದಂತಹ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು ಹಾಗೂ ಇಂಧನ ವೆಚ್ಚಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭರಿಸಬೇಕಿತ್ತಾದ್ದರಿಂದ ಹಾಗೂ ಅದನ್ನು ಬಳಕೆದಾರರಿಗೆ ವರ್ಗಾವಣೆ ಮಾಡುವಂತಿರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಅಲ್ಲದೇ, ಪಿಪಿಎನಲ್ಲಿ ಆದಾಯ ತೆರಿಗೆಯು ಕೇವಲ ಒಂದು ಸಮತೂಗುವ ಪ್ರಕ್ರಿಯೆಯಾಗಿದೆಯಾದ್ದರಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭರಿಸಿದ ಅನ್ವಯಗೊಳ್ಳುವ ತೆರಿಗೆಯನ್ನು ಮಾತ್ರ ಒಪ್ಪಿಕೊಳ್ಳತಕ್ಕದ್ದು.

---

[92] ಈ ಕೆಳಗಿನವುಗಳು ಆಗಿದ್ದಲ್ಲಿ: ಎಎಫ್‌ಸಿ x (0.5 + 35/ಎನ್‌ಎಪಿಎಎಫ್) x (ಪಿಎಎಫ್‌ವೈ/70) (ರೂಪಾಯಿಗಳಲ್ಲಿ),
– ಎಎಫ್‌ಸಿ ಪ್ರಸಕ್ತ ಸಾಲಿಗೆ ನಿರ್ದಿಷ್ಟಪಡಿಸಲಾದ ವಾರ್ಷಿಕ ನಿಗದಿತ ಮೌಲ್ಯ ರೂಪಾಯಿಗಳಲ್ಲಿ.
– ಎನ್‌ಎಪಿಎಎಫ್ ಪ್ರಮಾಣಕ ವಾರ್ಷಿಕ ಸ್ಥಾವರ ಲಭ್ಯತೆ ಅಂಶ– ಶೇಕಡಾವಾರಿನಂತೆ.
–ಪಿಎಎಫ್‌ವೈ ಪ್ರಸಕ್ತ ಸಾಲಿನಲ್ಲಿ ಸಾಧಿಸಲಾದ ಸ್ಥಾವರ ಲಭ್ಯತೆ ಅಂಶ – ಶೇಕಡಾವಾರಿನಂತೆ.

[93] ಶೇಕಡಾ 37.6 , 42.91 ಮತ್ತು 28.41.

**ಇತರೆ ಮೂಲಗಳಿಂದ ವಿದ್ಯುತ್ ಖರೀದಿ**

**3.10.5.** ಮಾರ್ಚ್ 2013ಕ್ಕೆ ಅಂತ್ಯಗೊಂಡ ಕಳೆದ ಐದು ವರ್ಷಗಳಲ್ಲಿ ವಿವಿಧ ಇತರೆ ಮೂಲಗಳಿಂದ ವಿದ್ಯುತ್ ಖರೀದಿಯ ವಿವರಗಳನ್ನು **ಅನುಬಂಧ–9**ರಲ್ಲಿ ನೀಡಲಾಗಿದೆ.

ಇತರೆ ಮೂಲಗಳಿಂದ ವಿದ್ಯುತ್ತನ್ನು ಖರೀದಿಸಲಾದ ದರಗಳು 2008–09ರಲ್ಲಿದ್ದಂತಹ ಕೆಡಬ್ಲ್ಯೂಎಚ್ ಒಂದಕ್ಕೆ ₹ 6.76ರಿಂದ 2012–13ರಲ್ಲಿ ಕೆಡಬ್ಲ್ಯೂಎಚ್ ಒಂದಕ್ಕೆ ₹ 4.38ಕ್ಕೆ ಇಳಿಮುಖಗೊಂಡಿತು. 2011–12ರಿಂದ ಆಗಿದ್ದ ಇಳಿಮುಖವು ಭಾಗಶ:ವಾಗಿ ವಿದ್ಯುತ್ತನ್ನು ಮಧ್ಯಮ ಅವಧಿ ಆಧಾರದ ಮೇಲೆ ಖರೀದಿಸಿದ್ದ ಕಾರಣದಿಂದ ಆಗಿತ್ತು. ಆದಾಗ್ಯೂ, ಎಸ್ಕಾಂಗಳು ಹಾಗೂ ಸರಬರಾಜುದಾರರು/ವರ್ತಕರ ನಡುವೆ ಪಿಪಿಎಗಳನ್ನು ಮಾಡಿಕೊಂಡಿರಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ಸೆಪ್ಟಂಬರ್ 2011ರವರೆಗೂ ಖರೀದಿಗಳನ್ನು ಕೋರಿಕೆ ಪತ್ರಗಳ ಆಧಾರದ ಮೇರೆಗೆ ಮಾತ್ರ ಮಾಡಲಾಗುತ್ತಿತ್ತು. ಮಧ್ಯಮ ಹಾಗೂ ಅಲ್ಪಾವಧಿ ಖರೀದಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ:

***ಮಧ್ಯಮ ಅವಧಿ ವಿದ್ಯುತ್ ಖರೀದಿ***

**3.10.6.** ಏಳು ವರ್ಷಗಳವರೆಗಿನ ಅವಧಿಗೆ ಆದರೆ ಒಂದು ವರ್ಷವನ್ನು ಮೀರಿದಂತೆ ಮಾಡುವ ವಿದ್ಯುತ್ ಖರೀದಿಯನ್ನು ಮಧ್ಯಮ ಅವಧಿ ಖರೀದಿ ಎಂಬುದಾಗಿ ಪರಿಗಣಿಸಲ್ಪಡುತ್ತದೆ. ಎಸ್ಕಾಂಗಳು ಪಿಪಿಎಗಳನ್ನು ಮಾಡಿಕೊಳ್ಳುವ ಮೂಲಕ 2008–09ರಿಂದ 2013–14ರ (ಡಿಸೆಂಬರ್ 2013) ಅವಧಿಯಲ್ಲಿ ಮೂರು ಸಂದರ್ಭಗಳಲ್ಲಿ 16,140.14 ಮಿಯೂಗಳಷ್ಟು ವಿದ್ಯುತ್ತನ್ನು ಖರೀದಿಸಿದ್ದವು.

ವಿದ್ಯುತ್ ಮಂತ್ರಾಲಯವು ಬಿಡ್ಡಿಂಗ್ ಪ್ರಕ್ರಿಯೆಯ ಪ್ರಕರಣ Iಕ್ಕೆ ಶೂನ್ಯ ದಿನಾಂಕದಿಂದ 120 ದಿನಗಳನ್ನು ನಿರ್ದಿಷ್ಟಪಡಿಸಿದೆ. ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗದ ನಿಯಮ 19(2)ರ ಪ್ರಕಾರ, ಮಧ್ಯಮ ಅವಧಿ ಮುಕ್ತ ಪ್ರವೇಶಕ್ಕೆ ಅರ್ಜಿಯು, ಮಧ್ಯಮ–ಅವಧಿ ಮುಕ್ತ ಪ್ರವೇಶಕ್ಕೆ ಅರ್ಜಿಯನ್ನು ಸಲ್ಲಿಸಲಾದ ತಿಂಗಳಿನ ಕಡೆಯ ದಿನದಿಂದ ಪ್ರಾರಂಭದ ದಿನಾಂಕವು 5 ತಿಂಗಳುಗಳಿಗೂ ಮುಂಚಿತವಾಗಿರಬಾರದು ಹಾಗೂ ಒಂದು ವರ್ಷವನ್ನು ಮೀರಿರಬಾರದು.

ಬೆಸ್ಕಾಂನ ಅಗತ್ಯಕ್ಕಾಗಿ ಪಿಸಿಕೆಎಲ್ 1 ಸೆಪ್ಟಂಬರ್ 2011ರಿಂದ 15 ಜೂನ್ 2013ರ ನಡುವಿನ ಅವಧಿಗೆ 500 ಮೆವ್ಯಾಗಳಷ್ಟು ಆರ್‌ಟಿಸಿ ವಿದ್ಯುತ್ತನ್ನು ಖರೀದಿಸಲು ನಿಶ್ಚಯಿಸಿತು (ಜೂನ್ 2011). ಟೆಂಡರನ್ನು ಜುಲೈ 2011ರಲ್ಲಿ ನೀಡಲಾಗಿತ್ತು. ಕೋರಿಕೆಯ ಪತ್ರಗಳನ್ನು ನಾಲ್ಕು ಸಂಸ್ಥೆಗಳಿಗೆ ಯೂನಿಟ್ಟು ಒಂದಕ್ಕೆ ₹ 4.10 ರಿಂದ ₹ 4.39 ದರಗಳಲ್ಲಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಎಲ್ಲೆಯಲ್ಲಿ) ನೀಡಲಾಯಿತು (ಆಗಸ್ಟ್/ಸೆಪ್ಟಂಬರ್ 2011).

ಟೆಂಡರು ಸವಾಲುದಾರರು ಸಂಪೂರ್ಣ ಪರಿಮಾಣಕ್ಕೆ ಅಗತ್ಯ ಕಾರಿಡಾರನ್ನು ಪಡೆಯಲಾಗಲಿಲ್ಲ. ಸರಬರಾಜು ಮಾಡಬೇಕಿದ್ದ 3,816 ಮಿಯೂಗಳಿಗೆ ಪ್ರತಿಯಾಗಿ, ದಕ್ಷಿಣ ಪ್ರಾಂತದ ಹೊರಗೆ ಸರಬರಾಜುದಾರರು ಕೇವಲ 2,441 ಮಿಯೂಗಳನ್ನು ಮಾತ್ರ ಸರಬರಾಜು ಮಾಡಿದ್ದರು.

ಕಾರಿಡಾರನ್ನು ಪಡೆಯುವಲ್ಲಿನ ಅಡಚಣೆಗಳು ವಿದ್ಯುತ್ ಸರಬರಾಜಿನ ಕೊರತೆಗೆ ಪ್ರಮುಖ ಕಾರಣವಾಗಿದ್ದಿತು ಎಂಬುದನ್ನು ನಾವು ಗಮನಿಸಿದೆವು. ಟೆಂಡರು ಪ್ರಕ್ರಿಯೆಯನ್ನು ಪ್ರಾರಂಭಿಸುವಲ್ಲಿನ ವಿಳಂಬದಿಂದ ಇದು ಸಂಭವಿಸಿತ್ತು. ಮಧ್ಯಮ ಅವಧಿ ಮುಕ್ತ ಪ್ರವೇಶವನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇರೆಗೆ ಸಂಸ್ಕರಿಸಲಾಗುವುದರಿಂದ, ಸೆಪ್ಟಂಬರ್ 2011ರಲ್ಲಿ ಪ್ರಾರಂಭಗೊಳ್ಳಬೇಕಿದ್ದ ಸರಬರಾಜುಗಳಿಗೆ, ಸವಾಲುದಾರರು ಮಾರ್ಚ್ 2011ರ ವೇಳೆಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ಕಾರಿಡಾರು, ಅಂದರೆ ಪ್ರಸರಣ ಮಾರ್ಗಗಳಿಗೆ ಅರ್ಜಿಯನ್ನು ಸಲ್ಲಿಸಲು ಅನುಕೂಲ ಕಲ್ಪಿಸುವ ರೀತಿಯಲ್ಲಿ ಟೆಂಡರು ಪ್ರಕ್ರಿಯೆಯು ಫೆಬ್ರವರಿ 2011ರ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದಾಗ್ಯೂ, ಟೆಂಡರು ಪ್ರಕ್ರಿಯೆಯು ಮೇ 2011ರಲ್ಲಿಯಷ್ಟೇ ಪ್ರಾರಂಭಗೊಂಡಿತ್ತು.

ಪಿಸಿಕೆಎಲ್ 700 ಮೆವ್ಯಾ ವಿದ್ಯುತ್ತಿಗಾಗಿ ಜೂನ್ 2011ರಿಂದ ಜೂನ್ 2014ರ ಅವಧಿಯ ಮೂರು ವರ್ಷಗಳಿಗೆ ಸವಾಲು ಪ್ರಕ್ರಿಯೆಯನ್ನು ಡಿಸೆಂಬರ್ 2010ರಲ್ಲಿ ಪ್ರಾರಂಭಿಸಿತು ಎಂಬುದಾಗಿ ಸರ್ಕಾರವು

ಉತ್ತರಿಸಿತು (ನವೆಂಬರ್ 2014). ಪಡೆಯಲಾದ ದರಗಳು ಗಮನಾರ್ಹವಾಗಿ ಅಧಿಕವಾಗಿದ್ದರಿಂದ (ಯೂನಿಟ್ಟು ಒಂದಕ್ಕೆ ₹ 4.893 ರಿಂದ ₹ 5.884 ವರೆಗೆ) ಅಧಿಸೂಚನೆಯನ್ನು ರದ್ದುಗೊಳಿಸಲು ನಿರ್ಣಯವನ್ನು ಕೈಗೊಳ್ಳಲಾಯಿತು. ತದನಂತರ, ಮೇ 2011ರಲ್ಲಿ ಗೌರವಾನ್ವಿತ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, 500 ಮೆವ್ಯಾ ವಿದ್ಯುತ್ತನ್ನು ಆಗಸ್ಟ್ 2011ರಿಂದ ಮೇ 2013[94] ರವರೆಗಿನ ಅವಧಿಯಲ್ಲಿ ಖರೀದಿಸಲು ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಯಶಸ್ವಿಯಾಗಿದ್ದ ಸವಾಲುದಾರರಿಗೆ ಕಾರಿಡಾರಿಗೆ ಅರ್ಜಿಯನ್ನು ಸಲ್ಲಿಸಲು ಸಮರ್ಪಕ ಸಮಯವು ಲಭ್ಯವಿರಲಿಲ್ಲ (ಐದು ತಿಂಗಳುಗಳ ಸಮಯದ ಅಗತ್ಯತೆಯನ್ನು ಅವರು ಹೊಂದಿದ್ದರು) ಎಂಬುದನ್ನು ನಾವು ಗಮನಿಸಿದೆವು ಹಾಗೂ ಇದು ವಿದ್ಯುತ್ತನ್ನು ಸರಬರಾಜು ಮಾಡದಿರಲು ಕಾರಣವಾಯಿತು.

***ಅಲ್ಪಾವಧಿಯ ಅಡಿಯಲ್ಲಿ ವಿದ್ಯುತ್ ಖರೀದಿ***

**3.10.7** ಪಿಸಿಕೆಎಲ್ ಫೆಬ್ರವರಿ ಮತ್ತು ಮಾರ್ಚ್ 2010ರ ಅವಧಿಗೆ 500 ಮೆವ್ಯಾ ವಿದ್ಯುತ್ತಿನ ಅಗತ್ಯತೆಗಾಗಿ ಟೆಂಡರನ್ನು ಆಹ್ವಾನಿಸಿತು (ಜನವರಿ 2010). ನಾಲ್ಕು ಸವಾಲುಗಳನ್ನು ಸ್ವೀಕರಿಸಲಾಯಿತು. ಜೆಎಸ್‌ಡಬ್ಲ್ಯೂ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್, ಇವರಿಗೆ ಫೆಬ್ರವರಿ 2010 ಹಾಗೂ ಮಾರ್ಚ್ 2010ಕ್ಕೆ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 4.50 ದರದಲ್ಲಿ 200 ಮೆವ್ಯಾ ವಿದ್ಯುತ್ತಿಗಾಗಿ ಆದೇಶಗಳನ್ನು ನೀಡಲಾಯಿತಲ್ಲದೆ ಟಾಟಾ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್, ಇವರಿಗೆ ಫೆಬ್ರವರಿ 2010ಕ್ಕೆ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 4.48 ಹಾಗೂ ₹ 4.50 ದರದಲ್ಲಿ 95.3 ಮೆವ್ಯಾ ವಿದ್ಯುತ್ತು ಸರಬರಾಜು ಮಾಡಲು ಆದೇಶಗಳನ್ನು ನೀಡಲಾಗಿತ್ತು. ಟಾಟಾ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್ ಮಾರ್ಚ್ 2010ಕ್ಕೆ ₹ 5.422 ದರವನ್ನು ಘೋಷಿಸಿದ್ದರಿಂದ, ಮಾರ್ಚ್ 2010ಕ್ಕೆ ಅದೇ ದರದಲ್ಲಿಯೇ ವಿದ್ಯುತ್ತನ್ನು ಸರಬರಾಜು ಮಾಡುವಂತೆ ಸಂಸ್ಥೆಯ ಜೊತೆ ದರ ಸಂಧಾನ ಮಾಡಲು ನಿಶ್ಚಯಿಸಲಾಯಿತು. ಇತರ ಎರಡು ಸರಬರಾಜುದಾರರು ಘೋಷಿಸಲಾಗಿದ್ದ ದರಗಳನ್ನು (ಕೆಡಬ್ಲ್ಯೂಎಚ್ ಒಂದಕ್ಕೆ ₹ 5.161ರಿಂದ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 6.445) ಕಡಿಮೆ ಮಾಡಲು ಒಪ್ಪಲಿಲ್ಲ ಮತ್ತು ಆದ್ದರಿಂದ ಅವರುಗಳಿಗೆ ಆದೇಶಗಳನ್ನು ನೀಡಲಿಲ್ಲ. ಜೆಎಸ್‌ಡಬ್ಲ್ಯೂ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್ ವಿದ್ಯುತ್ತಿನ ಪರಿಮಾಣವನ್ನು ಸರಬರಾಜು ಮಾಡಿತು, ಆದರೆ ಟಾಟಾ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್‌ಗೆ ಸಂಬಂಧಿಸಿದಂತೆ, ಪರಿಹಾರದ ಷರತ್ತನ್ನು ತೆಗೆದುಹಾಕುವ ಬಗ್ಗೆ ಷರತ್ತುಗಳಿಗೆ ತಿದ್ದುಪಡಿಗಾಗಿ ಅದರ ಕೋರಿಕೆಗೆ ಒಪ್ಪಿರಲಿಲ್ಲವಾದ್ದರಿಂದ, ಅದು ವೇಳಾಪಟ್ಟಿಯ ಪ್ರಕಾರ ವಿದ್ಯುತ್ತನ್ನು ಸರಬರಾಜು ಮಾಡಲಿಲ್ಲ.

ಕೊರತೆಯನ್ನು ಭರಿಸುವ ಉದ್ದೇಶದಿಂದ, ಪಿಸಿಕೆಎಲ್ ಫೆಬ್ರವರಿ ಮತ್ತು ಮಾರ್ಚ್ 2010ರ ಅವಧಿಗೆ ಸರಬರಾಜುಗಳಿಗಾಗಿ ಪುನ: ಟೆಂಡರನ್ನು ಆಹ್ವಾನಿಸಿತು (ಫೆಬ್ರವರಿ 2010). ಇದಕ್ಕೆ ಪ್ರತಿಯಾಗಿ, ಎರಡು ಸವಾಲುಗಳು ಸ್ವೀಕೃತಗೊಂಡವು. ಆದರೆ, ಕೇವಲ ರಿಲಾಯನ್ಸ್ ಎನರ್ಜಿ ಟ್ರೇಡಿಂಗ್ ಲಿಮಿಟೆಡ್‌ಗೆ (ಆರ್‌ಇಟಿಎಲ್) 12.02.2010ರಿಂದ 28.02.2010ರ ಅವಧಿಗೆ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 5.10 ದರದಂತೆ 100 ಮೆವ್ಯಾ ವಿದ್ಯುತ್ತಿನ ಸರಬರಾಜಿಗಾಗಿ ಕೋರಿಕೆಯ ಪತ್ರವನ್ನು ನೀಡಲಾಗಿತ್ತು. ಆರ್‌ಇಟಿಎಲ್, ಇವರ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 5.65 ದರದಲ್ಲಿ (100 ಮೆವ್ಯಾ) ಹಾಗೂ ಪಿಟಿಸಿಐಎಲ್ ಅವರ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 6.56 ದರದಲ್ಲಿ ಮಾರ್ಚ್ 2010ರಲ್ಲಿ ಸರಬರಾಜು ಮಾಡಲು (200 ಮೆವ್ಯಾ) ಬಂದಿದ್ದ ಇತರೆ ಸವಾಲುಗಳು ಜೆಎಸ್‌ಡಬ್ಲ್ಯೂ ಪಿಟಿಸಿಎಲ್, ಇವರು ಘೋಷಿಸಿದ್ದ ದರಗಳಿಗಿಂತ ಅಧಿಕವಾಗಿರುವುದು ಕಂಡುಬಂದಿತು. ದರಸಂಧಾನದ ವೇಳೆಯಲ್ಲಿ, ಸವಾಲುದಾರರು ದರಗಳನ್ನು ಇಳಿಸಲು ಒಪ್ಪಲಿಲ್ಲ.

ಫೆಬ್ರವರಿ ಮತ್ತು ಮಾರ್ಚ್ 2010ರ ರಾಜ್ಯದ ಅಗತ್ಯತೆಯನ್ನು ಫೆಬ್ರವರಿ 2010ರ ಎರಡನೆಯ ಟೆಂಡರಿನ ನಂತರವೂ ಪೂರೈಸಲಾಗಿರಲಿಲ್ಲ. ತತ್ಪರಿಣಾಮವಾಗಿ, ಕಂಪನಿಯು ಫೆಬ್ರವರಿಯ ಉಳಿದ ದಿನಗಳಿಗೆ ಹಾಗೂ ಮಾರ್ಚ್ 2010ರ ಅವಧಿಗೆ ವಿದ್ಯುತ್ ಸರಬರಾಜಿಗಾಗಿ ಅನೇಕ ಸವಾಲುದಾರರನ್ನು ದೂರವಾಣಿಯ ಮೂಲಕ ಸಂಪರ್ಕಿಸಿತು (21.02.2010). ಸ್ವೀಕರಿಸಲಾದ ದರಗಳ ಆಧಾರದ

[94] 1 ಸೆಪ್ಟಂಬರ್ 2011ರಿಂದ 15 ಜೂನ್ 2013ರ ಅವಧಿಗೆ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ಇದನ್ನು ಪರಿಷ್ಕರಿಸಲಾಯಿತು.

ಮೇರೆಗೆ ಇಬ್ಬರು ಸರಬರಾಜುದಾರರಿಗೆ (ಪಿಟಿಸಿಐಎಲ್ ಮತ್ತು ಎನ್‌ಟಿಪಿಸಿ–ವಿವಿಎನ್‌ಎಲ್) ಫೆಬ್ರವರಿ ಮತ್ತು ಮಾರ್ಚ್ 2010ರ ಅವಧಿಗೆ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 5.629ರಿಂದ ಕೆಡಬ್ಲ್ಯೂಹೆಚ್ ಒಂದಕ್ಕೆ ₹ 6.588 ದರದಲ್ಲಿ ವಿದ್ಯುತ್ ಸರಬರಾಜಿಗಾಗಿ ಎಂಟು ಕೋರಿಕೆಯ ಪತ್ರಗಳನ್ನು ನೀಡಲಾಗಿತ್ತು. ಟೆಂಡರು ಷರತ್ತುಗಳನ್ನು ಅನುಸರಿಸಿದ್ದ ಆರ್‌ಇಟಿಎಲ್‌ನ ದರಗಳು ವಿಪರೀತ ಅಧಿಕವಾಗಿರುವ ಕಾರಣವನ್ನು ನೀಡಿ ತಿರಸ್ಕರಿಸಲಾಗಿತ್ತು. ಈ ರೀತಿಯಾಗಿ, ಮಾರ್ಚ್ 2010ರಲ್ಲಿ ತುರ್ತು ಖರೀದಿಯು ಅನಿವಾರ್ಯವಾಯಿತು, ಅದನ್ನು ಆರ್‌ಇಟಿಎಲ್ ನೀಡಿದ್ದ ದರಗಳಿಗಿಂತ ಅಧಿಕ ದರಗಳಲ್ಲಿ ಮಾಡಲಾಗಿತ್ತು. ಮಾರ್ಚ್ 2010ರಲ್ಲಿ ಸರಬರಾಜುದಾರರಿಗೆ ಪಾವತಿಸಲಾದ ಹೆಚ್ಚುವರಿ ವೆಚ್ಚಗಳು ₹ 4.85 ಕೋಟಿ ಆಗಿತ್ತು.

***ಅಂಗೀಕರಿಸಲಾಗದ ಪಾವತಿ***

**3.10.8.** ಎಸ್ಕಾಂಗಳು ಸೆಪ್ಟಂಬರ್ 2010 ಹಾಗೂ ಮಾರ್ಚ್ 2013ರ ನಡುವಿನ ಆವಧಿಯಲ್ಲಿ ವಿದ್ಯುತ್ ಸರಬರಾಜಿಗಾಗಿ, ಜೆಎಸ್‌ಡಬ್ಲ್ಯೂಪಿಟಿಸಿಎಲ್‌ನೊಂದಿಗೆ ಮಧ್ಯಮ ಅವಧಿ ಖರೀದಿ ಅಡಿಯಲ್ಲಿ ಒಂದು ಪಿಪಿಎ ಮಾಡಿಕೊಂಡವು ಹಾಗೂ ಅಲ್ಪಾವಧಿ ಖರೀದಿ ಆಧಾರದ ಮೇರೆಗೆ ಮೂರು ಒಪ್ಪಿಗೆಯ ಪತ್ರಗಳನ್ನು ನೀಡಿದ್ದವು.

ಮಧ್ಯಮ ಅವಧಿ ಖರೀದಿಯ ಅಡಿಯಲ್ಲಿ ಪಿಪಿಎ ಪ್ರಕಾರ ನಿಗದಿತ ವಿದ್ಯುತ್ ಹಾಗೂ ಅಂತರಸಂಪರ್ಕ ಸ್ಥಳದಲ್ಲಿ ಸರಬರಾಜು ಮಾಡಲಾದ ವಾಸ್ತವಿಕ ವಿದ್ಯುತ್ತಿನ ನಡುವೆ ವಿದ್ಯುತ್ತಿನ ಹರಿವಿನಲ್ಲಿನ ವ್ಯತ್ಯಯಕ್ಕೆ ಒಂದು ಅನುವು ಇದ್ದಿತು. ಗ್ರಿಡ್ ಸಂಹಿತೆಯ ಅನುವುಗಳು ಹಾಗೂ ಲಭ್ಯತೆ ಆಧಾರಿತ ದರಪಟ್ಟಿಯ ಪ್ರಕಾರ ಯುಐ ಮೂಲಕ ವ್ಯತ್ಯಯವನ್ನು ಲೆಕ್ಕ ಇಡುವುದನ್ನು ಆ ಷರತ್ತು ನಿರ್ದಿಷ್ಟಪಡಿಸಿದ್ದಿತ್ತು.

ಮತ್ತೊಂದೆಡೆ, ಅಲ್ಪಾವಧಿ ಖರೀದಿಗಳ ಮೇಲಿನ ಒಪ್ಪಿಗೆ ಪತ್ರಗಳು ನಿಗದಿತವಲ್ಲದ ಅಂತರಬದಲಾವಣೆಯ (ಯುಐ) ಮೂಲಕ ವ್ಯತ್ಯಯದ ಲೆಕ್ಕ ಇಡುವುದರ ಬಗ್ಗೆ ಅಂತಹ ಷರತ್ತನ್ನು ಒಳಗೊಂಡಿರುವುದಿಲ್ಲ. ಎಸ್‌ಎಲ್‌ಡಿಸಿಯು ವಿದ್ಯುತ್ತಿನ ಮಿತಿಮೀರಿದ ಹರಿವಿಗೆ ಯೂನಿಟ್ಟು ಒಂದಕ್ಕೆ ₹ 2.85 ನಿಗದಿಪಡಿಸಿತ್ತು.

ಸರಬರಾಜಿನಲ್ಲಿ ಜೆಎಸ್‌ಡಬ್ಲ್ಯೂ ಪಿಟಿಸಿಎಲ್, ಇವರು ಹರಿಸಿದ ವಿದ್ಯುತ್ತಿನ ವ್ಯತ್ಯಯವನ್ನು ಮಧ್ಯಮ ಅವಧಿಯ ಖರೀದಿ ಎಂಬುದಾಗಿ ಪರಿಗಣಿಸಿ, ಯುಐ ಎಂಬುದಾಗಿ ಲೆಕ್ಕ ಇಡಲಾಗಿತ್ತು ಎಂಬುದನ್ನು ನಾವು ಗಮನಿಸಿದೆವು. ಮಧ್ಯಮ ಅವಧಿಯ ಖರೀದಿ ಹಾಗೂ ಅಲ್ಪಾವಧಿ ಖರೀದಿಗಳೆರಡರ ಒಪ್ಪಿಗೆ ಪತ್ರಗಳು ಇದ್ದವಾದ್ದರಿಂದ, ಸಂಪೂರ್ಣ ಸರಬರಾಜನ್ನು ಮಧ್ಯಮ ಅವಧಿಯ ಯುಐ ಎಂಬುದಾಗಿ ಪರಿಗಣಿಸಿದ್ದು ಹಾಗೂ ₹ 14.08 ಕೋಟಿ ಮೊತ್ತವನ್ನು ಪಾವತಿಸಿದ್ದು ಸರಿಯಾಗಿರಲಿಲ್ಲ.

ಗ್ರಿಡ್ ಸಂಹಿತೆಯ ಅನುವುಗಳು ಹಾಗೂ ಪ್ರಮಾಣಕ ಸವಾಲು ದಾಖಲೆಗಳು ಇನ್ನಿತರವುಗಳ ಜೊತೆಗೆ ವ್ಯತ್ಯಯಗಳು ಇದ್ದಂತಹ ಸಮಯಗಳಲ್ಲಿ ಯುಐ ವೆಚ್ಚಗಳಿಗೆ ಅನುವು ಮಾಡಿವೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಅದು ಅಲ್ಪಾವಧಿ ಖರೀದಿಯ ಮೇಲಿನ ಒಪ್ಪಿಗೆ ಪತ್ರಗಳ ಷರತ್ತುಗಳು ಮತ್ತು ನಿಬಂಧನೆಗಳಿಗೆ ವಿರುದ್ಧವಾಗಿತ್ತಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

***ಲೆಕ್ಕಪರಿಶೋಧನೆಯ ಪ್ರಭಾವ***

**3.10.9.** ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹೊಂದಾಣಿಕೆ ಮಾಡಲಾದ, ವಸೂಲಾತಿ ಮಾಡಬೇಕಾದ ಸಾಮರ್ಥ್ಯ ವೆಚ್ಚಗಳು, ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳು ಹಾಗೂ ನಿರೋಧಕ ವೆಚ್ಚಗಳಿಗೆ ಸಂಬಂಧಿಸಿದಂತೆ ₹ 15.83 ಕೋಟಿ ಮೊತ್ತವನ್ನು ವಸೂಲಾತಿ ಮಾಡಿತು ಎಂಬುದಾಗಿ ಸರ್ಕಾರವು ತಿಳಿಸಿತು (ನವೆಂಬರ್ 2014).

***ಖರೀದಿ ಹಾಗೂ ವಿತರಣೆಯ ಮೇಲ್ವಿಚಾರಣೆ***

**3.10.10.** ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ರಾಜ್ಯದೊಳಗಿನ ಲಭ್ಯತೆ ಆಧಾರಿತ ತನ್ನ ದರಪಟ್ಟಿಯನ್ನು (ಎಬಿಟಿ) ರಾಜ್ಯದಲ್ಲಿ ಕಾರ್ಯಗತಗೊಳಿಸುವುದಕ್ಕಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ನೇಮಕ ಮಾಡಿದೆ (ಜೂನ್ 2006). ರಾಜ್ಯದೊಳಗಿನ ಲಭ್ಯತೆ ಆಧಾರಿತ ತನ್ನ ದರಪಟ್ಟಿಯನ್ನು ಕಾರ್ಯಗತಗೊಳಿಸದಿದ್ದ ಕಾರಣ ಈ ಕೆಳಗಿನ ಪ್ರಯೋಜನಗಳು ಒದಗಿ ಬರಲಿಲ್ಲ:

- ಅತ್ಯುಚ್ಚ ಮಟ್ಟದ ಬೇಡಿಕೆಯ ಸಮಯದಲ್ಲಿ ಪ್ರೋತ್ಸಾಹಕಗಳ ಮೂಲಕ ವಿದ್ಯುತ್‌ನ ಗರಿಷ್ಠ ಉತ್ಪಾದನೆ ಮತ್ತು ಬೇಡಿಕೆಯಿಲ್ಲದ ಸಮಯದಲ್ಲಿ ದಂಡ ಹಾಕುವ ಮೂಲಕ ಉತ್ಪಾದನೆಯನ್ನು ಪ್ರೋತ್ಸಾಹಿಸದೇ ಇರುವುದನ್ನು ಸಾಧಿಸಲಾಗಲಿಲ್ಲ.
- ಲಭ್ಯವಿರುವ ಸಂಪನ್ಮೂಲಗಳನ್ನು ಹಾಗೂ ವಿದ್ಯುತ್ ಉತ್ಪಾದನಾ ಸಾಮರ್ಥ್ಯಗಳನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವುದನ್ನು ಸಾಧಿಸಲಿಲ್ಲ.
- ಅತ್ಯುಚ್ಚ ಮಟ್ಟದ ಬೇಡಿಕೆ ಇಲ್ಲದ ಸಮಯದಲ್ಲಿ ಅರ್ಹತೆಯ ಕ್ರಮದಂತೆ ವಿದ್ಯುತ್ ಹಿಂತೆಗೆತವನ್ನು ನಿಲ್ಲಿಸಲು ಪ್ರೋತ್ಸಾಹಿಸುವುದನ್ನು ಸಾಧಿಸಲಿಲ್ಲ.

ಕರ್ನಾಟಕ ವಿದ್ಯುತ್ ನಿಯಂತ್ರಣ ನಿಗಮವು ರಾಜ್ಯದೊಳಗಿನ ಎ.ಬಿ.ಟಿ.ಯನ್ನು ಇನ್ನೂ ರೂಪಿಸಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಈಗಾಗಲೇ ರಾಜ್ಯದೊಳಗಿನ ಎ.ಬಿ.ಟಿ.ಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿರುವುದರಿಂದ (ಜೂನ್ 2006) ಉತ್ತರವು ಒಪ್ಪುವಂತಿಲ್ಲ.

**3.10.11.** ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 31ರ ಪ್ರಕಾರ, ರಾಜ್ಯ ಸರ್ಕಾರವು, ಒಂದು ರಾಜ್ಯದೊಳಗಿನ ವಿದ್ಯುಚ್ಛಕ್ತಿಯ ಅತ್ಯುತ್ತಮ ವೇಳಾಪಟ್ಟಿಗಾಗಿ ಹಾಗೂ ರವಾನೆಗಾಗಿ, ಗ್ರಿಡ್ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ, ರಾಜ್ಯ ಗ್ರಿಡ್ಡಿನ ಮೂಲಕ ಪ್ರಸರಣ ಮಾಡಲಾದ ವಿದ್ಯುಚ್ಛಕ್ತಿಯ ಪ್ರಮಾಣದ ಲೆಕ್ಕವನ್ನಿಡಲು, ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡಲು ಹಾಗೂ ನಿಯಂತ್ರಿಸಲು ಹಾಗೂ ಗ್ರಿಡ್ಡಿನ ನಿಯಂತ್ರಣಕ್ಕಾಗಿ ಒಂದು ವಾಸ್ತವಿಕ ಸಮಯ ಕಾರ್ಯಾಚರಣೆಗಳನ್ನು ನಡೆಸಿಕೊಂಡು ಹೋಗಲು ಹಾಗೂ ಭದ್ರತೆಯಿಂದ ಹಾಗೂ ಆರ್ಥಿಕವಾಗಿ ಮಿತವ್ಯಯತೆಯಿಂದ ಕೂಡಿದ ಕಾರ್ಯಾಚರಣೆಯ ಮೂಲಕ ರಾಜ್ಯದ ಒಳಗೆ ವಿದ್ಯುಚ್ಛಕ್ತಿಯ ರವಾನೆಗಾಗಿ ಒಂದು ರಾಜ್ಯ ಸರ್ಕಾರಿ ಸ್ವಾಮ್ಯದ ಕಂಪನಿಯನ್ನಾಗಿ ಅಥವಾ ಯಾವುದೇ ರಾಜ್ಯದ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ರಚಿಸಲಾದ ಯಾವುದೇ ಪ್ರಾಧಿಕಾರ ಅಥವಾ ನಿಗಮವಾಗಿ ರಾಜ್ಯ ವಿದ್ಯುತ್ ಹೊರೆ ರವಾನೆ ಕೇಂದ್ರವನ್ನು ಸ್ಥಾಪಿಸತಕ್ಕದ್ದು. ವಿದ್ಯುಚ್ಛಕ್ತಿ ಅಧಿನಿಯಮ, 2003 ಜಾರಿಗೊಂಡು 11 ವರ್ಷಗಳು ಕಳೆದನಂತರವೂ, ರಾಜ್ಯ ವಿದ್ಯುತ್–ಹೊರೆ ರವಾನೆ ಕೇಂದ್ರವು ರಾಜ್ಯ ಪ್ರಸರಣ ನಿಗಮದ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) ಅಡಿಯಲ್ಲಿ ಇನ್ನೂ ಕಾರ್ಯನಿರ್ವಹಿಸುತ್ತಿದೆ, ಅದು ರಾಜ್ಯದೊಳಗಿನ ಪ್ರಸರಣ ವ್ಯವಸ್ಥೆಯ ಅತ್ಯುತ್ತಮ ಕಾರ್ಯಾಚರಣೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ವಿದ್ಯುತ್–ಹೊರೆ ರವಾನೆ ಕೇಂದ್ರದ ಸ್ವಾಯತ್ತತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ.

ಒಂದು ಸ್ವತಂತ್ರ ರಾಜ್ಯ ವಿದ್ಯುತ್–ಹೊರೆ ರವಾನೆ ಕೇಂದ್ರದ ಸ್ಥಾಪನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014).

**ನಿರ್ಣಯಗಳು**

**ನಾವು ತೀರ್ಮಾನಿಸಿರುವುದೇನೆಂದರೆ**

- **ಕೊರತೆಗಳನ್ನು ಮಿತಗೊಳಿಸುವುದಕ್ಕಾಗಿ ವಿದ್ಯುತ್ತನ್ನು ಖರೀದಿಸಲು ಪೂರ್ವಭಾವಿ ಯೋಜನೆಯನ್ನು ರೂಪಿಸಲು ಅನುಕೂಲ ಕಲ್ಪಿಸುವಂತಹ ಬೇಡಿಕೆ ಸರಬರಾಜುಗಳ ನಡುವಿನ**

ಅಂತರವನ್ನು ನಿರ್ಧಾರಣೆ ಮಾಡುವುದಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳು ವಾರ್ಷಿಕ ವಿದ್ಯುತ್–ಹೊರೆ ಪೂರ್ವಾಲೋಚನೆ ಮಾಡಿರಲಿಲ್ಲ.

- ಲಭ್ಯವಿರುವ ಸಂಪನ್ಮೂಲಗಳ ಅತ್ಯುತ್ತಮ ಬಳಕೆ ಹಾಗೂ ವಿದ್ಯುತ್ ಉತ್ಪಾದನಾ ಸಾಮರ್ಥ್ಯಗಳನ್ನು ಸಾಧಿಸಿರಲಿಲ್ಲ.

- ಪಿಪಿಎಗಳ ಷರತ್ತುಗಳು ಮತ್ತು ನಿಬಂಧನೆಗಳನ್ನು ಕಾರ್ಯಗತಗೊಳಿಸಿರಲಿಲ್ಲವಾದ್ದರಿಂದ ಹೆಚ್ಚುವರಿ ಹಣಕಾಸಿನ ಹೊರೆಯುಂಟಾಯಿತು.

- ಪ್ರೋತ್ಸಾಹಕಗಳೊಡನೆ ಅತ್ಯುಚ್ಚ ಬೇಡಿಕೆ ಸಮಯಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಗರಿಷ್ಠಗೊಳಿಸುವುದಕ್ಕಾಗಿ ರಾಜ್ಯದೊಳಗಿನ ಎ.ಬಿ.ಟಿ.ಯನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸಿರಲಿಲ್ಲ.

**ಶಿಫಾರಸುಗಳು**

- ಎಸ್ಕಾಂಗಳು ಕೊರತೆಗಳನ್ನು ನೀಗಿಸುವುದಕ್ಕಾಗಿ ಹಾಗೂ ಇತರೆ ಪ್ರದೇಶಗಳಿಂದ ವಿದ್ಯುತ್ ಖರೀದಿಗಾಗಿ ವಿದ್ಯುತ್ ಪ್ರಸರಣ ಜಾಲಕ್ಕಾಗಿ ಮುಂಗಡವಾಗಿ ಪೂರ್ವಭಾವಿ ಯೋಜನೆಯನ್ನು ತಯಾರಿಸಲು ಅನುಕೂಲ ಕಲ್ಪಿಸುವ ಸಲುವಾಗಿ ತಮ್ಮ ಸರಬರಾಜು ವ್ಯಾಪ್ತಿಯಲ್ಲಿ ವಾರ್ಷಿಕ ವಿದ್ಯುತ್–ಹೊರೆ ಪೂರ್ವಾಲೋಚನೆಯನ್ನು ಮಾಡುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

- ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿರುವ ಕಾರ್ಯಯೋಜನೆಯ ಪ್ರಕಾರ ರಾಜ್ಯದೊಳಗಿನ ಎ.ಬಿ.ಟಿ.ಯನ್ನು ಕಾರ್ಯಗತಗೊಳಿಸಲು ಸರ್ಕಾರವು ಕ್ರಮವನ್ನು ಕೈಗೊಳ್ಳಬೇಕು.

- ಇತರೆ ಮೂಲಗಳಿಂದ ವಿದ್ಯುತ್ ಖರೀದಿಗಳ ಹೊರೆಯನ್ನು ಕಡಿಮೆಗೊಳಿಸಲು ರಾಜ್ಯ ಹಾಗೂ ಕೇಂದ್ರ ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ ಲಭ್ಯವಿರುವ ವಿದ್ಯುತ್ತಿನ ಅತ್ಯುತ್ತಮ ಬಳಕೆಯನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

- ಸರ್ಕಾರವು, ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅಡಿಯಲ್ಲಿ ಉದ್ದೇಶಿಸಿರುವಂತೆ ಒಂದು ರಾಜ್ಯ ವಿದ್ಯುತ್–ಹೊರೆ ರವಾನೆ ಕೇಂದ್ರವನ್ನು ಸ್ಥಾಪಿಸಬೇಕು.

**ಮೈಸೂರು ಕಾಗದ ಕಾರ್ಖಾನೆ ನಿಯಮಿತ**

### 3.11 *ವ್ಯರ್ಥ ಹೂಡಿಕೆ ಹಾಗೂ ಪರಿಸರ ಸಂರಕ್ಷಣೆಯ ಮೇಲಿನ ಸನ್ನದನ್ನು ಅನುಸರಿಸುವಲ್ಲಿನ ವಿಫಲತೆ*

**ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನಗಳು ಹಾಗೂ ಕೇಂದ್ರ ಸರ್ಕಾರವು ನೀಡಿದ್ದ ಪರಿಸರ ಸಂರಕ್ಷಣೆಯ ಮೇಲಿನ ಸನ್ನದನ್ನು ಅನುಸರಿಸುವ ಉದ್ದೇಶದಿಂದ ರೋಟರಿ ಕಿಲ್ನ್ ಸ್ಥಾವರವನ್ನು ಸ್ಥಾಪಿಸುವ ಒಂದು ಯೋಜನೆಯನ್ನು ಮೈಸೂರು ಕಾಗದ ಕಾರ್ಖಾನೆಯು ಕೈಗೆತ್ತಿಕೊಂಡಿತು. ಜುಲೈ 2011ರಲ್ಲಿ ಪೂರ್ಣಗೊಳ್ಳಬೇಕಿದ್ದ ಯೋಜನೆಯು ಯಾವುದೇ ಒಂದು ನಿರ್ದಿಷ್ಟ ಕ್ರಿಯಾ ಯೋಜನೆ ಇಲ್ಲದೆಯೇ ಕಳೆದ ಮೂರು ವರ್ಷಗಳಿಂದಲೂ ಕುಂಟುತ್ತಾ ಸಾಗಿದೆ ಮತ್ತು ಹೂಡಿಕೆ ಮಾಡಿದ ₹ 33.36 ಕೋಟಿಯು ನಿಷ್ಕ್ರಿಯವಾಗಿದೆ.**

ಮೈಸೂರು ಕಾಗದ ಕಾರ್ಖಾನೆಯು (ಕಂಪನಿ) ಭದ್ರಾವತಿಯಲ್ಲಿ ಒಂದು ಕಾಗದ ಹಾಗೂ ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಿದೆ. ತಿರುಳು ಮತ್ತು ಕಾಗದ ಕಾರ್ಖಾನೆಯಲ್ಲಿ ಘನ ತ್ಯಾಜ್ಯ ವಿಲೇವಾರಿಯ ಸಮಸ್ಯೆಯಿಂದ ಹೊರಬರುವುದಕ್ಕಾಗಿ ಕ್ಯಾಲ್ಸಿಯಂ ಕಾರ್ಬೋನೇಟನ್ನು ಪುನಃ ಸುಟ್ಟ ಸುಣ್ಣವನ್ನಾಗಿ ಪರಿವರ್ತಿಸಿ ಮರು ಬಳಸಲು ರೋಟರಿ ಲೈಮ್ ಸ್ಲಡ್ಜ್ ರೀ–ಬರ್ನಿಂಗ್ ಕಿಲ್ನ್ (ರೋಟರಿ ಕಿಲ್ನ್) ಅನ್ನು ಸ್ಥಾಪಿಸಬೇಕಿತ್ತು. ರೋಟರಿ ಕಿಲ್ನ್ ಸ್ಥಾಪನೆಗಾಗಿ ಹಾಗೂ ಬಂಡವಾಳ ವೆಚ್ಚವನ್ನು ಭರಿಸುವುದಕ್ಕಾಗಿ ಕರ್ನಾಟಕ ಸರ್ಕಾರದ ಅನುಮೋದನೆಯನ್ನು ಪಡೆಯಲು ಮಾಡಲಾದ ಪ್ರಸ್ತಾವನೆಗೆ ನಿರ್ದೇಶಕರುಗಳ ಮಂಡಳಿಯು ಅನುಮೋದನೆಯನ್ನು ನೀಡಿತು (ಅಕ್ಟೋಬರ್ 2002).

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯಗಳ ಮಂತ್ರಾಲಯವು ದೇಶದಲ್ಲಿರುವ ಎಲ್ಲಾ ಭಾರೀ ಪ್ರಮಾಣದ ತಿರುಳು ಮತ್ತು ಕಾಗದ ಕಾರ್ಖಾನೆಗಳಲ್ಲಿ ಲೈಮ್ ಕಿಲ್ನ್ ಯೋಜನೆಗಳನ್ನು ನಾಲ್ಕು ವರ್ಷಗಳ ಒಳಗೆ (2007ರ ವೇಳೆಗೆ) ಸ್ಥಾಪಿಸುವುದನ್ನು ಕಡ್ಡಾಯಗೊಳಿಸಿ ಪರಿಸರ ಸಂರಕ್ಷಣೆಯಲ್ಲಿ ಸಾಂಸ್ಥಿಕ ಜವಾಬ್ದಾರಿಯ (ಸಿಆರ್‌ಇಪಿ) ಮೇಲೆ ಒಂದು ಸನ್ನದನ್ನು ರೂಪಿಸಿತು (ಮಾರ್ಚ್ 2003). ಮುಂದುವರೆದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ[95] ಮತ್ತು ವಾಯು[96] ಅಧಿನಿಯಮದ ಅನುವುಗಳನ್ನು ಅನುಸರಿಸದಿದ್ದುದಕ್ಕಾಗಿ ಕಂಪನಿಗೆ ಕಾರಣವನ್ನು ಕೇಳಿ ನೋಟೀಸನ್ನು ನೀಡಿತು (ಮೇ 2004).

ದೇಶದಲ್ಲಿ ಸನ್ನದನ್ನು ಇನ್ನೂ ಅನುಸರಿಸಬೇಕಾಗಿರುವ ಕಾಗದದ ಕೈಗಾರಿಕೆ ಇದೊಂದೇ ಎಂಬುದಾಗಿ ವ್ಯವಸ್ಥಾಪಕ ನಿರ್ದೇಶಕರವರು ಕರ್ನಾಟಕ ಸರ್ಕಾರಕ್ಕೆ ತಿಳಿಸಿದ್ದರು (ಆಗಸ್ಟ್/ನವೆಂಬರ್ 2006). ಕರ್ನಾಟಕ ಸರ್ಕಾರವು ಜನವರಿ 2007ರಲ್ಲಿ ಯೋಜನೆಗೆ ಅನುಮೋದನೆಯನ್ನು ನೀಡಿತು. ರೋಟರಿ ಕಿಲ್ನ್ ಅನ್ನು ಸ್ಥಾಪಿಸಿರಲಿಲ್ಲವಾದ್ದರಿಂದ, ಅದು ಕೊಳಕುಗಳನ್ನು ಹಾಗೂ ಉತ್ಸರ್ಜನಗಳನ್ನು ಹೊರಹಾಕುವುದನ್ನು ತಡೆಯತಕ್ಕದ್ದು ಹಾಗೂ ಯಾವುದೇ ಉಲ್ಲಂಘನೆಗೆ ದಂಡ ವಿಧಿಸಲಾಗುವುದು ಎಂಬುದಾಗಿ ಅರ್ಥೈಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸ್ಥಾವರವನ್ನು 2007–09 ಅವಧಿಗೆ ಕಾರ್ಯಾಚರಣೆಗೊಳಿಸುವುದನ್ನು ತಿರಸ್ಕರಿಸುವ ಆದೇಶವನ್ನು ನೀಡಿತು (ಡಿಸೆಂಬರ್ 2007).

ಕಂಪನಿಯು ಟೆಂಡರುಗಳನ್ನು ಆಹ್ವಾನಿಸಿತು (ಜುಲೈ 2008) ಹಾಗೂ ರೋಟರಿ ಕಿಲ್ನ್‌ನ ವಿನ್ಯಾಸ, ತಾಂತ್ರಿಕತೆ, ತಯಾರಿಕೆ, ಸರಬರಾಜು, ಸ್ಥಾಪನೆ, ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯನಿರ್ವಹಣೆಯ ಪರೀಕ್ಷೆಗಾಗಿ ₹ 25.47 ಕೋಟಿಗೆ[97] ಎಫ್‌ಎಲ್‌ಸ್ಮಿಡ್ತ್ (ಸರಬರಾಜುದಾರ)ಗೆ ಕೋರಿಕೆ ಪತ್ರವನ್ನು ನೀಡಿತು (ಜುಲೈ 2009). ಮಾರ್ಚ್ 2011ರ ವೇಳೆಗೆ ಸ್ಥಾವರವನ್ನು ಕಾರ್ಯಾರಂಭಗೊಳಿಸುವ ಸಲುವಾಗಿ, ಸರಬರಾಜುದಾರರು ಉಪಕರಣದ ಸರಬರಾಜನ್ನು ಕೋರಿಕೆ ಪತ್ರವನ್ನು ನೀಡಿದ ದಿನಾಂಕದಿಂದ 18 ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಿತ್ತು.

ಉಪಕರಣವನ್ನು ಸ್ಥಾಪಿಸುವುದನ್ನು ಸಿವಿಲ್ ಕಾಮಗಾರಿಯ ಜೊತೆ ಸಮನ್ವಯಗೊಳಿಸಲು ಸಿವಿಲ್ ಕಾಮಗಾರಿಗಳಿಗೆ ಕಾಮಗಾರಿ ಆದೇಶವನ್ನು ಹೈ ಪರ್‍ರಾ ಕನ್ಸ್‌ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ (ಎಲ್2 ಸವಾಲುದಾರರು)ಗೆ[98], ಜುಲೈ 2011ರ ಒಳಗೆ ಪೂರ್ಣಗೊಳಿಸಬೇಕೆಂಬ ನಿರ್ದೇಶನದೊಂದಿಗೆ ₹ 5.40 ಕೋಟಿ ಮೊತ್ತಕ್ಕೆ ನೀಡಲಾಗಿತ್ತು. (ಆಗಸ್ಟ್ 2010).

ಯೋಜನೆಗೆ ಹಣಕಾಸನ್ನು ಒದಗಿಸುವುದಕ್ಕಾಗಿ ಕಂಪನಿಯು ಬಾಂಡುಗಳನ್ನು ನೀಡುವ ಮೂಲಕ ₹ 35 ಕೋಟಿ ಮೊತ್ತವನ್ನು ಸಂಗ್ರಹಿಸಿತು (ಅಕ್ಟೋಬರ್ 2009). ಮೊತ್ತವನ್ನು ಅಕ್ಟೋಬರ್ 2013ರಿಂದ ಮುಂದಕ್ಕೆ ನಾಲ್ಕು ಕಂತುಗಳಲ್ಲಿ ಪುನರ್‌ಪಾವತಿ ಮಾಡಬೇಕಾಗಿತ್ತು. ಕರ್ನಾಟಕ ಸರ್ಕಾರವು ಮೊದಲ ಕಂತಿನ ₹ 8.75 ಕೋಟಿ ಮೊತ್ತವನ್ನು ಪುನರ್ ಪಾವತಿ ಮಾಡುವುದಕ್ಕಾಗಿ ₹ 10 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿತು (ಅಕ್ಟೋಬರ್ 2013). ಕಂಪನಿಯು ಬಾಂಡುಗಳ ಮೇಲೆ 15 ಅಕ್ಟೋಬರ್ 2014ರವರೆಗೆ ₹ 13.81 ಕೋಟಿ ಮೊತ್ತದಷ್ಟು ಬಡ್ಡಿ ಹಾಗೂ ಬಾಂಡುಗಳ ಮೇಲಿನ ಖಾತರಿ ಕಮಿಷನ್ ಆಗಿ ₹ 1.50 ಕೋಟಿ ಪಾವತಿಸಿತು. ಮುಂದುವರೆದು, ಬಾಂಡುಗಳ ಮೂಲಕ ಸಂಗ್ರಹಿಸಿದ್ದ ₹ 17.52 ಕೋಟಿ ನಿಧಿಯನ್ನು ನಿಯಂತ್ರಕ ಅನುಮೋದನೆಗಳನ್ನು ಪಡೆಯದೆಯೇ, ಸಕ್ಕರೆ ಕಾರ್ಖಾನೆ ಹಾಗೂ ಬಾಯಲರ್‌ಗಳ ಇತರೆ ನಿರ್ವಹಣೆಗಾಗಿ ಮಾರ್ಗಾಂತರಗೊಳಿಸಲಾಯಿತು, ಇದು ಸರಬರಾಜುದಾರರಿಗೆ ಪಾವತಿ ಮಾಡುವಲ್ಲಿ ಪ್ರತಿಕೂಲ ಪರಿಣಾಮವನ್ನು ಬೀರಿತು.

---

95 ಜಲ (ಮಾಲಿನ್ಯ ತಡೆಯುವಿಕೆ ಮತ್ತು ನಿಯಂತ್ರಣ) ಅಧಿನಿಯಮ, 1974.

96 ವಾಯು (ಮಾಲಿನ್ಯ ತಡೆಯುವಿಕೆ ಮತ್ತು ನಿಯಂತ್ರಣ) ಅಧಿನಿಯಮ, 1981.

97 ₹ 23.93 ಕೋಟಿ ಮೌಲ್ಯದ ಉಪಕರಣ ಮತ್ತು ₹1.54 ಕೋಟಿ ಹಾಗೂ ಸ್ಥಾಪನೆಯ ಹಾಗೂ ಕಾರ್ಯಾರಂಭಗೊಳಿಸುವಿಕೆಯ ಕಾಮಗಾರಿಗಳು.

98 ಮೆ. ಎಸ್‌ಸಿವನ ಡೆವಲಪರ್ಸ್‌ಗೆ (ಎಲ್ 1 ಸವಾಲುದಾರರು) ನೀಡಲಾದ (ಏಪ್ರಿಲ್ 2010) ಗುತ್ತಿಗೆಯು ಫೆಬ್ರವರಿ 2011ರಲ್ಲಿ ಪೂರ್ಣಗೊಳ್ಳಬೇಕಿದ್ದಿತು, ಸಲ್ಲಿಸಲಾಗಿದ್ದ ದಾಖಲೆಗಳು ನಕಲಿ ಎಂದು ಕಂಡುಬಂದಿದ್ದರಿಂದ ಅದನ್ನು ರದ್ದುಗೊಳಿಸಲಾಯಿತು (ಜೂನ್ 2010).

ಸರಬರಾಜುದಾರರು ₹ 17.14 ಕೋಟಿ ಮೌಲ್ಯದ ಉಪಕರಣವನ್ನು (ಬಿಡಿಭಾಗಗಳು) ಸರಬರಾಜು ಮಾಡಿದರು (ಮಾರ್ಚ್ 2010ರಿಂದ ಅಕ್ಟೋಬರ್ 2012), ಅದಕ್ಕೆ ಪ್ರತಿಯಾಗಿ ಕಂಪನಿಯು ₹ 15.34 ಕೋಟಿ ಮೊತ್ತವನ್ನು ಪಾವತಿಸಿತು. ಕಂಪನಿಯು ಪಾವತಿ ಮಾಡಲಿಲ್ಲವಾದ್ದರಿಂದ ಉಳಿಕೆ ಉಪಕರಣಗಳನ್ನು ಸರಬರಾಜು ಮಾಡಿರಲಿಲ್ಲ (ಅಕ್ಟೋಬರ್ 2014).

ಭೂ ಅಗೆತದ ಜಾಗದಲ್ಲಿ ಹೂಳು ತುಂಬಿಕೊಂಡಿದ್ದರಿಂದ ಹಾಗೂ ಅಗತ್ಯವಿದ್ದಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಗುತ್ತಿಗೆದಾರರ ವಿಫಲತೆಯ ಕಾರಣ ಸಿವಿಲ್ ಕಾಮಗಾರಿಗಳೂ ಸಹ ವಿಳಂಬಗೊಂಡಿದ್ದವು. ಶಾಸನಬದ್ಧ ಪಾವತಿಗಳ ಬಾಕಿಗಳಿಗೆ ಸಂಬಂಧಿಸಿದಂತೆ ಉದ್ಭವಿಸಿದ್ದ ವಿವಾದಗಳ ಕಾರಣ ಗುತ್ತಿಗೆದಾರರು ಕಾಮಗಾರಿಯನ್ನು ನವೆಂಬರ್ 2012ರಲ್ಲಿ ಸ್ಥಗಿತಗೊಳಿಸಿದರು. ಗುತ್ತಿಗೆದಾರರಿಗೆ ₹ 4.21 ಕೋಟಿ ಮೊತ್ತವನ್ನು ಪಾವತಿಸಲಾಗಿತ್ತು.

₹ 17.14 ಕೋಟಿ ಮೌಲ್ಯದ ಉಪಕರಣಗಳನ್ನು ಕಳೆದ ಮೂರು ವರ್ಷಗಳಿಂದಲೂ ಮುಕ್ತ ಪ್ರದೇಶದಲ್ಲಿ ಹಾಕಲಾಗಿತ್ತು ಹಾಗೂ ಅವುಗಳಿಗೆ ತುಕ್ಕು ಹಿಡಿಯಲು[99] ಪ್ರಾರಂಭಗೊಂಡಿತ್ತು ಎಂಬುದನ್ನು ನಾವು ಗಮನಿಸಿದೆವು. ಮಂಡಳಿಯು ನಿವೇಶನವನ್ನು ಹಾಗೂ ಉಪಕರಣವನ್ನು ಸ್ವಚ್ಛಗೊಳಿಸಲು ಹಾಗೂ ಸ್ವೀಕರಿಸಲಾದ ಉಪಕರಣವನ್ನು ಸಮರ್ಪಕವಾಗಿ ದಾಸ್ತಾನು ಮಾಡಲು ₹ 10 ಲಕ್ಷಗಳಿಗೆ ಅನುಮೋದನೆ ನೀಡಿತು (ಜೂನ್ 2014). ಸಿವಿಲ್ ಕಾಮಗಾರಿಗಳೂ ಸಹ ಪೂರ್ಣಗೊಳ್ಳಲು ಬಾಕಿ ಇದ್ದವು ಹಾಗೂ ಕಂಪನಿಯು ಕಾಮಗಾರಿಯನ್ನು ಪುನರ್–ಪ್ರಾರಂಭಿಸುವಂತೆ ಗುತ್ತಿಗೆದಾರರಿಗೆ ಒತ್ತಾಯಿಸುತ್ತಿತ್ತು (ಅಕ್ಟೋಬರ್ 2014).

ಈ ರೀತಿಯಾಗಿ, ಜುಲೈ 2011ರಲ್ಲಿ ಪೂರ್ಣಗೊಳ್ಳಬೇಕಿದ್ದ ಯೋಜನೆಯು ಈ ದಿನದವರೆಗೂ ಪೂರ್ಣಗೊಂಡಿರಲಿಲ್ಲ ಹಾಗೂ ಅದನ್ನು ಪೂರ್ಣಗೊಳಿಸುವುದಕ್ಕಾಗಿ ನಿರ್ದಿಷ್ಟ ಕ್ರಿಯಾ ಯೋಜನೆಯೂ ಇಲ್ಲದೆ ಕಳೆದ ಮೂರು ವರ್ಷಗಳಿಂದಲೂ ಕುಂಟುತ್ತಾ ಸಾಗಿದೆ. ಅಲ್ಲದೇ, ₹ 33.36 ಕೋಟಿ ಮೊತ್ತದ ಹೂಡಿಕೆಯು ಯಾವುದೇ ಪ್ರತಿಫಲವನ್ನೂ ನೀಡಲಿಲ್ಲ ಹಾಗೂ ಅದು ವ್ಯರ್ಥ ಹೂಡಿಕೆಯಾಗಿದೆ, ಅಥವಾ ಅದು ಕೊಳಕುಗಳನ್ನು/ಉತ್ಸರ್ಜನಗಳನ್ನು ಹೊರಹಾಕುವುದನ್ನು ತಡೆದಿರಲಿಲ್ಲವಾದ್ದರಿಂದ ಅಥವಾ ಕಡಿಮೆಗೊಳಿಸಿರಲಿಲ್ಲವಾದ್ದರಿಂದ ಅದರ ಪರಿಸರ ಸಂರಕ್ಷಣೆಯ ಉದ್ದೇಶವನ್ನು ಈಡೇರಿಸಲಿಲ್ಲ.

ವಿಷಯವನ್ನು ಸರ್ಕಾರಕ್ಕೆ ಜುಲೈ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ**

### 3.12 *ಸೇವಾ ತೆರಿಗೆ ಅಧಿನಿಯಮದ ಅನುವುಗಳನ್ನು ಅನುಸರಿಸುವಲ್ಲಿನ ವಿಫಲತೆ*

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸೇವಾ ತೆರಿಗೆ ಅಧಿನಿಯಮದ ಅಡಿಯಲ್ಲಿ ತಾನಾಗಿಯೇ ನೋಂದಣಿ ಮಾಡಿಸಿಕೊಳ್ಳಲು, ನವೀಕರಿಸಬಹುದಾದ ಇಂಧನ ಅಭಿವೃದ್ಧಿಕಾರರಿಂದ ತೆರಿಗೆಯನ್ನು ಸಂಗ್ರಹಿಸಲು, ಹಾಗೂ ಅದನ್ನು ಸೇವಾ ತೆರಿಗೆ ಇಲಾಖೆಗೆ ಪಾವತಿಸಲು ಸಮಯೋಚಿತ ಕ್ರಮವನ್ನು ತೆಗೆದುಕೊಳ್ಳುವಲ್ಲಿ ವಿಫಲಗೊಂಡಿದ್ದಿತು. ಇದರಿಂದ ₹ 6.70 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೊಣೆಯನ್ನು ಕಂಪನಿಯು ಹೊರುವಂತಾಯಿತು.**

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮವು (ಕಂಪನಿ) ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಒಂದು ಸಂಪರ್ಕಸೇತು ಸಂಸ್ಥೆಯಾಗಿದೆ. ಕಂಪನಿಯು ಕಾಲಾನುಕಾಲಕ್ಕೆ ಸರ್ಕಾರವು ನೀಡುವ ಆದೇಶಗಳ ಪ್ರಕಾರ, ನವೀಕರಿಸಬಹುದಾದ ಇಂಧನ ಅಭಿವೃದ್ಧಿಕಾರರಿಂದ ಅರ್ಜಿ ಶುಲ್ಕ, ಕರಡು ಯೋಜನಾ ವರದಿ ಸಂಸ್ಕರಣಾ ಶುಲ್ಕ, ವರ್ಗಾವಣೆ ಶುಲ್ಕ, ಇತ್ಯಾದಿಗಳನ್ನು ಸಂಗ್ರಹಿಸುತ್ತದೆ.

[99] ಲೆಕ್ಕಪರಿಶೋಧನಾ ತಂಡ ಹಾಗೂ ವ್ಯವಸ್ಥಾಪನೆ/ಆಡಳಿತವರ್ಗದಿಂದ ಜಂಟಿ ಪರೀಕ್ಷಣಾ ವರದಿ.

ಕಂಪನಿಯು, ಸೇವಾ ತೆರಿಗೆಯ ಹೆಚ್ಚುವರಿ ಆಯುಕ್ತರು, ಆ್ಯಂಟಿ ಇವೇಷನ್, ಇವರಿಂದ ಸೇವಾ ತೆರಿಗೆ ಇಲಾಖೆಯಲ್ಲಿ ತಾನಾಗಿಯೇ ನೋಂದಣಿ ಮಾಡಿಸಿಕೊಳ್ಳುವಂತೆ ಹಾಗೂ ಸೇವೆಗಳನ್ನು ನೀಡಿದ್ದಕ್ಕಾಗಿ ಸೇವಾ ತೆರಿಗೆಯನ್ನು ಪಾವತಿಸುವಂತೆ ಒಂದು ನೋಟೀಸನ್ನು ಸ್ವೀಕರಿಸಿತು (ಜುಲೈ 2010). ಕಂಪನಿಯು ತೆರಿಗೆ ವಿಷಯಗಳಿಗೆ ಸಂಬಂಧಿಸಿದಂತೆ ತಜ್ಞ ಸಲಹೆಗಾಗಿ ಓರ್ವ ತೆರಿಗೆ ಸಲಹೆಗಾರರನ್ನು ನೇಮಕ ಮಾಡಿಕೊಂಡಿತ್ತಾದರೂ (ಫೆಬ್ರವರಿ 2010), ಅದು ಕಂಪನಿಗೆ ಸೇವಾ ತೆರಿಗೆ ಅನ್ವಯಗೊಳ್ಳುವ ಬಗ್ಗೆ ಕಾನೂನು ಸಲಹೆಯನ್ನು ಮತ್ತೋರ್ವ ವಕೀಲರಿಂದ ಕೋರಿತು (ಜೂನ್ 2010). ಆದಾಗ್ಯೂ, ಕಂಪನಿಯು ಪಾವತಿಸಬೇಕಾದ ಸೇವಾ ತೆರಿಗೆಯ ಬಗ್ಗೆ ಯಾವುದೇ ನಿರ್ಣಯವನ್ನೂ ತೆಗೆದುಕೊಂಡಿರಲಿಲ್ಲ.

ಆಯುಕ್ತರು, ಸೇವಾ ತೆರಿಗೆ ಇಲಾಖೆ, ಇವರು ಹಣಕಾಸು ಅಧಿನಿಯಮ 1994ರ ಪರಿಚ್ಛೇದ 65(19)ರ ಪ್ರಕಾರ ಕಂಪನಿಯ ಕಾರ್ಯಚಟುವಟಿಕೆಗಳು 'ವ್ಯಾಪಾರ ಸಹಾಯಕ ಸೇವೆಗಳ' ವಿವರಣೆಯ ಅಡಿಯಲ್ಲಿ ಒಳಪಟ್ಟಿವೆ ಎಂದು ವಾದಿಸಿ, 2006-11 ಅವಧಿಗೆ ಸೇವಾ ತೆರಿಗೆಯನ್ನು ಪಾವತಿಸುವಲ್ಲಿ ವಿಫಲಗೊಂಡಿದ್ದಕ್ಕೆ ಕಾರಣ ಕೇಳಿ ಒಂದು ನೋಟೀಸನ್ನು ನೀಡಿದರು (ಅಕ್ಟೋಬರ್ 2011). ನೋಟೀಸನ್ನು ತೆರಿಗೆ ಸಲಹೆಗಾರರಿಗೆ ಕಳುಹಿಸಲಾಯಿತು, ಅವರು ಕಂಪನಿಯು ಸೇವೆಯನ್ನು ಒದಗಿಸುವ ಸಂಸ್ಥೆಯಾಗಿರುವುದರಿಂದ, ಸೇವಾ ತೆರಿಗೆ ಅಧಿಕಾರಿಯವರಲ್ಲಿ ತಾನಾಗಿಯೇ ನೋಂದಣಿ ಮಾಡಿಸಿಕೊಳ್ಳತಕ್ಕದ್ದು ಹಾಗೂ ಮುಂದಿನ ಎಲ್ಲಾ ವ್ಯವಹಾರಗಳಿಗೂ ಸೇವಾ ತೆರಿಗೆಯನ್ನು ಸಂಗ್ರಹಿಸತಕ್ಕದ್ದು, ಇಲ್ಲವಾದಲ್ಲಿ ಹೊಣೆಯು ಸಂಚಿತಗೊಳ್ಳುವ ಸ್ವಭಾವದ್ದಾಗಿರುತ್ತದೆ ಎಂಬುದಾಗಿ ಸಲಹೆ ನೀಡಿದರು (ಜನವರಿ 2012).

ತೆರಿಗೆ ಸಲಹೆಗಾರರ ಸಲಹೆಯ ಮೇರೆಗೆ ಕ್ರಮವನ್ನು ಕೈಗೊಳ್ಳುವ ಬದಲು, ಕಂಪನಿಯು ಸೇವಾ ತೆರಿಗೆ ಪಾವತಿಯಿಂದ ವಿನಾಯಿತಿಯನ್ನು ಪಡೆಯಲು ನಿಶ್ಚಯಿಸಿತು (ಮಾರ್ಚ್ 2012) ಹಾಗೂ ಕರ್ನಾಟಕ ಸರ್ಕಾರದೊಡನೆ ವಿಷಯವನ್ನು ಪ್ರಸ್ತಾಪಿಸಿತು (ಜುಲೈ 2012). ಕರ್ನಾಟಕ ಸರ್ಕಾರವು, ಭಾರತ ಸರ್ಕಾರದ ಹಣಕಾಸು ಇಲಾಖೆಯೊಡನೆ ವಿನಾಯಿತಿಯನ್ನು ಕೋರಿ ವಿಷಯವನ್ನು ಪ್ರಸ್ತಾಪಿಸಲು ಭಾರತ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯಕ್ಕೆ ವಿಷಯವನ್ನು ತಿಳಿಸಿತು (ಸೆಪ್ಟೆಂಬರ್ 2012). ಮಂತ್ರಾಲಯದ ಪ್ರತಿಕ್ರಿಯೆಯನ್ನು ಸ್ವೀಕರಿಸಿರಲಿಲ್ಲ (ಆಗಸ್ಟ್ 2014). ಸೇವಾ ತೆರಿಗೆ ಆಯುಕ್ತರವರು (ತೀರ್ಮಾನ), 2006-07ರಿಂದ 2010-11ರ ಅವಧಿಗೆ ಸೇವಾ ತೆರಿಗೆ ಪಾವತಿ ಮಾಡುವಲ್ಲಿ ವಿಫಲಗೊಂಡಿದ್ದಕ್ಕಾಗಿ ತಗಾದೆ ನೋಟೀಸನ್ನು ನೀಡಿದರು (ನವೆಂಬರ್ 2012) ಹಾಗೂ ₹ 4.94 ಕೋಟಿ ತೆರಿಗೆ ವಿಧಿಸಿದರು. ಕಂಪನಿಯು ಸೇವಾ ತೆರಿಗೆಯ ವ್ಯಾಪ್ತಿಗೆ ಬರುತ್ತದೆ ಎಂಬುದಾಗಿ ತೆರಿಗೆ ಸಲಹೆಗಾರರು ಪುನ: ತಿಳಿಸಿದರು (ಫೆಬ್ರವರಿ 2013). ಆದಾಗ್ಯೂ, ಕಂಪನಿಯು ನವೆಂಬರ್ 2012ರ ತಗಾದೆ ನೋಟೀಸಿಗೆ ಪ್ರತಿಯಾಗಿ ತಾನು ಯಜಮಾನ ಮತ್ತು ಪ್ರತಿನಿಧಿಯ ನಡುವಿನ ಸಂಬಂಧದಲ್ಲಿ ಪಾಲನ್ನು ಹೊಂದಿಲ್ಲ ಹಾಗೂ ಸಂಗ್ರಹಿಸಲಾಗುವ ಶುಲ್ಕವು ನವೀಕರಿಸಬಹುದಾದ ಇಂಧನ ಯೋಜನೆಗಳ ಅಭಿವೃದ್ಧಿಗೆ ಅತ್ಯಗತ್ಯವಾಗಿದೆ ಎಂಬುದಾಗಿ ವಾದಿಸಿ ಸೇವಾ ತೆರಿಗೆ ಮನವಿ ಅಧಿಕಾರಿಗಳ ಮುಂದೆ ಮನವಿಯನ್ನು ಸಲ್ಲಿಸಿತು (ಫೆಬ್ರವರಿ 2013). ಮನವಿಯು ಇನ್ನೂ ಬಾಕಿ ಇದ್ದು, ಸೇವಾ ತೆರಿಗೆ ಆಯುಕ್ತರು 2011-12ರ ₹ 2.38 ಕೋಟಿ ಸೇವಾ ತೆರಿಗೆ ಪಾವತಿಗಾಗಿ ಪುನ: ತಗಾದೆ ನೋಟೀಸನ್ನು ನೀಡಿದರು (ಅಕ್ಟೋಬರ್ 2013).

ಕಂಪನಿಯು ಸೇವಾ ತೆರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಲು ನಿಶ್ಚಯಿಸಿತು (ಡಿಸೆಂಬರ್ 2013) ಹಾಗೂ ಪುನ: ಡಿಸೆಂಬರ್ 2013ರಲ್ಲಿ ತೆರಿಗೆ ತಗಾದೆಗೆ ಪ್ರತಿಯಾಗಿ ಮನವಿಯನ್ನು ಸಲ್ಲಿಸಿತು. ಅದರಂತೆಯೇ, ಕಂಪನಿಯು ನೋಂದಣಿ ಮಾಡಿಸಿತು ಹಾಗೂ 2006-14 ಅವಧಿಗೆ ₹ 11.64 ಕೋಟಿ[100] ಸೇವಾ ತೆರಿಗೆಯನ್ನು ಪಾವತಿಸಿತು (ಫೆಬ್ರವರಿ 2014). ಪಾವತಿಸಲಾದ ಸೇವಾ ತೆರಿಗೆಯನ್ನು ವಸೂಲು ಮಾಡಲು ಅಭಿವೃದ್ಧಿದಾರರ ಜೊತೆ ಅದು ಪತ್ರವ್ಯವಹಾರವನ್ನೂ ಪ್ರಾರಂಭಿಸಿತು (ಮೇ 2014).

ಸೇವಾ ತೆರಿಗೆ ಇಲಾಖೆಯೊಂದಿಗೆ ನೋಂದಣಿ ಮಾಡಿಸಲು, ಅಭಿವೃದ್ಧಿಕಾರರಿಂದ ತೆರಿಗೆಗಳನ್ನು ಸಂಗ್ರಹಿಸಲು ಹಾಗೂ ಸೇವಾ ತೆರಿಗೆ ಇಲಾಖೆಗೆ ಅದನ್ನು ಪಾವತಿಸಲು ಸಮಯೋಚಿತ

[100] ₹ 4.94 ಕೋಟಿ (2006-11) ಹಾಗೂ ₹ 2.38 ಕೋಟಿ (2011-12) ಹಾಗೂ 2012-14ಕ್ಕೆ ₹ 4.32 ಕೋಟಿ. ಇದು ಸೇವಾ ತೆರಿಗೆ ಇಲಾಖೆಯು ಇನ್ನೂ ತಿಳಿಸಬೇಕಾದ ಬಡ್ಡಿ ಹಾಗೂ ದಂಡವನ್ನೊಳಗೊಂಡಿಲ್ಲ.

ಕ್ರಮಕೈಗೊಂಡಿದ್ದರೆ, 2011–14 ಅವಧಿಗೆ ₹ 6.70 ಕೋಟಿ ಬಾಧ್ಯತೆಯನ್ನು ಹೊತ್ತುಕೊಳ್ಳುವುದರಿಂದ ಕಂಪನಿಯನ್ನು ಕಾಪಾಡುತ್ತಿತ್ತು.

ಸೇವಾ ತೆರಿಗೆ ಇಲಾಖೆಯು ಯಾವ ಉಪ–ಷರತ್ತಿನ ಅಡಿಯಲ್ಲಿ ವರ್ಗೀಕರಣವನ್ನು ಮಾಡಲಾಗಿತ್ತು ಎಂಬುದನ್ನು ನಿರ್ದಿಷ್ಟಪಡಿಸದೆಯೇ ಕಂಪನಿಯ ಕಾರ್ಯಚಟುವಟಿಕೆಗಳನ್ನು ವ್ಯಾಪಾರ ಸಹಾಯಕ ಸೇವೆಗಳ ವಿವರಣೆಯ ಅಡಿಯಲ್ಲಿ ವರ್ಗೀಕರಿಸಿ ಕಾರಣ ಕೇಳಿ ನೋಟೀಸನ್ನು ನೀಡಿತ್ತಾದ್ದರಿಂದ ಬಾಧ್ಯತೆಯು ಉದ್ಭವಿಸುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜುಲೈ 2014). ಮುಂದುವರೆದು, ₹ 31.31 ಲಕ್ಷ (₹ 11.64 ಕೋಟಿಯ ಪೈಕಿ)ವನ್ನು ಈವರೆಗೆ ಅಭಿವೃದ್ಧಿದಾರರಿಂದ ವಸೂಲಾತಿ ಮಾಡಲಾಗಿದೆ ಹಾಗೂ ಶುಲ್ಕದ ಜೊತೆಗೆ ಸೇವಾ ತೆರಿಗೆಯನ್ನು ಸಂಗ್ರಹಿಸಲು ಆದೇಶವನ್ನು ಜೂನ್ 2014ರಲ್ಲಿ ನೀಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು.

ಕಂಪನಿಯು ತೆರಿಗೆ ಬಾಧ್ಯತೆಯು ಸಂಚಿತಗೊಳ್ಳುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ತಾನಾಗಿಯೇ ಸೇವಾತೆರಿಗೆ ಇಲಾಖೆಯ ಜೊತೆ ನೋಂದಣಿ ಮಾಡಿಕೊಂಡು ಸೇವಾ ತೆರಿಗೆಯನ್ನು ಪಾವತಿಸುವಂತೆ ತೆರಿಗೆ ಸಲಹೆಗಾರರು ನೀಡಿದ್ದ ಸಲಹೆಯ ಪ್ರಕಾರ ಜನವರಿ 2012ರಲ್ಲಿ ಏಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂಬುದರ ಬಗ್ಗೆ ಉತ್ತರವು ಮೌನವಾಗಿದೆ.

ತಜ್ಞ ತೆರಿಗೆ ಸಲಹೆಗಾರರ ಸಲಹೆಯನ್ನು ಸ್ವೀಕರಿಸಿದ ಹೊರತಾಗಿಯೂ ಕಂಪನಿಯು ಸಮಯೋಚಿತ ಕ್ರಮವನ್ನು ತೆಗೆದುಕೊಳ್ಳುವಲ್ಲಿನ ವೈಫಲ್ಯದಿಂದ, ಕಂಪನಿಯು 2011–14 ಸಾಲಿಗೆ ₹ 6.70 ಕೋಟಿಯಷ್ಟು ಬಾಧ್ಯತೆಯನ್ನು ಹೊತ್ತುಕೊಳ್ಳುವಂತಾಯಿತು.

**ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ**

### 3.13 *ದೋಷಯುಕ್ತ ಟೆಂಡರು ಮೌಲ್ಯಮಾಪನ*

**ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ತನ್ನ ರಬ್ಬರು ತೋಟಗಳಿಗೆ ಕ್ರಿಮಿನಾಶಕವನ್ನು ವಾಯುವೀಯ (ಏರಿಯಲ್) ಸಿಂಚನಗೊಳಿಸುವ ಕಾಮಗಾರಿಯನ್ನು ಒಂದು ಸಂಸ್ಥೆಗೆ ನೀಡಿತು, ಅದು ಟೆಂಡರಿನಲ್ಲಿ ನಿರ್ದಿಷ್ಟಪಡಿಸಲಾಗಿದ್ದ ತಾಂತ್ರಿಕ ಮಾನದಂಡವನ್ನು ಪೂರೈಸಿರಲಿಲ್ಲ, ಇದರಿಂದಾಗಿ ₹ 6.30 ಕೋಟಿ ಮೊತ್ತದಷ್ಟು ವರಮಾನದ ನಷ್ಟ ಸಂಭವಿಸಿತು.**

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು (ಕಂಪನಿ) ಸುಳ್ಯ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿ 2,742.69 ಹೆಕ್ಟೇರುಗಳಲ್ಲಿ ವ್ಯಾಪಿಸಿದ್ದ ತನ್ನ ರಬ್ಬರು ತೋಟಗಳಿಗೆ 2011–12ರ ವರ್ಷಕ್ಕೆ ಕ್ರಿಮಿನಾಶಕವನ್ನು ವಾಯುವೀಯ ಸಿಂಚನಗೊಳಿಸುವ (ಹೆಲಿಕಾಪ್ಟರ್ ಮೂಲಕ) ಕಾಮಗಾರಿಗಾಗಿ ಟೆಂಡರುಗಳನ್ನು ಆಹ್ವಾನಿಸಿತು (ಡಿಸೆಂಬರ್ 2010). ವಾಯುವೀಯ ಸಿಂಚನಗೊಳಿಸುವ ಕಾರ್ಯಾಚರಣೆಯನ್ನು ಕೈಗೊಳ್ಳಲು ಕಾರ್ಯಾಚರಣೆ ಮಾಡುವವರ ಪರವಾನಗಿಯ[101] ಒಂದು ಪ್ರತಿಯನ್ನು ಒದಗಿಸತಕ್ಕದ್ದು ಎಂಬುದಾಗಿ ಟೆಂಡರು ನಿರ್ದಿಷ್ಟಪಡಿಸಿತ್ತು. ಸಿಂಚನವು ಮುಂಗಾರು ಮಳೆಗಾಲವು ಪ್ರಾರಂಭಗೊಳ್ಳುವ ಮೊದಲು ಮೇ 10ರಂದು ಪ್ರಾರಂಭಗೊಂಡು 25 ಮೇ 2011ರ ಒಳಗೆ ಪೂರ್ಣಗೊಳ್ಳಬೇಕಿತ್ತು.

ಹೆಕ್ಟೇರು ಒಂದಕ್ಕೆ ₹ 1,603.67 ದರವನ್ನು ಘೋಷಿಸಿದ್ದ ಮೆ. ಪುಷ್ಪಕ ಏವಿಯೇಷನ್ ಪ್ರೈವೇಟ್ ಲಿಮಿಟೆಡ್(ಪಿಎಪಿಎಲ್) ಟೆಂಡರು–ಸವಾಲು ದಾಖಲೆಗಳ ಜೊತೆ ವಾಯುವೀಯ ಸಿಂಚನ ಕಾರ್ಯಾಚರಣೆಯನ್ನು ಕೈಗೊಳ್ಳಲು ಅಗತ್ಯವಿದ್ದಂತಹ ಕಾರ್ಯಾಚರಣೆ ಮಾಡುವವರ ಪರವಾನಿಗೆಯ ಪ್ರತಿಯನ್ನು ಒದಗಿಸದೇ ಇದ್ದರೂ ಕೂಡ, ಗುತ್ತಿಗೆಯನ್ನು ನೀಡಲಾಯಿತು (ಏಪ್ರಿಲ್ 2011). ಆದ್ದರಿಂದ ಮೆ. ಪಿಎಪಿಎಲ್, ಟೆಂಡರಿನಲ್ಲಿ ನಿರ್ದಿಷ್ಟಗೊಳಿಸಲಾಗಿದ್ದ ಮೂಲ ಅರ್ಹತೆಯನ್ನು ಪೂರೈಸಿರಲಿಲ್ಲವಾದ್ದರಿಂದ, ಅವರ ಟೆಂಡರನ್ನು ತಿರಸ್ಕರಿಸಬೇಕಾಗಿತ್ತು.

[101] ಪರವಾನಿಗೆ ಎಂದರೆ ಭಾರತ ಸರ್ಕಾರದ ನಾಗರಿಕ ವಿಮಾನಯಾನ ಇಲಾಖೆಯ ಮಹಾ ನಿರ್ದೇಶಕರಿಂದ ಪರವಾನಿಗೆ.

ಮೆ. ಪಿಎಪಿಎಲ್, ಅಗತ್ಯವಿದ್ದಂತಹ ಕಾರ್ಯಾಚರಣೆ ಪರವಾನಿಗೆಯನ್ನು ಪಡೆಯುವಲ್ಲಿ ವಿಫಲಗೊಂಡಿದ್ದರಿಂದ ನಿರ್ದಿಷ್ಟಪಡಿಸಲಾಗಿದ್ದ ಸಮಯದ ಒಳಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಿಲ್ಲ, ಇದರಿಂದ ರಬ್ಬರು ಮರಗಳಿಂದ ಎಲೆಗಳು ವಿಪರೀತವಾಗಿ ಉದುರುವಂತಾಯಿತು ಹಾಗೂ ರಬ್ಬರಿನ ಉತ್ಪತ್ತಿಯು ಕಡಿಮೆಯಾಗುವಲ್ಲಿಗೆ ದಾರಿ ಮಾಡಿಕೊಟ್ಟಿತು. ಮಳೆಗಾಲವು ಜೂನ್ 2011ರಲ್ಲಿ ಅದಾಗಲೇ ಪ್ರಾರಂಭಗೊಂಡಿದ್ದಿತಾದ್ದರಿಂದ ಕಂಪನಿಯು ತದನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಕಂಪನಿಯು, ಪಿಎಪಿಎಲ್‌ನ ಭದ್ರತಾ ಠೇವಣಿ ಹಾಗೂ ಮುನ್ನೆಚ್ಚರಿಕೆ ಹಣದ ಠೇವಣಿಗಳ ಒಟ್ಟು ಮೊತ್ತ ₹ 3.36 ಲಕ್ಷವನ್ನು ಮುಟ್ಟುಗೋಲು ಹಾಕಿಕೊಂಡಿತು (ಜೂನ್ 2011/ಫೆಬ್ರವರಿ 2012), ಆದರೆ ₹ 4.40 ಲಕ್ಷ ಮೊತ್ತದಷ್ಟು ದಂಡವನ್ನು ವಸೂಲಾತಿ ಮಾಡಲಾಗಲಿಲ್ಲ, ಅದಕ್ಕಾಗಿ ಕಂಪನಿಯು ನ್ಯಾಯಾಲಯದಲ್ಲಿ ಒಂದು ಸಿವಿಲ್ ದಾವೆಯನ್ನು ಹೂಡಿತು (ನವೆಂಬರ್ 2012).

2011–12 ಸಾಲಿನಲ್ಲಿ ರಬ್ಬರಿನ ಉತ್ಪಾದನೆಯು ಇಳಿಮುಖಗೊಳ್ಳಲು ಕಾರಣಗಳನ್ನು ವಿಶ್ಲೇಷಿಸುವುದಕ್ಕಾಗಿ ನಿರ್ದೇಶಕರುಗಳ ಮಂಡಳಿಯು ಒಂದು ಉಪ–ಸಮಿತಿಯನ್ನು[102] ರಚಿಸುವಂತೆ ನಿರ್ದೇಶಿಸಿತು (ಜುಲೈ 2012). ಉಪ–ಸಮಿತಿಯು, ವಾಯುವೀಯ ಸಿಂಚನವನ್ನು ಕೈಗೊಳ್ಳುವಲ್ಲಿನ ವಿಫಲತೆಯು ರಬ್ಬರಿನ ಉತ್ಪಾದನೆಯಲ್ಲಿ 350 ಮೆಟ್ರಿಕ್ ಟನ್ನುಗಳಷ್ಟು ನಷ್ಟವಾಗಲು ಕಾರಣ ಎಂಬುದಾಗಿ ತಿಳಿಸಿತು (ನವೆಂಬರ್ 2012)

ಪಿಎಪಿಎಲ್, ಕಾಮಗಾರಿಯನ್ನು ನೀಡಲೂ ಸಹ ಅರ್ಹರಿರಲಿಲ್ಲವಾದರೂ ಗುತ್ತಿಗೆಯನ್ನು ನೀಡಲಾಗಿತ್ತಾದ್ದರಿಂದ, ಟೆಂಡರು ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಫೆಬ್ರವರಿ 2013). ಆದ್ದರಿಂದ, ಟೆಂಡರು ದಾಖಲೆಗಳ ಪರಿಶೀಲನೆಯಲ್ಲಿ ಅಗತ್ಯವಿರುವ ಕಾರ್ಯತತ್ಪರತೆಯ ಕೊರತೆಯು ₹ 6.30 ಕೋಟಿ[103] ಮೊತ್ತದಷ್ಟು ಫಸಲು ನಷ್ಟವಾಗುವುದರಲ್ಲಿ ಪರಿಣಮಿಸಿತು.

ಕಾರ್ಯಾಚರಣೆ ಮಾಡುವವರ ಪರವಾನಿಗೆಯನ್ನು ಪಡೆಯುವುದು ಕೇವಲ ಒಂದು ಅಪ್ರಧಾನ ತಾಂತ್ರಿಕ ವಿಷಯವಾಗಿದೆ ಎಂಬುದಾಗಿ ಟೆಂಡರು ಮೌಲ್ಯಮಾಪನದ ಸಮಯದಲ್ಲಿ ವ್ಯವಸ್ಥಾಪನೆಯು ಭಾವಿಸಿತು ಎಂಬುದಾಗಿ ಕಂಪನಿಯು ಉತ್ತರಿಸಿತು (ಮಾರ್ಚ್ 2014). ಆದಾಗ್ಯೂ, ಫಸಲು ಕೊರತೆಗೆ ಅಧಿಕಾರಿಗಳು ಹಾಗೂ ಕ್ಷೇತ್ರ ಸಿಬ್ಬಂದಿ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕಾಗಿದೆ ಎಂಬುದಾಗಿ ನಿರ್ದೇಶಕರುಗಳ ಮಂಡಳಿಯು ತಿಳಿಸಿತ್ತು (ಮಾರ್ಚ್ 2014) ಹಾಗೂ ಕಂಪನಿಯು ಸಂಬಂಧಿತ ಅಧಿಕಾರಿಗಳು/ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮಗಳನ್ನು ಪ್ರಾರಂಭಿಸಿತು (ಸೆಪ್ಟಂಬರ್ 2014).

ವಿಷಯವನ್ನು ಸರ್ಕಾರಕ್ಕೆ ಜೂನ್ 2014ರಲ್ಲಿ ತಿಳಿಸಲಾಯಿತು; ಅದರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವೆಂಬರ್ 2014).

**ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ**

## 3.14 *ಹೆಚ್ಚುವರಿ ವೆಚ್ಚ*

**ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತವು ವಿವಿಧ ವರ್ಷಗಳಲ್ಲಿ ವಿವಿಧ ಷರತ್ತುಗಳು ಮತ್ತು ನಿಬಂಧನೆಗಳೊಂದಿಗೆ ಚಿನ್ನದ ಜರಿಯನ್ನು ಖರೀದಿಸಿದ್ದರಿಂದ, ₹ 6.01 ಕೋಟಿಯಷ್ಟು ಹೆಚ್ಚುವರಿ ವೆಚ್ಚವಾಯಿತು.**

ಚಿನ್ನದ ಜರಿ ರೇಷ್ಮೆ ಸೀರೆಗಳ ತಯಾರಿಕೆಗೆ ಕಚ್ಚಾ ಸಾಮಗ್ರಿಗಳ ಪೈಕಿ ಒಂದಾಗಿದೆ. ಅದು ಚಿನ್ನ, ಬೆಳ್ಳಿ, ತಾಮ್ರ ಹಾಗೂ ರೇಷ್ಮೆಯನ್ನು ವಿವಿಧ ಅನುಪಾತದಲ್ಲಿ[104] ಹೊಂದಿರುತ್ತದೆ. ಕಂಪನಿಯು ಚಿನ್ನದ

[102] ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರು, ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು (ರಬ್ಬರು) ಹಾಗೂ ರಬ್ಬರು ಮಂಡಳಿಯಿಂದ ಓರ್ವ ವಿಜ್ಞಾನಿ.

[103] ರಬ್ಬರಿಗೆ ಆ ಸಮಯದಲ್ಲಿ ಇದ್ದಂತಹ ದರವು ಕಿಗ್ರಾಂ ಒಂದಕ್ಕೆ ₹ 180 ಎಂಬುದಾಗಿ ಪರಿಗಣಿಸಿ, 350 ಮೆ.ಟನ್‌ಗಳಿಗೆ (₹ 180*350 ಮೆ.ಟನ್‌ಗಳು=₹ 6.30 ಕೋಟಿ ).

[104] ಚಿನ್ನದ ಜರಿಯಲ್ಲಿ ಚಿನ್ನ, ಬೆಳ್ಳಿ, ತಾಮ್ರ ಹಾಗೂ ರೇಷ್ಮೆಯ ಪ್ರಮಾಣಕ ಅಡಕವು ಶೇಕಡಾ0.65, ಶೇಕಡಾ 65, ಶೇಕಡಾ 10.35 ಹಾಗೂ ಶೇಕಡಾ 24.

ಜರಿಯನ್ನು ವಾರ್ಷಿಕ ಆಧಾರದ ಮೇರೆಗೆ ಸರಬರಾಜು ಮಾಡುವುದಕ್ಕಾಗಿ ಮುಕ್ತ ಟೆಂಡರಿನ ಮೂಲಕ ಖರೀದಿಸುತ್ತದೆ. 2004–05ಕ್ಕೆ ಮೊದಲು, ಕಂಪನಿಯು ಚಿನ್ನದ ಜರಿಯನ್ನು ತ್ರೈಮಾಸಿಕ ಆಧಾರದ ಮೇರೆಗೆ ಖರೀದಿಸುತ್ತಿತ್ತು. ಕಂಪನಿಯು, ದರ ವ್ಯತ್ಯಯ ಷರತ್ತನ್ನು ಅಳವಡಿಸುವ ಮೂಲಕ ಚಿನ್ನದ ಜರಿಯನ್ನು ಖರೀದಿಸುವುದಕ್ಕಾಗಿ ಟೆಂಡರನ್ನು ಜಾರಿಗೆ ತಂದಿತು (ಮೇ 2005). ಒಡಂಬಡಿಕೆಗಳಲ್ಲಿನ ದರ ವ್ಯತ್ಯಯ ಷರತ್ತು ಇನ್ನಿತರವುಗಳ ಜೊತೆಗೆ, ಕಚ್ಚಾ ಸಾಮಗ್ರಿಗಳ ದರದಲ್ಲಿನ ಹೆಚ್ಚಳದ ಆಧಾರದ ಮೇರೆಗೆ ವ್ಯವಹಾರ ಸಂಬಂಧಿತ ವೆಚ್ಚಗಳು ಹಾಗೂ ಲಾಭದ ಹೆಚ್ಚಳವನ್ನು ಒಳಗೊಂಡಿತ್ತು. ಇದಕ್ಕೆ, ಚಿನ್ನದ ದರದಲ್ಲಿನ ಹೆಚ್ಚಳವು ವೆಚ್ಚಗಳು ಹಾಗೂ ಲಾಭಗಳ ಮೇಲೆ ಹೊರೆಯಾಗುವುದಿಲ್ಲ ಎಂಬ ವಾದದೊಂದಿಗೆ ಲೆಕ್ಕಪರಿಶೋಧನೆಯು ಆಕ್ಷೇಪಣೆಯನ್ನು ವ್ಯಕ್ತಪಡಿಸಿತು.

ಕಂಪನಿಯು, ಸರಬರಾಜುದಾರರಿಂದ ಒತ್ತಡ ಹಾಗೂ ಲೆಕ್ಕಪರಿಶೋಧನೆಯ ಆಕ್ಷೇಪಣೆಯನ್ನು ಉಲ್ಲೇಖಿಸಿ ಟೆಂಡರಿನ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಬದಲಾವಣೆಯನ್ನು ಮಾಡಿತು (ಏಪ್ರಿಲ್ 2012). ಅದರಂತೆಯೇ, ವ್ಯವಹಾರ ಸಂಬಂಧಿತ ವೆಚ್ಚಗಳನ್ನು ಪ್ರತ್ಯೇಕವಾಗಿ ಘೋಷಿಸಿಕೊಳ್ಳಲು ಸರಬರಾಜುದಾರರಿಗೆ ಅನುವು ಮಾಡಿಕೊಡಲಾಗಿತ್ತು.

ನಾವು ಗಮನಿಸಿದ್ದೇನೆಂದರೆ

- ದರ ವ್ಯತ್ಯಯ ಷರತ್ತು ಕಚ್ಚಾ ಸಾಮಗ್ರಿಗಳ ಬೆಲೆಯಲ್ಲಿನ ಹೆಚ್ಚಳವನ್ನು ಪೂರೈಸಬೇಕಾಗಿರುವುದರಿಂದ ಕಚ್ಚಾ ಸಾಮಗ್ರಿಗಳ ಬೆಲೆಯಲ್ಲಿನ ಹೆಚ್ಚಳಕ್ಕೆ ಅನುಗುಣವಾಗಿ ವ್ಯವಹಾರ ಸಂಬಂಧಿತ ವೆಚ್ಚಗಳು ಹಾಗೂ ಲಾಭದ ಹೆಚ್ಚಳಕ್ಕೆ ಷರತ್ತನ್ನು ಸೇರಿಸುವುದು ಸಮರ್ಥನೀಯವಾಗಿರಲಿಲ್ಲ. ಜುಲೈ 2005 ಹಾಗೂ ಮೇ 2012ರ ನಡುವೆ, 90,412 ಮಾರ್ಕ್‌ಗಳಷ್ಟು ಚಿನ್ನದ ಜರಿಯನ್ನು ಹೆಚ್ಚಳಗೊಳಿಸಿದ ಬೆಲೆಗಳಲ್ಲಿ ಸರಬರಾಜು ಮಾಡಲಾಗಿತ್ತು. ಚಿನ್ನ ಮತ್ತು ಬೆಳ್ಳಿಯ ದರದಲ್ಲಿನ ಪ್ರತಿಯೊಂದು ವ್ಯತ್ಯಯಕ್ಕೂ ವ್ಯವಹಾರ ಸಂಬಂಧಿತ ವೆಚ್ಚಗಳು ಹಾಗೂ ಲಾಭವನ್ನು ಹೆಚ್ಚಳಗೊಳಿಸಲು ಅವಕಾಶ ಮಾಡಿಕೊಟ್ಟಿದ್ದ ಕಾರಣ ಭರಿಸಲಾದ ಹೆಚ್ಚುವರಿ ವೆಚ್ಚವು ₹ 1.17 ಕೋಟಿ ಆಗಿತ್ತು.

- 'ತಯಾರಿಕಾ ಹಾಗೂ ನಿರ್ವಹಣಾ ವೆಚ್ಚ'ವನ್ನು ಪ್ರತ್ಯೇಕವಾಗಿ ಘೋಷಿಸುವಂತೆ ಸವಾಲುದಾರರನ್ನು ಕೋರಿ, ಟೆಂಡರಿನ ಷರತ್ತುಗಳು ಮತ್ತು ನಿಬಂಧನೆಗಳನ್ನು ಏಪ್ರಿಲ್ 2012ರಿಂದ ಬದಲಾವಣೆಗೊಳಿಸಿದ್ದರಿಂದ ಚಿನ್ನದ ಜರಿಯ ದರವು ಗಮನಾರ್ಹವಾಗಿ ಹೆಚ್ಚಳವಾಯಿತು. ಸವಾಲುದಾರರು ಪ್ರತಿಯೊಂದು ಭಾಗದ ವೆಚ್ಚಕ್ಕೂ ವಿವರಗಳನ್ನು ನೀಡದೆಯೇ ತಯಾರಿಕೆ, ಸಾಗಾಣಿಕೆ, ನಿರ್ವಹಣೆ, ಇತ್ಯಾದಿಗಳಿಗೆ ಒಟ್ಟಾರೆ ಮೊತ್ತವನ್ನು ಘೋಷಿಸಿದ್ದರು. ದರಗಳನ್ನು ಲೆಕ್ಕಹಾಕುವಲ್ಲಿನ ಈ ಹಿಂದಿನ ಪದ್ಧತಿಗೆ ಹೋಲಿಸಿದಂತೆ ಚಿನ್ನದ ಜರಿಯ ದರದಲ್ಲಿನ ಬದಲಾವಣೆಯ ಪ್ರಭಾವವನ್ನು ನಿರ್ಧಾರಣೆ ಮಾಡದೆಯೇ ದರಗಳನ್ನು ಒಪ್ಪಿಕೊಳ್ಳಲಾಗಿತ್ತು. ಏಪ್ರಿಲ್ 2012ರಲ್ಲಿ ಮುಂದಿಡಲಾದ ಟೆಂಡರು ವಿಚಾರಣೆಗೆ ಪ್ರತಿಯಾಗಿ ನೀಡಲಾದ ತಯಾರಿಕೆ ಹಾಗೂ ನಿರ್ವಹಣಾ ವೆಚ್ಚದ ಕಡೆಗಿನ ಒಟ್ಟಾರೆ ಮೊತ್ತವು ಮಾರ್ಚ್ 2012ರ ದರಗಳಿಗೆ ಹೋಲಿಸಿದಲ್ಲಿ ಅಧಿಕ ಮಟ್ಟದಲ್ಲಿದ್ದಿತು. ಜೂನ್ 2012 ಹಾಗೂ ಜುಲೈ 2014ರ ನಡುವೆ 41,900 ಮಾರ್ಕ್‌ಗಳನ್ನು ಸರಬರಾಜು ಮಾಡಲಾಗಿತ್ತು. ಈ ಪರಿಮಾಣದ ಮೇಲಿನ ಹೆಚ್ಚುವರಿ ವೆಚ್ಚವು ₹ 4.84 ಕೋಟಿ ಆಗಿತ್ತು.

ಸರಬರಾಜುದಾರರ ಸಂಖ್ಯೆಯು ಕೆಲವೇಕೆಲವು ಇತ್ತಾದ್ದರಿಂದ ಸಂಧಾನದ ಬಗ್ಗೆ ನಿಗಮದ ಸಾಮರ್ಥ್ಯವು ಸೀಮಿತವಾಗಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ನವೆಂಬರ್ 2014). ಹೆಚ್ಚಳವು ಮೂಲ ಕಚ್ಚಾ ಸಾಮಗ್ರಿಗಳ ದರದಲ್ಲಿನ ವ್ಯತ್ಯಯದ ಮೇಲೆ ಅವಲಂಬಿತವಾಗಿತ್ತು. 'ತಯಾರಿಕಾ ಹಾಗೂ ನಿರ್ವಹಣಾ ವೆಚ್ಚವನ್ನು ಪ್ರತ್ಯೇಕವಾಗಿ ಘೋಷಿಸುವಂತೆ ಸವಾಲುದಾರರನ್ನು ಕೋರಿ, ತದನಂತರದ ಟೆಂಡರಿನಲ್ಲಿ ಷರತ್ತುಗಳು ಮತ್ತು ನಿಬಂಧನೆಗಳನ್ನು ಬದಲಾವಣೆಗೊಳಿಸಿದ್ದು ವ್ಯವಹಾರ ಸಂಬಂಧಿತ ವೆಚ್ಚಗಳು ಹಾಗೂ ಲಾಭದಲ್ಲಿನ ಹೆಚ್ಚಳಕ್ಕೆ ಮಾರಾಟಗಾರರು ಪದೇಪದೇ ಬೇಡಿಕೆಯನ್ನು ಮುಂದಿಟ್ಟಿದ್ದ ಕಾರಣ ಪ್ರತಿಕೂಲ ಪರಿಣಾಮವನ್ನುಂಟು ಮಾಡಿತು. ವಾಸ್ತವಿಕ ನಷ್ಟಗಳು ಹಾಗೂ ನ್ಯಾಯಸಮ್ಮತ ದರಗಳ ನಿರ್ಧಾರಣೆಗಾಗಿ ಖಾಸಗಿ ಹಾಗೂ ಸಾರ್ವಜನಿಕ ವಲಯಗಳ ತಜ್ಞರ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲಾಗುವುದು ಎಂಬುದಾಗಿಯೂ ಸರ್ಕಾರವು ತಿಳಿಸಿತು.

ಅಪರಂಜಿ ಬಂಗಾರದ (ಬುಲಿಯನ್) ಮಾರುಕಟ್ಟೆಯ ದರ ವ್ಯತ್ಯಯವು ವ್ಯವಹಾರ ಸಂಬಂಧಿತ ವೆಚ್ಚಗಳು ಹಾಗೂ ಲಾಭದ ಮೇಲೆ ಪರಿಣಾಮ ಬೀರಕೂಡದಾದ್ದರಿಂದ ಉತ್ತರವು ಸಮರ್ಥನೀಯವಾಗಿರಲಿಲ್ಲ. ಈ ಷರತ್ತುಗಳ ಬಗ್ಗೆ ಪುನರ್–ಚಿಂತಿಸುವ ಬದಲು, ಕಂಪನಿಯು ದರಗಳ ಮೇಲಿನ ಪ್ರಭಾವವನ್ನು ವಿಶ್ಲೇಷಣೆ ಮಾಡದೆಯೇ ತಯಾರಿಕೆ ಹಾಗೂ ನಿರ್ವಹಣೆಯ ಒಟ್ಟಾರೆ ಮೊತ್ತವನ್ನು ಒಪ್ಪಿಕೊಂಡಿದ್ದರಿಂದ ₹ 6.01 ಕೋಟಿಯಷ್ಟು ಹೆಚ್ಚುವರಿ ವೆಚ್ಚವಾಯಿತು.

**ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ**

### 3.15 *ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ*

**ಆರ್‌ಎಪಿಡಿಆರ್‌ಪಿ ಕಾಮಗಾರಿಗಳಲ್ಲಿ ಪ್ರಕ್ಷೇಪಣೆಗಳನ್ನು ತಪ್ಪಾಗಿ ಮಾಡಿದ್ದರ ಕಾರಣ ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು ₹ 4.28 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಬಡ್ಡಿಯ ಹೊರೆಯನ್ನು ಹೊತ್ತುಕೊಳ್ಳುವಂತಾಯಿತು.**

ಭಾರತ ಸರ್ಕಾರವು XI ನೇ ಯೋಜನೆಯ ಅವಧಿಯಲ್ಲಿ ಮಾರ್ಪಾಡುಗೊಂಡ ಕರಾರು ಮತ್ತು ಷರತ್ತುಗಳೊಂದಿಗೆ ಪುನರ್–ರಚಿತ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮಕ್ಕೆ (ಆರ್‌ಎಪಿಡಿಆರ್‌ಪಿ) ಅನುಮೋದನೆಯನ್ನು ನೀಡಿತು (ಡಿಸೆಂಬರ್ 2008). ಪ್ರಮುಖ ಉದ್ದೇಶವು, 30,000ಕ್ಕಿಂತ ಅಧಿಕ ಜನಸಂಖ್ಯೆಯಿರುವ ನಗರ ಪ್ರದೇಶಗಳು, ಪಟ್ಟಣಗಳನ್ನು, ವ್ಯಾಪಿಸಿದಂತೆ ಒಟ್ಟಾರೆ ತಾಂತ್ರಿಕ ಹಾಗೂ ವಾಣಿಜ್ಯ ನಷ್ಟಗಳನ್ನು ಐದು ವರ್ಷಗಳ ಅವಧಿಯಲ್ಲಿ ಶೇಕಡಾ 15ಕ್ಕಿಂತ ಕಡಿಮೆ ಪ್ರಮಾಣಕ್ಕೆ ತಗ್ಗಿಸುವುದಾಗಿತ್ತು.

ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು (ಕಂಪನಿ) ₹ 278.36 ಕೋಟಿ ಮೊತ್ತದ ಯೋಜನಾ ವೆಚ್ಚದೊಂದಿಗೆ 31 ಪಟ್ಟಣಗಳನ್ನು ವ್ಯಾಪಿಸಿದಂತೆ ಒಂದು ಸವಿವರ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಿತು (ಏಪ್ರಿಲ್ 2010), ಅದಕ್ಕೆ ಆರ್‌ಎಪಿಡಿಆರ್‌ಪಿ ನಿರ್ವಹಣಾ ಸಮಿತಿಯು ಅನುಮೋದನೆ ನೀಡಿತು (ಜೂನ್ 2010). ಕಂಪನಿಯು, ವಿದ್ಯುಚ್ಛಕ್ತಿ ಹಣಕಾಸು ನಿಗಮದಿಂದ (ಪಿಎಫ್‌ಸಿ) ₹ 41.75 ಕೋಟಿ ಮೊತ್ತದಷ್ಟು ಸಾಲವನ್ನು ಉಪಯೋಗಿಸಿಕೊಂಡಿತು (ಮೇ 2011).

ವಿದ್ಯುತ್ ಮಂತ್ರಾಲಯದಿಂದ ನಾಮನಿರ್ದೇಶಿತಗೊಂಡಿದ್ದ ಒಂದು ಮೂರನೇ ವ್ಯಕ್ತಿ ಸ್ವತಂತ್ರ ಸಂಸ್ಥೆಯಾದ, ಕೇಂದ್ರ ವಿದ್ಯುತ್ ಸಂಶೋಧನಾ ಸಂಸ್ಥೆಯು (ಸಿಪಿಆರ್‌ಐ) ಶೇಕಡಾ 15ಕ್ಕಿಂತಲೂ ಕಡಿಮೆ ಪ್ರಮಾಣದ ಎಟಿ ಅಂಡ್ ಸಿ ನಷ್ಟಗಳನ್ನು ಹೊಂದಿದ್ದ ಆರು ಪಟ್ಟಣಗಳನ್ನೂ ಕೂಡ ಸವಿವರ ಯೋಜನಾ ವರದಿಯಲ್ಲಿ ಸೇರಿಸಲಾಗಿತ್ತು ಎಂಬುದನ್ನು ಗಮನಿಸಿತು (ಡಿಸೆಂಬರ್ 2011). ಆದ್ದರಿಂದ ಈ ಆರು ಅನರ್ಹ ಪಟ್ಟಣಗಳಿಗೆ ಸಂಬಂಧಿಸಿದಂತೆ ₹ 162.40 ಕೋಟಿ ಅಂದಾಜು ಮೊತ್ತವನ್ನು ಕಳೆದನಂತರ ಯೋಜನಾ ಅಂದಾಜನ್ನು ₹ 115.96 ಕೋಟಿಗೆ ಇಳಿಸಲಾಯಿತು. ಪಟ್ಟಣವಾರು ಪರಿಮಾಣಗಳನ್ನು ಕ್ರೋಢೀಕರಿಸುವ ವೇಳೆಯಲ್ಲಿ, ಸವಿವರ ಯೋಜನಾ ವರದಿಯ ಪರಿಮಾಣಗಳು ಬಹಳ ಹೆಚ್ಚಾಗಿ ಕಂಡುಬಂದಿದ್ದರಿಂದ, 24 ಪಟ್ಟಣಗಳಿಗೆ[105] ಅಂದಾಜು ಮಾಡಲ್ಪಟ್ಟ ಯೋಜನಾ ವೆಚ್ಚವನ್ನು ₹ 56.53 ಕೋಟಿಗೆ ಮತ್ತಷ್ಟು ಇಳಿಸಲಾಯಿತು.

ಪಿಎಫ್‌ಸಿಯು ಅನರ್ಹ ಪಟ್ಟಣಗಳಿಗಾಗಿ ತೆಗೆದುಕೊಂಡಿದ್ದ ಸಾಲವನ್ನು ಬಡ್ಡಿಯ ಜೊತೆ ಮರುಪಾವತಿಸುವಂತೆ ಕಂಪನಿಗೆ ನಿರ್ದೇಶಿಸಿತು (ಆಗಸ್ಟ್ 2012). ಕಂಪನಿಯು ಆರು ಪಟ್ಟಣಗಳಿಗೆ ಸಂಬಂಧಿಸಿದ ₹ 24.36 ಕೋಟಿ ಅಸಲು ಮೊತ್ತವನ್ನು ಮರುಪಾವತಿಸಿತು (ನವೆಂಬರ್ 2012) ಹಾಗೂ ಅಲ್ಲದೇ ₹ 3.41 ಕೋಟಿ ಬಡ್ಡಿಯನ್ನು ಪಾವತಿಸಿತು (ಫೆಬ್ರವರಿ 2013). ಮುಂದುವರೆದು,

[105] ಹುಬ್ಬಳ್ಳಿ–ಧಾರವಾಡ ಹಾಗೂ ರಬಕವಿ–ಬನಹಟ್ಟಿ ಪಟ್ಟಣಗಳನ್ನು ಸವಿವರ ಯೋಜನಾ ವರದಿಯಲ್ಲಿ ಪರಿಗಣಿಸಿದ್ದಂತೆ ನಾಲ್ಕಕ್ಕೆ ಬದಲಾಗಿ ಎರಡು ಪಟ್ಟಣಗಳು ಎಂಬುದಾಗಿ ಪರಿಗಣಿಸಿ 31 ಪಟ್ಟಣಗಳನ್ನು 29ಕ್ಕೆ ಪರಿಷ್ಕರಿಸಲಾಯಿತು. ಐದು ಅನರ್ಹ ಪಟ್ಟಣಗಳನ್ನು (ಹುಬ್ಬಳ್ಳಿ–ಧಾರವಾಡವೂ ಸೇರಿದಂತೆ) ತಿರಸ್ಕರಿಸಿದನಂತರ ಪಟ್ಟಣಗಳ ಒಟ್ಟು ಸಂಖ್ಯೆಯು 24 ಆಯಿತು.

ಪಿಎಫ್‌ಸಿಯು ₹ 8.91 ಕೋಟಿ ಮೊತ್ತದಷ್ಟು ಸಾಲದ ಮೊತ್ತವನ್ನು ಬಾಕಿ ಇರುವ ₹ 2.42 ಕೋಟಿ ಬಡ್ಡಿಯ ಜೊತೆ ಮರುಪಾವತಿಸುವಂತೆ ಕಂಪನಿಯನ್ನು ಕೋರಿತು (ಏಪ್ರಿಲ್ 2014).

ನಾವು ಗಮನಿಸಿದ್ದೇನೆಂದರೆ

- ಆರ್‌ಎಪಿಡಿಆರ್‌ಪಿ ಮಾರ್ಗಸೂಚಿಗಳ ಪ್ರಕಾರ, ನಿರ್ದಿಷ್ಟ ಸೂತ್ರದಂತೆ[106] ಎಟಿ ಆಂಡ್ ಸಿ ನಷ್ಟಗಳನ್ನು ಲೆಕ್ಕಹಾಕುವ ವೇಳೆಯಲ್ಲಿ ಮೂಲ ವರ್ಷದ ಮೂರು ಬಿಲ್ಲುಗಳನ್ನು ಮಾಡುವ ಆವರ್ತದ ನಷ್ಟಗಳನ್ನು ಪರಿಗಣಿಸಬೇಕಿತ್ತು. ಆದರೆ, ಕಂಪನಿಯು ಮೂರು ಬಿಲ್ಲುಗಳನ್ನು ಮಾಡುವ ಆವರ್ತದ ಬದಲಾಗಿ ಸಂಪೂರ್ಣ ವರ್ಷದ ಬಿಲ್ಲುಗಳನ್ನು ಮಾಡುವಿಕೆಯನ್ನುಪರಿಗಣಿಸಿತು. ನಿರ್ದಿಷ್ಟ ಕಾರ್ಯವಿಧಾನದಿಂದ ಮಾರ್ಗಾಂತರ ಮಾಡಿದ್ದಕ್ಕೆ ಸಮರ್ಥನೆಯು ದಾಖಲೆಗಳಲ್ಲಿ ಲಭ್ಯವಿರಲಿಲ್ಲ.

- ಎಟಿ ಅಂಡ್ ಸಿ ನಷ್ಟವು ಶೇಕಡಾ 15ಕ್ಕಿಂತಲೂ ಕಡಿಮೆ ಇರುವ ಆರು ಪಟ್ಟಣಗಳನ್ನು ತಪ್ಪಾಗಿ ಪ್ರಕ್ಷೇಪಿಸಿದ್ದು ಹಾಗೂ ಉಬ್ಬಿಸಿದ ಅಂದಾಜುಗಳು ₹ 33.27 ಕೋಟಿ ಮೊತ್ತದಷ್ಟು ಸಾಲದ ಮೊತ್ತವನ್ನು ಮರುಪಾವತಿಸಿದ್ದರ ಮೇಲೆ ₹ 4.28 ಕೋಟಿ[107] ತಪ್ಪಿಸಬಹುದಾಗಿದ್ದ ಬಡ್ಡಿ ಬಾಕಿಗಳಲ್ಲಿ ಪರಿಗಣಿಸಿತು.

ಸರ್ಕಾರವು ಈ ಕೆಳಗಿನಂತೆ ಉತ್ತರಿಸಿತು (ಸೆಪ್ಟಂಬರ್ 2014) :

(i) ಎಟಿ ಅಂಟ್ ಸಿ ನಷ್ಟಗಳನ್ನು ವಿವಿಧ ಕಾಲಿಕ ಬಳಕೆ ಹಾಗೂ ಮಾರಾಟಗಳನ್ನು ಪರಿಗಣಿಸುವ ಮೂಲಕ ವಾಸ್ತವಿಕ ಒಟ್ಟಾರೆ ಮೌಲ್ಯವನ್ನು ಪಡೆಯುವುದಕ್ಕಾಗಿ ವಾರ್ಷಿಕ ಆಧಾರದ ಮೇರೆಗೆ ಲೆಕ್ಕಹಾಕಲಾಗಿತ್ತು.

(ii) ಅಂದಾಜುಗಳನ್ನು ಆಗ ಇದ್ದಂತಹ ವಿದ್ಯುತ್ ಜಾಲದ ಹಾಗೂ 2009 ಸಾಲಿನಲ್ಲಿನ ಅಗತ್ಯತೆಗಳ ಆಧಾರದ ಮೇರೆಗೆ ತಯಾರಿಸಲಾಗಿತ್ತು. ಎಟಿ ಅಂಟ್ ಸಿ ನಷ್ಟಗಳನ್ನು ಕಡಿಮೆಗೊಳಿಸುವುದಕ್ಕಾಗಿ ಪ್ರತೀ ಪಟ್ಟಣದಲ್ಲಿ ತೆಗೆದುಕೊಳ್ಳಲಾದ ಕ್ರಮದ ಆಧಾರದ ಮೇರೆಗೆ, ಕಾಮಗಾರಿಗಳು ಪುನರಾವರ್ತನೆಯಾಗುವುದನ್ನು ತಪ್ಪಿಸುವುದಕ್ಕಾಗಿ ಅಂದಾಜು ಮಾಡಲ್ಪಟ್ಟ ವೆಚ್ಚವನ್ನು ಪರಿಷ್ಕರಿಸಲಾಯಿತು.

ಉತ್ತರವು ಈ ಕೆಳಗಿನ ವಾಸ್ತವಾಂಶಗಳನ್ನು ದೃಢಪಡಿಸುತ್ತದೆ:

(i) ಕಂಪನಿಯು ಎಟಿ ಅಂಡ್ ಸಿ ನಷ್ಟಗಳನ್ನು ಲೆಕ್ಕಹಾಕುವುದಕ್ಕಾಗಿ ಆರ್‌ಎಪಿಡಿಆರ್‌ಪಿ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಿಲ್ಲ.

(ii) ಕಂಪನಿಯು ವಿದ್ಯುತ್‌ಜಾಲವನ್ನು ಉತ್ತಮಗೊಳಿಸುವುದಕ್ಕಾಗಿ ಹಾಗೂ ಎಟಿ ಅಂಡ್ ಸಿ ನಷ್ಟಗಳನ್ನು ಕಡಿಮೆಗೊಳಿಸುವುದಕ್ಕಾಗಿ ತೆಗೆದುಕೊಳ್ಳಲಾದ ನಿಯತ ಕ್ರಮವನ್ನು ಅಂದಾಜನ್ನು ತಯಾರಿಸುವ ವೇಳೆಯಲ್ಲಿ ಪರಿಗಣಿಸಲಿಲ್ಲ ಹಾಗೂ ಪಟ್ಟಣವಾರು ಪರಿಮಾಣಗಳನ್ನು ಕ್ರೋಢೀಕರಿಸುವ ವೇಳೆಯಲ್ಲಿಯಷ್ಟೇ ವಿಪರೀತವಾದ ವ್ಯತ್ಯಯಗಳನ್ನು ಗಮನಿಸಿತು.

ಈ ರೀತಿಯಾಗಿ, ಎಟಿ ಅಂಡ್ ಸಿ ನಷ್ಟಗಳನ್ನು ಲೆಕ್ಕಹಾಕುವ ವೇಳೆಯಲ್ಲಿ ಆರ್‌ಎಪಿಡಿಆರ್‌ಪಿ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳದಿದ್ದುದು ಹಾಗೂ ವಾಸ್ತವಿಕ ಅಂದಾಜುಗಳನ್ನು ತಯಾರಿಸುವಲ್ಲಿನ ವಿಫಲತೆಯು ₹ 4.28 ಕೋಟಿ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು, ಅದಕ್ಕಾಗಿ ಸವಿವರ ಯೋಜನಾ ವರದಿಯನ್ನು ತಯಾರಿಸುವ ವೇಳೆಯಲ್ಲಿ ನಿರ್ದಿಷ್ಟ

[106] ಎಟಿ ಆಂಡ್ ಸಿ ನಷ್ಟ = 1 – (ಬಿಲ್ಲು ಮಾಡುವಿಕೆಯ ದಕ್ಷತೆ X ಸಂಗ್ರಹಣಾ ದಕ್ಷತೆ) X 100 ಬಿಲ್ಲು ಮಾಡುವ ದಕ್ಷತೆಯನ್ನು ಒಟ್ಟಾರೆ ಒಳಬರುವಿಕೆಯನ್ನು ಮಾರಾಟ ಮಾಡಲಾದ ಒಟ್ಟಾರೆ ಯೂನಿಟ್ಟುಗಳಿಂದ ವಿಭಜಿಸುವ ಮೂಲಕ ಕಂಡುಕೊಂಡಿದ್ದು ಹಾಗೂ ಸಂಗ್ರಹಣಾ ದಕ್ಷತೆಯನ್ನು ಬಿಲ್ಲು ಮಾಡಲ್ಪಟ್ಟ ಮೊತ್ತವನ್ನು ಸಂಗ್ರಹಿಸಲಾದ ವರಮಾನದಿಂದ ವಿಭಜಿಸುವ ಮೂಲಕ ಲೆಕ್ಕಹಾಕಲಾಗಿದೆ.

[107] ₹ 5.83 ಕೋಟಿ - ₹ 1.55 ಕೋಟಿ, ಆರ್‌ಎಪಿಡಿಆರ್‌ಪಿ ಹಣಕಾಸಿನ ಮೇಲೆ ಗಳಿಸಿದ ಬಡ್ಡಿ.

ಮಾನದಂಡಗಳನ್ನು ಅನುಸರಿಸದೇ ಇದ್ದಂತಹ ಸಂಬಂಧಿತ ವ್ಯಕ್ತಿಗಳ ವಿರುದ್ಧ ಜವಾಬ್ದಾರಿಯನ್ನು ನಿಗದಿಗೊಳಿಸಬೇಕು.

**ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ ನಿಯಮಿತ**

### 3.16 *ನಿಷ್ಫಲ ಹೂಡಿಕೆ*

**ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ ನಿಯಮವು ₹ 33.50 ಲಕ್ಷ ವೆಚ್ಚದಲ್ಲಿ ಮೌಲ್ಡೆಡ್ ಟ್ರೇಗಳನ್ನು ತಯಾರಿಸುವುದಕ್ಕಾಗಿ ಒಂದು ಉತ್ಪಾದನಾ ಘಟಕವನ್ನು ಸ್ಥಾಪಿಸಿತು. ಕಂಪನಿಯು ಅಂತಹ ಉತ್ಪನ್ನಗಳನ್ನು ಈ ಹಿಂದೆ ಮಾರಾಟ ಮಾಡಲು ಸಾಧ್ಯವಾಗಿರಲಿಲ್ಲ ಎಂಬ ವಾಸ್ತವಾಂಶದ ಹೊರತಾಗಿಯೂ, ಮಾರುಕಟ್ಟೆ ಸಮೀಕ್ಷೆಯನ್ನು ನಡೆಸದೆಯೇ ಯೋಜನೆಗೆ ಅನುಮೋದನೆಯನ್ನು ನೀಡಲಾಗಿತ್ತು ಹಾಗೂ ಅದನ್ನು ಕಾರ್ಯಗತಗೊಳಿಸಲಾಗಿತ್ತು. ನಾಲ್ಕು ವರ್ಷಗಳು ಕಳೆದನಂತರವೂ ಉತ್ಪತ್ತಿಯ ನಿಕೃಷ್ಟ ಮಟ್ಟದ ಮಾರಾಟವು ಹೂಡಿಕೆಯನ್ನು ನಿಷ್ಫಲಗೊಳಿಸಿತು.**

ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ ನಿಯಮಿತವು (ಕಂಪನಿ) ಹಾಸನ ಜಿಲ್ಲೆಯ ಗಂಡಸಿಯಲ್ಲಿ ನೀಡಲ್–ಫೆಲ್ಟ್[108] ಹಾಗೂ ಮೌಲ್ಡೆಡ್ ಟ್ರೇ ಘಟಕವನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತು (ಜುಲೈ 2007). ಕಂಪನಿಯು ನಾರು ಮೌಲ್ಡೆಡ್ ಟ್ರೇ ಯಂತ್ರದ ಸರಬರಾಜು, ಸ್ಥಾಪನೆ, ಕಾರ್ಯಾರಂಭಗೊಳಿಸುವಿಕೆಗಾಗಿ ಟೆಂಡರುಗಳನ್ನು ಆಹ್ವಾನಿಸಿತು (ನವೆಂಬರ್ 2007) ಹಾಗೂ ಗುತ್ತಿಗೆಯನ್ನು ಮೆ. 2ಎಂ ಎಂಟರ್‌ಪ್ರೈಸಸ್ (ಗುತ್ತಿಗೆದಾರರು), ಇವರಿಗೆ ₹ 33.50 ಲಕ್ಷ ಮೌಲ್ಯಕ್ಕೆ ನೀಡಲಾಯಿತು (ಫೆಬ್ರವರಿ 2008). ಕರ್ನಾಟಕ ಸರ್ಕಾರವು ಮೊತ್ತವನ್ನು ಆಗಸ್ಟ್ 2007ರಲ್ಲಿ ಹಾಗೂ ಫೆಬ್ರವರಿ 2008ರಲ್ಲಿ ಬಿಡುಗಡೆಗೊಳಿಸಿತು. ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದರು ಹಾಗೂ ಪರೀಕ್ಷಾ ಉತ್ಪಾದನೆಯನ್ನು ಜನವರಿ 2009ರಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಘಟಕವು ಮಾರ್ಚ್ 2009ರಿಂದಲೂ ಕಾರ್ಯಸ್ಥಗಿತವಾಗಿತ್ತು ಎಂಬುದನ್ನು ನಾವು ಗಮನಿಸಿದ್ದೆವು (ಫೆಬ್ರವರಿ 2011). ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ಪ್ರತಿಕ್ರಿಯೆ ನೀಡಿದ ವ್ಯವಸ್ಥಾಪನೆಯು, ಕಚ್ಚಾ ಸಾಮಗ್ರಿಗಳು ಲಭ್ಯವಿರದ ಕಾರಣ ಹಾಗೂ ಕಾರ್ಯೋಪಯುಕ್ತ ಬಂಡವಾಳದ ಕೊರತೆಯಿಂದ ಉತ್ಪಾದನಾ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ ಎಂಬುದಾಗಿ ತಿಳಿಸಿತು (ಮೇ 2011). ಯಂತ್ರವನ್ನು ಟ್ರೇಗಳು ಮತ್ತು ನಾರು, ನೂಲು, ಮ್ಯಾಟುಗಳು, ಸುರುಳೀ ಹಗ್ಗ, ಕೋಕೋ ಪೋಲುಗಳು, ನೇತು ಹಾಕುವ ಬುಟ್ಟಿಗಳು ಇತ್ಯಾದಿ ಇತರೇ ಉತ್ಪನ್ನಗಳನ್ನು ತಯಾರಿಸಲು ಬಳಸಿಕೊಳ್ಳಲಾಗುವುದು ಹಾಗೂ ಘಟಕವನ್ನು ಲಾಭದಾಯಕವನ್ನಾಗಿ ಮತ್ತು ಕಾರ್ಯಾಸಾಧ್ಯವನ್ನಾಗಿ ಮಾಡುವಲ್ಲಿ ಕಂಪನಿಯು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದೆ ಎಂಬುದಾಗಿಯೂ ವ್ಯವಸ್ಥಾಪನೆಯು ತಿಳಿಸಿತು.

ಘಟಕದ ಕಾರ್ಯಾಚರಣೆಯನ್ನು ಮಾರ್ಚ್ 2011ರನಂತರದ ಅವಧಿಗೆ ಪುನರ್–ನಿರ್ಧಾರಣೆ ಮಾಡಲಾಯಿತು (ಫೆಬ್ರವರಿ 2014). ಘಟಕಗಳು ಆಗಸ್ಟ್ ನಿಂದ ಡಿಸೆಂಬರ್ 2011 ಹಾಗೂ ಪುನ: ಮೇ ಯಿಂದ ಸೆಪ್ಟೆಂಬರ್ 2013ರ ಅವಧಿಯಲ್ಲಿ ಕಾರ್ಯಸ್ಥಗಿತವಾಗಿದ್ದವು, ಅದಕ್ಕೆ ಯಂತ್ರದಲ್ಲಿನ ಲೋಪದೋಷಗಳು ಕಾರಣವಾಗಿತ್ತು ಎಂಬುದನ್ನು ನಾವು ಗಮನಿಸಿದೆವು. ಮೌಲ್ಡೆಡ್ ಟ್ರೇಗಳು ಹಾಗೂ ಕೋಸ್ಟರ್‌ಗಳ ಉತ್ಪಾದನೆಯು ಅಕ್ಟೋಬರ್ 2013ರಲ್ಲಿ ಪ್ರಾರಂಭವಾಗಿತ್ತು. ಆದರೆ ಕಂಪನಿಯು ನಾರು, ಮ್ಯಾಟುಗಳು, ಇತ್ಯಾದಿಗಳಂತಹ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉತ್ಪನ್ನಗಳನ್ನು ಹೆಚ್ಚುಹೆಚ್ಚಾಗಿ ಉತ್ಪತ್ತಿ ಮಾಡಲು ಯೋಜಿಸಿರುವುದಾಗಿ ಮೇ 2011 ರ ಉತ್ತರದಲ್ಲಿ ತಿಳಿಸಿದ್ದಂತೆ ಯಾವುದೇ ಪ್ರಯತ್ನಗಳನ್ನು ಮಾಡಿರಲಿಲ್ಲ.

---

[108] ತೆಂಗಿನ ನಾರನ್ನು (ಸಿಪ್ಪೆಯಿಂದ ಮಾಡಿದ) ಮೊದಲು ಸ್ವಚ್ಛಗೊಳಿಸಬೇಕು ಮತ್ತು ಅದನ್ನು ಬಲೆಯ ಮಾದರಿಯಲ್ಲಿ ಮಾಡಬೇಕು. ಬಲೆಗಳನ್ನು ಸೂಜಿಗಳಿಂದ ಚುಚ್ಚಿ ಹಾಳೆಯ ಮಾದರಿಯಲ್ಲಿ ಮಾಡುವುದನ್ನು 'ನೀಡಲ್ ಫೆಲ್ಟ್' ಎಂದು ಕರೆಯುತ್ತಾರೆ, ಇದನ್ನು ಮೌಲ್ಡೆಡ್ ಟ್ರೇಗಳನ್ನು ತಯಾರಿಸುವಲ್ಲಿ ಬಳಸಲಾಗುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ವಾಸ್ತವಿಕವಾಗಿ ಆಗಿದ್ದಂತಹ ಮಾರಾಟಗಳು ಯೋಜನಾ ವರದಿಯಲ್ಲಿ ಪ್ರಕ್ಷೇಪಿಸಲಾಗಿದ್ದಂತಹ ಮಾರಾಟಗಳ ಶೇಕಡಾ ಎರಡರಷ್ಟು (₹ 2.42 ಲಕ್ಷ) ಮಾತ್ರ (ಪಕ್ಕದಲ್ಲಿರುವ ಕೋಷ್ಟಕವನ್ನು ಗಮನಿಸುವುದು).

**ಕೋಷ್ಟಕ 3.4: ಪ್ರಕ್ಷೇಪಿತ ಹಾಗೂ ವಾಸ್ತವಿಕ ಮಾರಾಟಗಳು**

**(₹ ಲಕ್ಷದಲ್ಲಿ)**

| ವರ್ಷ | ಪ್ರಕ್ಷೇಪಿತ ಮಾರಾಟಗಳು | ವಾಸ್ತವಿಕ ಮಾರಾಟಗಳು (ಶೇಕಡಾವಾರು) |
|---|---|---|
| 2010-11 | 20.40 | 0.05 (0.25) |
| 2011-12 | 24.48 | 0.06 (0.25) |
| 2012-13 | 28.56 | 0.93 (3.26) |
| 2013-14 | 32.64 | 1.24 (3.80) |
| 2014-15 (ಜುಲೈ2014ರವರೆಗೆ) | 11.56 | 0.14 (1.21) |
| ಒಟ್ಟು | 117.64 | 2.42 (2.06) |

ಯೋಜನೆಯನ್ನು ಸ್ಥಾಪಿಸುವುದಕ್ಕೂ ಮೊದಲು ಕಂಪನಿಯು ₹ 1.48 ಲಕ್ಷ ಮೌಲ್ಯದ ಮೌಲ್ಡೆಡ್ ಟ್ರೇಗಳನ್ನು ಇತರೆ ಸಂಸ್ಥೆಗಳಿಂದ ಖರೀದಿಸಿತ್ತು (2007–08). ಅದರ ಪೈಕಿ ₹ 0.27 ಲಕ್ಷ ಮೌಲ್ಯದ ಟ್ರೇಗಳು ಮಾರಾಟವಾಗದೇ ಉಳಿದಿದ್ದವು (ಫೆಬ್ರವರಿ 2011) ಎಂಬುದನ್ನು ನಾವು ಗಮನಿಸಿದೆವು. ಉತ್ಪನ್ನಕ್ಕೆ (ಪ್ಲಾಸ್ಟಿಕ್ ಟ್ರೇಗಳಿಗೆ ಬದಲಿ ಉತ್ಪನ್ನವಾಗಿ) ಮಾರುಕಟ್ಟೆ ಸಮೀಕ್ಷೆಗಳನ್ನು ನಡೆಸಿರಲಿಲ್ಲ. ಸುಸ್ಪಷ್ಟವಾಗಿ, ಯೋಜನಾ ವರದಿಯಲ್ಲಿ ಪ್ರಕ್ಷೇಪಿಸಲಾಗಿದ್ದ ಮಾರಾಟಗಳು ವಾಸ್ತವಿಕವಾಗಿರಲಿಲ್ಲವಾದ್ದರಿಂದ ಯೋಜನೆಯನ್ನು ದೋಷಯುಕ್ತವಾಗಿ ಪ್ರಾರಂಭಿಸಲಾಗಿತ್ತು. ಇದು ₹ 33.50 ಲಕ್ಷ ಮೊತ್ತದಷ್ಟು ನಿಷ್ಫಲ ಹೂಡಿಕೆಯಲ್ಲಿ ಪರಿಣಮಿಸಿತು.

ಟ್ರೇ ಘಟಕವನ್ನು ಅದರ ಸಂಪೂರ್ಣ ಸಾಮರ್ಥ್ಯದಲ್ಲಿ ನಿರತವಾಗಿರುವಂತೆ ಮಾಡಲು ಕಚ್ಚಾ ಸಾಮಗ್ರಿಗಳ ಕೊರತೆಯಿರಲಿಲ್ಲ ಹಾಗೂ ಅವಿರತ ಉತ್ಪಾದನೆಗೆ ಅಗತ್ಯವಿದ್ದಂತೆಲ್ಲಾ ಕಾರ್ಯೋಪಯುಕ್ತ ಬಂಡವಾಳವನ್ನು ಕರ್ನಾಟಕ ಸರ್ಕಾರವು ಮಂಜೂರಾತಿಗೊಳಿಸಿತ್ತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2014). ಸೃಷ್ಟಿಸಲಾದ ಆಸ್ತಿಯನ್ನು ಬಳಸಿಕೊಳ್ಳಲಾಗಿತ್ತು ಹಾಗೂ ಮೌಲ್ಡೆಡ್ ಟ್ರೇ ಘಟಕದ ವಹಿವಾಟನ್ನು ಅಧಿಕಗೊಳಿಸಲು ಮಾರುಕಟ್ಟೆ ಆಧಾರವನ್ನು ವಿಸ್ತೃತಗೊಳಿಸಲು ಯೋಜಿಸಲಾಗಿದೆ ಎಂಬುದಾಗಿಯೂ ಉತ್ತರಿಸಿತು.

ಅದರ ಮಾರಾಟಗಳ ದಾಖಲೆಯಿಂದ ಗಮನಿಸಿದಂತೆ, ಸರ್ಕಾರದ ಉತ್ತರವು ಒಪ್ಪುವಂತಿಲ್ಲ. ಅಲ್ಲದೇ, ಕಂಪನಿಯು ಅದರ ಉತ್ಪನ್ನಗಳನ್ನು ಪರಿಚಯಿಸಿದ ದಿನಾಂಕದಿಂದಲೂ ಅದರ ವ್ಯತ್ಯಯಗೊಳ್ಳುವ ವೆಚ್ಚದ ಮೊತ್ತ ₹ 3.70 ಲಕ್ಷವನ್ನೂ ವಸೂಲಾತಿ ಮಾಡಲಾಗಿಲ್ಲ (ಜುಲೈ 2014ರವರೆಗೆ). ಆದ್ದರಿಂದ, ಉತ್ಪನ್ನಗಳಿಗೆ ಮಾರುಕಟ್ಟೆ ಬೇಡಿಕೆಯನ್ನು ನಿರ್ಧಾರಣೆ ಮಾಡುವಲ್ಲಿನ ಕಂಪನಿಯ ವಿಫಲತೆ, ದೋಷಯುಕ್ತವಾಗಿ ಪ್ರಾರಂಭಿಸಲಾಗಿದ್ದ ಯೋಜನೆಯು ₹ 33.50 ಲಕ್ಷ ಮೊತ್ತವನ್ನು ಬಹಳಷ್ಟು ಮಟ್ಟಿಗೆ ನಿಷ್ಫಲ ಹೂಡಿಕೆಯನ್ನಾಗಿ ಮಾಡಿತು.

**ಶಾಸನಬದ್ಧ ನಿಗಮಗಳು**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

### 3.17 *ಹೆಚ್ಚುವರಿ ಹೊರೆ*

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವಿಭಾಗೀಯ ಕಚೇರಿಯನ್ನು ರಾಮನಗರಕ್ಕೆ ಸ್ಥಳಾಂತರಿಸಲು ತಾನು ತೆಗೆದುಕೊಂಡ ನಿರ್ಣಯದ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುವಲ್ಲಿ ಮಾಡಿದ ವಿಳಂಬವು ₹ 80.28 ಲಕ್ಷ ಮೊತ್ತದಷ್ಟು ಹೆಚ್ಚುವರಿ ಹೊರೆಯನ್ನು ಹೊರುವಲ್ಲಿ ಪರಿಣಮಿಸಿತು.**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು (ನಿಗಮ) ಬೆಂಗಳೂರಿನ ದೀಪಾಂಜಲಿನಗರದಲ್ಲಿರುವ ತನ್ನ ಬೆಂಗಳೂರು ಗ್ರಾಮಾಂತರ ವಿಭಾಗವನ್ನು ಹೊಸದಾಗಿ ರಚನೆಯಾದ ಜಿಲ್ಲೆಯಾಗಿದ್ದ ರಾಮನಗರಕ್ಕೆ ಸ್ಥಳಾಂತರಿಸಲು ನಿರ್ಣಯಿಸಿತು (ಮಾರ್ಚ್ 2010) ಮತ್ತು ಆ ವಿಭಾಗಕ್ಕೆ ಮಾರ್ಚ್ 2010ರಿಂದ ರಾಮನಗರ ವಿಭಾಗ ಎಂಬುದಾಗಿ ಪುನರ್–ನಾಮಕರಣ ಮಾಡಲಾಯಿತು. ಬೆಂಗಳೂರು

ಗ್ರಾಮಾಂತರ ವಿಭಾಗವು ಒಂದು ವಿಭಾಗೀಯ ಕಚೇರಿ, ಕಾರ್ಯಾಗಾರ, ಉಗ್ರಾಣಗಳು ಹಾಗೂ ಆರು ಬಸ್ಸು ಡಿಪೋಗಳನ್ನು[109] ಒಳಗೊಂಡಿದೆ.

ಕಾರ್ಯಾಗಾರ ಮತ್ತು ಉಗ್ರಾಣಗಳನ್ನು ರಾಮನಗರಕ್ಕೆ ಏಪ್ರಿಲ್ 2010ರಲ್ಲಿ ಸ್ಥಳಾಂತರಿಸಲಾಯಿತು. ಆದರೆ ವಿಭಾಗೀಯ ಕಚೇರಿಯನ್ನು ನಾಲ್ಕು ವರ್ಷಗಳು ಕಳೆದನಂತರವೂ ಇನ್ನೂ ಸ್ಥಳಾಂತರಿಸಬೇಕಾಗಿದೆ (ಆಗಸ್ಟ್ 2014). ನಿಗಮವು ರಾಮನಗರದಲ್ಲಿ ತನ್ನದೇ ಆದಂತಹ ಸ್ವಂತ ಬಸ್ಸು ನಿಲ್ದಾಣವನ್ನು ಹೊಂದಿದೆ, ಅಲ್ಲಿ ಅದು ವಿಭಾಗೀಯ ಕಚೇರಿಯನ್ನು ನಿರ್ಮಿಸಬಹುದಿತ್ತು, ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

ಕಾರ್ಯಾಗಾರಗಳು ಸಾಮರ್ಥ್ಯತೆ ಪ್ರಮಾಣ ಪತ್ರಗಳನ್ನು ನೀಡುವುದಕ್ಕಾಗಿನ ಅಗತ್ಯತೆಗಳ ಅನುಸಾರ, ವಾಹನಗಳನ್ನು ಪುನ: ಉತ್ತಮಸ್ಥಿತಿಗೆ ತರುವುದು ಹಾಗೂ ಅಪಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಪ್ರಧಾನ/ಸಣ್ಣ ಹಾಗೂ ಪ್ರಧಾನ/ದೊಡ್ಡ ರಿಪೇರಿಗಳನ್ನು ಕೈಗೊಳ್ಳುತ್ತದೆ. ಈ ರಿಪೇರಿ ಕಾಮಗಾರಿಗಳನ್ನು ಇಲಾಖೀಯವಾಗಿ ಅಥವಾ ಗುತ್ತಿಗೆಗಳ ಮೂಲಕ ಮಾಡಲಾಗುತ್ತಿತ್ತು. ಅದು ಉಪಕರಣಗಳು/ಸಾಮಗ್ರಿಗಳು/ಬಿಡಿಭಾಗಗಳು, ಡೀಸೆಲ್ ಅನ್ನು ಲೆಕ್ಕ ಇಡುವುದು ಹಾಗೂ ಪಾವತಿಗಳು, ತುರ್ತು ಖರೀದಿಗಳು, ಅಪಘಾತ/ವಿಮಾ ಕೋರಿಕೆಗಳು, ಇವುಗಳನ್ನು ಒಳಗೊಂಡಿತ್ತು. ಇದರ ಜೊತೆಗೇ ವಿಭಾಗವು ಇತರೆ ಸಿಬ್ಬಂದಿ ವಿಷಯಗಳಿಗೂ ಜವಾಬ್ದಾರಿಯುತವಾಗಿತ್ತು. ವಿಭಾಗೀಯ ಕಚೇರಿಯನ್ನು ಸಂಬಂಧಿತ ಕಾರ್ಯಾಗಾರ, ಉಗ್ರಾಣಗಳು ಹಾಗೂ ಆರು ಬಸ್ಸು ಡಿಪೋಗಳಿಂದ 40 ಕಿಮೀಗಳಷ್ಟು ದೂರದಲ್ಲಿರುವ ಬೆಂಗಳೂರಿನಲ್ಲಿ ನಾಲ್ಕು ವರ್ಷಗಳ ಒಂದು ಅವಧಿಗೆ ಕಾರ್ಯಾಚರಣೆಗೊಳಿಸುವಂತಹ ತಾತ್ಕಾಲಿಕ ವ್ಯವಸ್ಥೆಯು ನಿಸ್ಸಂಶಯವಾಗಿಯೂ ವಿಭಾಗದ ಕಾರ್ಯದಕ್ಷತೆಯ ಮೇಲೆ ಪ್ರಭಾವ ಬೀರುವುದರಿಂದ, ವ್ಯವಸ್ಥಾಪನೆ ಹಾಗೂ ದಕ್ಷತೆಯ ವಿಷಯಗಳ ದೃಷ್ಟಿಯಿಂದ ಅದು ಸರಿಯಲ್ಲ,

ವಿಭಾಗೀಯ ಕಚೇರಿಯಲ್ಲಿ ಸುಮಾರು 80 ಉದ್ಯೋಗಿಗಳಿದ್ದಾರೆ ಹಾಗೂ ಅವರುಗಳಿಗೆ ಪ್ರತಿ ತಿಂಗಳಿಗೆ ಮೂಲ ವೇತನದ[110] ಶೇಕಡಾ 30ರಷ್ಟು ಮನೆ ಬಾಡಿಗೆ ಭತ್ಯೆ ಹಾಗೂ ₹ 350 ರಿಂದ ₹ 400ರವರೆಗೆ ನಗರ ಪರಿಹಾರ ಭತ್ಯೆಯನ್ನು ಪಾವತಿಸಲಾಗುತ್ತಿದೆ ಎಂಬುದನ್ನು ನಾವು ಗಮನಿಸಿದೆವು. ರಾಮನಗರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಶೇಕಡಾ 10ರ ಮನೆ ಬಾಡಿಗೆ ಭತ್ಯೆಗೆ ಅರ್ಹರಿರುತ್ತಾರೆ ಹಾಗೂ ನಗರ ಪರಿಹಾರ ಭತ್ಯೆ ಸಿಗುವುದಿಲ್ಲ. ವಿಭಾಗೀಯ ಕಚೇರಿಯನ್ನು ರಾಮನಗರಕ್ಕೆ ಸ್ಥಳಾಂತರಿಸುವಲ್ಲಿನ ನಿಗಮದ ವಿಫಲತೆಯು 2011–12ರಿಂದ 2013–14 ಸಾಲುಗಳಿಗೆ ಮನೆ ಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆಯ ಮೇಲೆ ₹ 80.28 ಲಕ್ಷ ಮೊತ್ತದಷ್ಟು ಹೆಚ್ಚುವರಿ ಹೊರೆಯನ್ನು ಹೊರುವಲ್ಲಿ ಪರಿಣಮಿಸಿತು.

ಕಟ್ಟಡದಲ್ಲಿ ಜಾಗವು ಲಭ್ಯವಿಲ್ಲದಿದ್ದುದರಿಂದ ಸ್ಥಳಾಂತರವು ವಿಳಂಬಗೊಂಡಿತು ಹಾಗೂ ರಾಮನಗರದಲ್ಲಿ ಈಗ ಇರುವ ಬಸ್ಸು ನಿಲ್ದಾಣದಲ್ಲಿ ವಿಭಾಗೀಯ ಕಚೇರಿಯನ್ನು ನಿರ್ಮಿಸಲು ನಿರ್ಣಯಿಸಲಾಗಿದೆ (ಏಪ್ರಿಲ್ 2014), ಕಾಮಗಾರಿಯನ್ನು ಓರ್ವ ಗುತ್ತಿಗೆದಾರರಿಗೆ ₹ 99.40 ಲಕ್ಷ ಮೊತ್ತಕ್ಕೆ ವಹಿಸಲಾಗಿದೆ (ಜುಲೈ 2014) ಹಾಗೂ ಅದನ್ನು ಮಾರ್ಚ್ 2015ರಲ್ಲಿ ಪೂರ್ಣಗೊಳಿಸಲು ನಿಗದಿಯಾಗಿದೆ ಎಂದು ನಿಗಮವು ಉತ್ತರಿಸಿತು (ಜುಲೈ 2014). ಸರ್ಕಾರವು ಇದೇ ಉತ್ತರವನ್ನು ನವೆಂಬರ್ 2014ರಲ್ಲಿ ಅನುಮೋದಿಸಿತು.

ಈ ರೀತಿಯಾಗಿ, ವಿಭಾಗೀಯ ಕಚೇರಿಯನ್ನು ರಾಮನಗರಕ್ಕೆ ಸ್ಥಳಾಂತರಿಸಲು ತಾನು ತೆಗೆದುಕೊಂಡ ನಿರ್ಣಯದ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುವಲ್ಲಿ ನಿಗಮವು ಮಾಡಿದ ವಿಳಂಬವು ₹ 80.28 ಲಕ್ಷ ಮೊತ್ತದಷ್ಟು ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

---

[109] ರಾಮನಗರ, ಚನ್ನಪಟ್ಟಣ, ಕನಕಪುರ, ಹಾರೋಹಳ್ಳಿ, ಮಾಗಡಿ ಹಾಗೂ ಆನೇಕಲ್.

[110] ಸೆಪ್ಟಂಬರ್ 2013ರವರೆಗೆ ಮೂಲವೇತನದ ಶೇಕಡಾ 25ರಷ್ಟು ಹಾಗೂ ತದನಂತರ ಶೇಕಡಾ 30ರಷ್ಟು.

## ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮಗಳು

### *3.18 ಬಾಕಿ ಇರುವ ವಿವರಣಾ ಟಿಪ್ಪಣಿಗಳು*

**3.18.1** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳು, ಸರ್ಕಾರದ ವಿವಿಧ ಕಚೇರಿಗಳು ಹಾಗೂ ಇಲಾಖೆಗಳಲ್ಲಿ ನಿರ್ವಹಿಸಿರುವ ಲೆಕ್ಕಪತ್ರಗಳು ಮತ್ತು ದಾಖಲೆಗಳ ಪ್ರಾರಂಭಿಕ ಪರೀಕ್ಷಣೆಯಿಂದ ಮೊದಲ್ಗೊಂಡಂತಹ ಪ್ರಕ್ರಿಯೆಯು ಮುಕ್ತಾಯಗೊಂಡುದನ್ನು ಪ್ರತಿನಿಧಿಸುತ್ತವೆ. ಆದ್ದರಿಂದ, ಅವು ಕಾರ್ಯಾಂಗದಿಂದ/ಆಡಳಿತಾಂಗದಿಂದ ಸೂಕ್ತ ಹಾಗೂ ಸಮಯೋಚಿತ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತವೆ. ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವ ಕಂಡಿಕೆಗಳು ಹಾಗೂ ಸಮೀಕ್ಷೆಗಳಿಗೆ ಅವುಗಳನ್ನು ಶಾಸಕಾಂಗದ ಮುಂದೆ ಮಂಡಿಸಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ, ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ ನೋಟೀಸು ಅಥವಾ ಕರೆಯನ್ನು ನಿರೀಕ್ಷಿಸದೇ ತೆಗೆದುಕೊಂಡಂತಹ ಅಥವಾ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿರುವ ತಪ್ಪುಗಳನ್ನು ಸರಿಪಡಿಸುವ/ದೋಷ ಪರಿಹಾರಕ ಕ್ರಮಗಳನ್ನು ಸೂಚಿಸಿ ವಿವರಣಾತ್ಮಕ ಟಿಪ್ಪಣಿಗಳನ್ನು ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿತ್ತು (ಜನವರಿ 1974).

2011–12 ಮತ್ತು 2012–13ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ಶಾಸಕಾಂಗಕ್ಕೆ ಅನುಕ್ರಮವಾಗಿ ಫೆಬ್ರವರಿ 2013 ಹಾಗೂ ಫೆಬ್ರವರಿ 2014ರಲ್ಲಿ ಮಂಡಿಸಲಾಯಿತು. ಅಕ್ಟೋಬರ್ 2014ರಲ್ಲಿದ್ದಂತೆ, ಇಲಾಖೆಗಳ[111] ಪೈಕಿ ಟೀಕೆಟಿಪ್ಪಣಿ ಮಾಡಲಾಗಿದ್ದ ಒಂದು ಇಲಾಖೆಯು ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟಗೊಂಡಿದ್ದ 20 ಕಂಡಿಕೆಗಳ ಪೈಕಿ ಒಂದಕ್ಕೆ ವಿವರಣಾತ್ಮಕ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

### *ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿಗಳಿಗೆ ಅನುಸರಣಾ ಕ್ರಮಗಳು*

**3.18.2** ನಿರ್ದೇಶನಗಳ ಪ್ರಕಾರ, ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಶಿಫಾರಸುಗಳ ಜೊತೆಯಲ್ಲಿ ಅನುಸರಣಾ ಕ್ರಮಗಳನ್ನು (ಕ್ರಮಗಳನ್ನು ತೆಗೆದುಕೊಂಡಂತಹ ಟಿಪ್ಪಣಿಗಳು/ಕ್ರಮಗಳನ್ನು ತೆಗೆದುಕೊಂಡಂತಹ ವರದಿ) ವರದಿಯನ್ನು ಶಾಸಕಾಂಗದ ಮುಂದೆ ಮಂಡಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಒದಗಿಸುವ ಅಗತ್ಯವಿತ್ತು. ರಾಜ್ಯ ಶಾಸಕಾಂಗಕ್ಕೆ ಡಿಸೆಂಬರ್ 2011 ಹಾಗೂ ನವೆಂಬರ್ 2013ರ ನಡುವೆ ಮಂಡಿಸಲಾದ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಐದು ವರದಿಗಳಿಗೆ[112] ಅಕ್ಟೋಬರ್ 2014ರಲ್ಲಿದ್ದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ.

## ಪರೀಕ್ಷಣಾ ವರದಿಗಳು, ಕರಡು ಕಂಡಿಕೆಗಳು ಹಾಗೂ ಸಮೀಕ್ಷೆಗಳಿಗೆ ಪ್ರತಿಕ್ರಿಯೆ

**3.19** ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಲೆಕ್ಕಪರಿಶೋಧನೆಯ ವೇಳೆಯಲ್ಲಿಯೇ ಇತ್ಯರ್ಥಗೊಳಿಸಲಾರದವುಗಳನ್ನು ರಾಜ್ಯ ಸರ್ಕಾರದ ಸಾ.ವ.ಉ.ಗಳ ಮುಖ್ಯಸ್ಥರಿಗೆ ಹಾಗೂ ಸಂಬಂಧಿತ ಇಲಾಖೆಗಳಿಗೆ ಪರೀಕ್ಷಣಾ ವರದಿಗಳ ಮೂಲಕ ತಿಳಿಸಲಾಗುತ್ತದೆ. ಸಾ.ವ.ಉ.ಗಳ ಮುಖ್ಯಸ್ಥರು ಪರೀಕ್ಷಣಾ ವರದಿಗಳಿಗೆ ಸಂಬಂಧಿತ ಇಲಾಖೆಗಳ ಮುಖ್ಯಸ್ಥರ ಮೂಲಕ ಒಂದು ತಿಂಗಳ ಒಳಗೆ ಉತ್ತರಗಳನ್ನು ಒದಗಿಸುವ ಅಗತ್ಯವಿರುತ್ತದೆ. 31 ಮಾರ್ಚ್ 2014ರಲ್ಲಿದ್ದಂತೆ ಬಾಕಿ ಇರುವ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಇಲಾಖಾವಾರು ವಿಂಗಡಣೆಯನ್ನು **ಅನುಬಂಧ–10ರಲ್ಲಿ** ನೀಡಲಾಗಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಯನಿರ್ವಹಣೆಯ ಮೇಲಿನ ಕರಡು ಕಂಡಿಕೆಗಳು ಮತ್ತು ಸಮೀಕ್ಷೆಗಳನ್ನು ಸಂಬಂಧಿತ ಆಡಳಿತಾತ್ಮಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ/ಕಾರ್ಯದರ್ಶಿಯವರಿಗೆ ವಾಸ್ತವಾಂಶಗಳು ಮತ್ತು ಅಂಕಿಸಂಖ್ಯೆಗಳ

[111] ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

[112] ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿ ಸಂಖ್ಯೆಗಳು 125ರಿಂದ 129.

ಸ್ಥಿರೀಕರಣವನ್ನು ಹಾಗೂ ಅವುಗಳ ಮೇಲೆ ಅವರುಗಳ ಟೀಕೆಟಿಪ್ಪಣಿಗಳನ್ನು ಕೋರಿ ಅರೆ–ಸರ್ಕಾರಿ ಪತ್ರದ ಜೊತೆಯಲ್ಲಿ ಕಳುಹಿಸಲಾಗುವುದು. ಎರಡು ಕಾರ್ಯನಿರ್ವಹಣಾ ಸಮೀಕ್ಷೆಗಳು ಹಾಗೂ ಹದಿನೇಳು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ವಿವಿಧ ಇಲಾಖೆಗಳಿಗೆ ಜೂನ್‌ನಿಂದ ಸೆಪ್ಟೆಂಬರ್ 2014ರ ಅವಧಿಯಲ್ಲಿ ಕಳುಹಿಸಿಕೊಡಲಾಗಿತ್ತು. ಸರ್ಕಾರವು ಎರಡೂ ಕಾರ್ಯನಿರ್ವಹಣಾ ಸಮೀಕ್ಷೆಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ಒದಗಿಸಿತು. ಆದಾಗ್ಯೂ, ಪ್ರವಾಸೋದ್ಯಮ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಹಾಗೂ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗಳಿಗೆ ಸಂಬಂಧಿಸಿದಂತೆ ಏಳು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಉತ್ತರಗಳು ಸ್ವೀಕೃತಗೊಂಡಿಲ್ಲ. ಎರಡೂ ಕಾರ್ಯನಿರ್ವಹಣಾ ಸಮೀಕ್ಷೆಗಳನ್ನೂ ಸರ್ಕಾರದ ಜೊತೆ ನಡೆಸಲಾದ ನಿರ್ಗಮನ ಸಭೆಯಲ್ಲಿ ಚರ್ಚಿಸಲಾಯಿತು. ಉತ್ತರಗಳು ಬಂದಿರುವೆಡೆಯಲ್ಲಿ, ಸಮೀಕ್ಷೆಗಳು/ಕಂಡಿಕೆಗಳನ್ನು ಅಂತಿಮ ರೂಪಕ್ಕೆ ತರುವ ವೇಳೆಯಲ್ಲಿ ಸರ್ಕಾರ/ಇಲಾಖೆಯ ಅಭಿಪ್ರಾಯಗಳನ್ನು ಪರಿಗಣಿಸಲಾಗಿದೆ.

ನಾವು ಶಿಫಾರಸ್ಸು ಮಾಡುವುದೇನೆಂದರೆ, (ಎ) ಪರೀಕ್ಷಣಾ ವರದಿಗಳಿಗೆ/ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಪ್ರತಿಕ್ರಿಯೆ ನೀಡುವಲ್ಲಿ ಹಾಗೂ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಶಿಫಾರಸುಗಳಿಗೆ, ಸರ್ಕಾರವು ರಚಿಸಿರುವ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಗಳ ಆಧಾರದ ಮೇರೆಗೆ, ಕ್ರಮಗಳನ್ನು ತೆಗೆದುಕೊಂಡಂತಹ ಟಿಪ್ಪಣಿಗಳ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲರಾಗುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಹಾಗೂ (ಬಿ) ನಷ್ಟಗಳು/ಬಾಕಿ ಇರುವ ಮುಂಗಡಗಳು/ಹೆಚ್ಚುವರಿಯಾಗಿ ಮಾಡಲಾಗಿರುವ ಪಾವತಿಗಳನ್ನು ನಿಗದಿತ ಸಮಯದಲ್ಲಿ ವಸೂಲಾತಿ ಮಾಡುವ ಕಾರ್ಯವಿಧಾನ ಇರುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

**ಬೆಂಗಳೂರು** **( ಎಲ್. ಅಂಗಮ್ ಚಂದ್ ಸಿಂಘ್ )**
**ದಿನಾಂಕ:** **ಪ್ರಧಾನ ಮಹಾಲೇಖಾಪಾಲರು**
**ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ**
**ಕರ್ನಾಟಕ**

**ಮೇಲುರುಜು ಮಾಡಲಾಗಿದೆ**

**ನವದೆಹಲಿ** **( ಶಶಿ ಕಾಂತ್ ಶರ್ಮ )**
**ದಿನಾಂಕ:** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**